ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 12 ಶನಿವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 118 | ಪುಟಗಳು: 12+VIII

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com




76
ಕರ್ನಾಟಕ ರಾಜ್ಯ ಜನಪ್ರಿಯ ಮುಖ್ಯಮಂತ್ರಿ
ಸನ್ಮಾನ್ಯ ಶ್ರೀ
ಸಿದ್ಧರಾಮಯ್ಯ ರವರ
ಜನುಮದಿನದ
ಹಾರ್ಧಿಕ ಶುಭಾಶಯಗಳು
ಎಂ.ದಕ್ಷಿಣಮೂರ್ತಿ ಎ.ಪಿ.ಎಂ.ಸಿ., ಮಾಜಿ ಅಧ್ಯಕ್ಷರ ಪುತ್ರ, ನಂಜನಗೂಡು


ಸಮೃದ್ಧ ಕರ್ನಾಟಕದ ಕನಸುಗಾರ
ಸಾಮಾಜಿಕ ನ್ಯಾಯದ ಹರಿಕಾರ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರಿಗೆ
76ನೇ ವರ್ಷದ
ಹುಟ್ಟುಹಬ್ಬದ ಶುಭಾಶಯಗಳು
ಡಾ॥ ಹೆಚ್.ವಿ. ಶುಶ್ರೂತ್ (ಗೌಡ)
ಮುಖ್ಯಸ್ಥರು, ನ್ಯೂರೋ ಜೋನ್
ಗೋಪಾಲಗೌಡ ಆಸ್ಪತ್ರೆ, ಮೈಸೂರು
ಹಾಗೂ ಕಾಂಗ್ರೆಸ್ ಯುವ ಮುಖಂಡರು


ಹುಟ್ಟುಹಬ್ಬದ
ಶುಭ ಕಾಮನೆಗಳು
ನನ್ನ ಆತ್ಮೀಯ
ಶ್ರೀ ಕಂಠೇಶ್ವರ ಸ್ವಾಮಿ
ಸನ್ನಿಧಿಯ ಪ್ರಧಾನ
ಆಗಮಿಕರಾದ
ಪೂಜ್ಯ ಶ್ರೀಯುತ
ಶ್ರೀ ನಾಗಚಂದ್ರ ದೀಕ್ಷಿತ್
ಗುರುಗಳಿಗೆ
ಜನ್ಮದಿನದ
ಶುಭಾಶಯಗಳು
ಶುಭಕೋರುವವರು: ಅಶ್ವತ್ ಭಾವಸಾರ್, ಮೈಸೂರು


ರಘುನಾಥ್.ಎಲ್
ಉಪ ನಿರ್ದೇಶಕರು (ಸಾಂಖ್ಯಿಕ)
ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ, ಬೆಂಗಳೂರು ರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು: ತಾಯಿ ಶ್ರೀಮತಿ ಹೆಚ್.ಕೆ.ಭಾಗ್ಯಮ್ಮ ಮತ್ತು ಕುಟುಂಬವರ್ಗದವರು
ಮಳವಳ್ಳಿ ಟೌನ್ ಹಾಗೂ ಸ್ನೇಹಿತರಾದ ತಿ.ನರಸೀಪುರ ತಾಲ್ಲೂಕು ತುರುಗನೂರು ಗ್ರಾಮದ
ಟಿ.ಎಸ್.ಪ್ರಸನ್ನ, ಪತ್ರಕರ್ತರು


ಕರ್ನಾಟಕ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಯಾದ
ಸನ್ಮಾನ್ಯ ಶ್ರೀ
ಸಿದ್ದರಾಮಯ್ಯ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಡಾ॥ ಹೆಚ್.ಸಿ.ಕೃಷ್ಣಕುಮಾರ್‌ಸಾಗರ್
ಪ್ರಧಾನ ಕಾರ್ಯದರ್ಶಿ
ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ


ಕರ್ನಾಟಕ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ
ಸನ್ಮಾನ್ಯ ಶ್ರೀ
ಸಿದ್ದರಾಮಯ್ಯ ರವರಿಗೆ
ಜನುಮದಿನದ
ಶುಭಾಶಯಗಳು
ಎಂ.ಕೆ. ಸೋಮಶೇಖರ್,
ಮಾಜಿ ಶಾಸಕರು,
ಕೃಷ್ಣರಾಜ ವಿಧಾನಸಭಾ ಕ್ಷೇತ್ರ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 12 ಶನಿವಾರ 2023

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 44 | ಸಂಚಿಕೆ: 118 | ಪುಟಗಳು: 12+VIII
ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಕ್ಕರೆ ಅದೇ ಸ್ವರ್ಗ

ತಂದೆ : ಸ್ವಾಮಿ ನನ್ನ ಮಗಳು ರಸ್ತೆಯಲ್ಲಿ ಹೋಗುವಾಗ ತಲೆ ತಗ್ಗಿಸಿ ಹೋಗುವ ಹಾಗೆ ಏನಾದ್ರೂ ಮಾರ್ಗ ಹೇಳಿ

ಸ್ವಾಮೀಜಿ: ನಿನ್ನ ಮಗಳಿಗೆ ದಿನಕ್ಕೆ 500 ಎಸ್‌ಎಂಎಸ್ ಫ್ರೀ ಇರುವ ಸಿಮ್‌ಕಾರ್ಡ್ ಕೊಡಿಸು. ತಲೆ ತಗ್ಗಿಸಿ ನಡೆಯುತ್ತಾಳೆ.

ಮೈಸೂರು ಮಿತ್ರ

ಶನಿವಾರ, 12 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನತದೃಷ್ಟನಾದವನ ಮುಂದೆ ನಿನ್ನ ಅದೃಷ್ಟದ ಬಗ್ಗೆ ಕೊಚ್ಚಿಕೊಳ್ಳಬೇಡ.

–ಪ್ಲೂಟಾರ್ಕ್

ವೇದ ಸುಳ್ಳಾದರೂ { ಅರಗು ಬಂಗಾರ ತಿಂತು
ಗಾದೆ ಸುಳ್ಳಾಗದು { ಕೊರಗು ತನ್ನ ತಿಂತು

ನಿಮ್ಮ ಪತ್ರಗಳು

ಅನೈರ್ಮಲ್ಯ ತೊಲಗಿಸಿ



ಮಾನ್ಯರೆ,

ಚಾಮರಾಜನಗರ ಜಿಲ್ಲೆಯ ಬದನಗುಪ್ಪೆ ಗ್ರಾಮ ಪಂಚಾಯಿತಿಗೆ ಸೇರಿರುವ ಮರಿಯಾಲ ಗ್ರಾಮದ ಡಾ.ಬಿ. ಆರ್ ಅಂಬೇಡ್ಕರ್ ಬಡಾವಣೆಯಲ್ಲಿ ಸ್ವಚ್ಛತೆ ಕಾಣದೆ ತೊಂಬೆ (ನೀರಿನ ಟ್ಯಾಂಕ್) ಮತ್ತು ಮೋರಿಗಳು (ಡ್ರೈನೇಜ್) ಅವ್ಯವಸ್ಥೆಯಿಂದ ಕೂಡಿದೆ. ದಿನನಿತ್ಯ ತೊಂಬೆಯ ನೀರನ್ನು ಸಾರ್ವಜನಿಕರು ಉಪಯೋಗಿಸುತ್ತಿದ್ದು, ಈ ತೊಂಬೆ ಪಾಚಿ ಕಟ್ಟಿದೆ. ಮೋರಿಯಲ್ಲಿ ತುಂಬಿರುವ ಕಸಗಳಿಂದ ವಿಪರೀತ ವಾಸನೆ ಬರುತ್ತಿದೆ. ಇಲ್ಲಿರುವ ಸಾರ್ವಜನಿಕರಿಗೆ ಮತ್ತು ಅಕ್ಕಪಕ್ಕದಲ್ಲಿರುವ ಕುಟುಂಬಗಳಿಗೆ ಇವುಗಳಿಂದ ಬರುವ ಕೆಟ್ಟ ವಾಸನೆ ಮತ್ತು ಸೊಳ್ಳೆಗಳು ಮತ್ತು ಕ್ರಿಮಿಕೀಟಗಳು ಹೆಚ್ಚಾಗುತ್ತಿರುವ ಕಾರಣ ರೋಗಗಳು ಹರಡುವ ಭೀತಿಯಲ್ಲಿ ಗ್ರಾಮದ ಜನರು ವಾಸಿಸುತ್ತಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಸ್ವಚ್ಛತೆ ಮಾಡಬೇಕೆಂದು ಈ ಮೂಲಕ ಮನವಿ.

–ನಾಗೇಶ್,ಮಾನಸಗಂಗೋತ್ರಿ, ಮೈಸೂರು.

ಈ ಬಾರಿಯ ದಸರಾ ದೇವನೂರ ಮಹಾದೇವ ಉದ್ಘಾಟಿಸಲಿ

ಮಾನ್ಯರೆ,



ನಾಡಿನ ಹೆಮ್ಮೆಯ ಪ್ರತೀಕ ವಿಜೃಂಭಣೆಯ ನಾಡಹಬ್ಬ, ವಿಶ್ವವಿಖ್ಯಾತ ಪಾರಂಪರಿಕ ಮೈಸೂರು ದಸರಾ ಉತ್ಸವವನ್ನು ಈ ಬಾರಿ ಅದ್ದೂರಿಯಾಗಿ ಆಚರಿಸಲು ಸಿದ್ಧತೆ ನಡೆಸಿರುವ ರಾಜ್ಯ ಸರ್ಕಾರದ ಆದ್ಯತೆಗೆ ಮೆಚ್ಚುಗೆ ಸಲ್ಲಿಸೋಣ. ಇದೇ ಸಂದರ್ಭದಲ್ಲಿ ಖ್ಯಾತ ಹಿರಿಯ ಸಾಹಿತಿ ಕನ್ನಡದ ಸಾಕ್ಷಿ ಪ್ರಜ್ಞೆ, ನಾಡು ಕಂಡ ಶ್ರೇಷ್ಠ ಸೃಜನ–ಸಂವೇದನಾ ಶೀಲ ಬರಹಗಾರರಲ್ಲಿ ಒಬ್ಬರಾದ ದೇವನೂರ ಮಹಾದೇವ ಅವರಿಂದ ಈ ಬಾರಿಯ ದಸರಾ ಉದ್ಘಾಟನೆಗೊಳ್ಳಲಿ.

ಇಡೀ ಕನ್ನಡ ಸಾಹಿತ್ಯದಲ್ಲೇ ದೇಮ ಅವರನ್ನು ಕನ್ನಡದ ವಿಲಿಯಮ್ ಶೇಕ್ಸ್‌ಪಿಯರ್ ಎಂದೇ ಕರೆಯಲಾಗುತ್ತದೆ. ಎಲ್ಲಾ ದೃಷ್ಟಿಕೋನಗಳಿಂದ ಅಳೆದು ತೂಗಿದರೂ ದೇಮ ಅವರ ಸಾಹಿತ್ಯ ಕೃತಿ, ಕಾದಂಬರಿಗಳು, ಚರ್ಚೆ, ಪ್ರತಿರೋಧ, ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ. ಇವರ ಸಾಹಿತ್ಯದ ಅಕ್ಷರಗಳು ಬೀರುವ ಪರಿಣಾಮ ಮಾತ್ರ ಅಗಾಧ. ಬಹುಶಃ ಇವರಷ್ಟು ವಿಮರ್ಶೆಗೆ ಒಳಪಟ್ಟಷ್ಟು ಇನ್ನೊಬ್ಬರು ಕನ್ನಡ ಸಾಹಿತ್ಯದಲ್ಲಿ ಇಲ್ಲವೇನೋ? ಮುಕ್ತ ಅಭಿಪ್ರಾಯ ವ್ಯಕ್ತಪಡಿಸುವ ಮುಖೇನ ಸಾಮಾಜಿಕ ಸ್ಪಂದನೆಯ ಅಂತಃಕರಣದ ಇವರು ನಮ್ಮ ನಡುವಿನ ಸುಂದರ ವ್ಯಕ್ತಿತ್ವದ ಹೆಮ್ಮೆ. ನಾಡಿನ ಕೋಟ್ಯಂತರ ಸಾಹಿತ್ಯ ಪ್ರಿಯರಲ್ಲಿ ಹಾಸು ಹೊಕ್ಕಾಗಿರುವ ಒಡಲಾಳ, ಕುಸುಮ ಬಾಲೆ, ಎದೆಗೆ ಬಿದ್ದ ಅಕ್ಷರ, ದ್ಯಾವನೂರು, ಅಮಾಸ, ಗಾಂಧಿ ಮತ್ತು ಮಾವೋ ಕಳೆದ ವರ್ಷ ದೇಶಾದ್ಯಂತ ಸಂಚಲನ ಮೂಡಿಸಿದೆ. ಆರ್‌ಎಸ್‌ಎಸ್ ಆಳ ಮತ್ತು ಅಗಲ ಅವರ ಜ್ಞಾನ ಪಾಂಡಿತ್ಯಕ್ಕೆ ಹಿಡಿದ ಕೈಗನ್ನಡಿ.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಧ್ಯಕ್ಷರಾಗಿ, ಪ್ರತಿಷ್ಠಿತ ಪ್ರಶಸ್ತಿಗಳಾದ ಕನ್ನಡ ರಾಜ್ಯೋತ್ಸವ, ಕೇಂದ್ರ ಸಾಹಿತ್ಯ ಅಕಾಡೆಮಿ, ಭಾರತೀಯ ಭಾಷಾ ಪರಿಷತ್, ಭಾರತ ಸರ್ಕಾರ ನೀಡುವ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಪುರಸ್ಕಾರಗಳು, ಮೈಸೂರು ವಿವಿಯಿಂದ ಗೌರವ ಡಾಕ್ಟರೇಟ್ ಪದವಿ ಪಡೆದು ಸಾಕಷ್ಟು ಗೌರವಯುತ ಸಾಧನೆ ಮಾಡಿರುವ ದೇವನೂರ ಮಹಾದೇವ ಅವರಿಂದ ಸಾಂಸ್ಕೃತಿಕ ಉತ್ಸವವಾಗಿರುವ ಮೈಸೂರು ದಸರಾ ಉದ್ಘಾಟನೆ ಮಾಡಿಸಲು ಸರ್ಕಾರ ಚಿಂತಿಸಿ ಘೋಷಿಸಲು ಸೂಕ್ತ ಸಮಯವಿದು.

– ಅನಿಲ್ ಕುಮಾರ್, ನಂಜನಗೂಡು.

8 ಕಿಮೀ ಓಡಿ ಕೊಲೆ ಆರೋಪಿಯನ್ನು ಪತ್ತೆ ಹಚ್ಚಿದ ಪೊಲೀಸ್ ಶ್ವಾನ 'ತಾರಾ'

ಮಾನ್ಯರೆ,

ದಾವಣಗೆರೆ ಜಿಲ್ಲೆಯಲ್ಲಿ ಇತ್ತೀಚೆಗೆ ನಡೆದ ಕೊಲೆ ಪ್ರಕರಣದ ಪ್ರಮುಖ ಆರೋಪಿಯನ್ನು ಪೊಲೀಸ್ ಇಲಾಖೆಯಲ್ಲಿರುವ ತಾರಾ ಎಂಬ ಶ್ವಾನವು ಕೃತ್ಯ ನಡೆದ ಕೆಲವೇ ಹೊತ್ತಿನಲ್ಲಿ, ಕೃತ್ಯದ ಸ್ಥಳದಿಂದ ಆರೋಪಿಯ ಬೆವರಿನ ವಾಸನೆಯನ್ನು ಗ್ರಹಿಸಿ ಸುಮಾರು ಎಂಟು ಕಿಮೀಗಳ ದೂರವನ್ನು ಕ್ರಮಿಸಿ ಮನೆಯಲ್ಲಿ ಇದ್ದ ಕೊಲೆ ಆರೋಪಿಯನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದೆ. ಬೆಲ್ಜಿಯಂ ಮೆಲೋನಿಯಸ್ ತಳಿಯ ಈ ಶ್ವಾನ ಕೊಲೆ ಮತ್ತು ಕಳ್ಳತನ ಮುಂತಾದ ಅಪರಾಧ ಪ್ರಕರಣಗಳು ಪತ್ತೆ ಹಚ್ಚುವಲ್ಲಿ ನಿಪುಣವಾಗಿದೆ. ಪೊಲೀಸರು ಭೇದಿಸಲಾಗದಷ್ಟು ಅಪರಾಧ ಕೃತ್ಯಗಳನ್ನು ಪೊಲೀಸ್ ಇಲಾಖೆಯ ಶ್ವಾನಗಳು ಪತ್ತೆ ಹಚ್ಚಿ ಇಲಾಖೆ ಹಿರಿಮೆಯನ್ನು ಹೆಚ್ಚಿಸುತ್ತಿದೆ. ಈಗ ತಾರಾ ಶ್ವಾನವು ಕೊಲೆ ಆರೋಪಿ ಹಿಡಿದು ಕೊಟ್ಟು ಇಲಾಖೆಯ ಗೌರವಕ್ಕೆ ಪಾತ್ರವಾಗಿದೆ. ಜಿಲ್ಲೆಯಲ್ಲಿ ಅಪರಾಧ ಕೃತ್ಯ ಎಸಗುವವರಿಗೆ ಸಿಂಹಸ್ವಪ್ನವಾಗಿದೆ.

–ಪವನ್ ಜಯರಾಂ, ಸಿದ್ದಯ್ಯನಪುರ, ಚಾ. ನಗರ

'ಗೂದೆ ಹಣ್ಣು'

ಮಾನ್ಯರೆ,

ಸೃಷ್ಟಿಯಲ್ಲಿ ಯಾವುದೂ ಸಣ್ಣದಲ್ಲ; ಯಾವುದೂ ನಿಕೃಷ್ಟವಲ್ಲ ಎಂಬುದಕ್ಕೆ ಸಾಂಕೇತಿಕ ನಿದರ್ಶನ, ಟೊಮೆಟೋ ಬೆಲೆಯೇರಿಕೆ ! (ಆ ಬಗೆಗೆ ನಾನಾ ವ್ಯಂಗ್ಯ ಚಿತ್ರಗಳು).

ಹಳ್ಳಿಗಳ ಮನೆಗಳ ಹಿತ್ತಲುಗಳಲ್ಲಿ, ತಿಪ್ಪೆ ಗುಂಡಿಗಳ ಮೇಲೆ ಟೊಮೆಟೋ ಹಣ್ಣುಗಳು ಗಿಡಗಳಲ್ಲಿ ಯಥೇಚ್ಛವಾಗಿರುತ್ತಿದ್ದುದನ್ನು ಚಿಕ್ಕಂದಿನಲ್ಲಿ ಕಂಡಿದ್ದೆವು. ಆದರೆ ಅವುಗಳನ್ನು ಅಡುಗೆಗೆ ಬಳಸುತ್ತಿರಲಿಲ್ಲ; 'ಗೂದೆ ಹಣ್ಣು' ಎಂದು ತಿರಸ್ಕಾರದಿಂದ ಕಾಣಲಾಗುತ್ತಿತ್ತು ! (ಅಂದ ಹಾಗೆ; 'ಗೂದೆ' ಕೂಡ ಇಂದು ಮೌಲಿಕವಲ್ಲವೆ? ಒಂದೊಂದಕ್ಕೂ, ಒಬ್ಬೊಬ್ಬರಿಗೂ ಒಂದೊಂದು ಕಾಲ. 'ಕಾಲಾಯ ತಸ್ಮೈನಮಃ!'

ಸಂಬಂಧ : ಎತ್ತಣ ಮಣಿಪುರ, ಎತ್ತಣ ಮೈಸೂರು? (ಪ್ರತಿಭಟನೆಗಳ ಮಹಾಪೂರ) ಎತ್ತಣ 'ಮೈಸೂರು ಪಾಕ್'? ಎತ್ತನಿಂದೆತ್ತ ಸಂಬಂಧ?

–ಸಿಪಿಕೆ, ಹಿರಿಯ ಸಾಹಿತಿಗಳು, ಮೈಸೂರು.

ಅತ್ಯಾಚಾರವೆಸಗಿದರೆ ಗಲ್ಲು ಶಿಕ್ಷೆ: ಬ್ರಿಟಿಷರ ಕಾಲದ ಕಾನೂನು ರದ್ದು

ಲೋಕಸಭೆಯಲ್ಲಿ ಅಪರಾಧ ತಿದ್ದುಪಡಿ ಕಾಯ್ದೆ ಮಂಡನೆ

ನವದೆಹಲಿ, ಆ.11– ದೇಶದಲ್ಲಿ ಕ್ರಿಮಿನಲ್ ನ್ಯಾಯ ವ್ಯವಸ್ಥೆಯನ್ನು ಸುಧಾರಿಸುವ ಉದ್ದೇಶದಿಂದ ಬ್ರಿಟಿಷರ ಕಾಲದ ಕಾನೂನುಗಳಾದ ಭಾರತೀಯ ದಂಡ ಸಂಹಿತೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಕಾಯಿದೆಗಳನ್ನು ಬದಲಿಸಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಶುಕ್ರವಾರ ಲೋಕಸಭೆಯಲ್ಲಿ ಮಸೂದೆಗಳನ್ನು ಮಂಡಿಸಿದ್ದಾರೆ.

ಭಾರತೀಯ ನ್ಯಾಯ ಸಂಹಿತಾ, 2023, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ, 2023, ಮತ್ತು ಭಾರತೀಯ ಸಾಕ್ಷಿ ಮಸೂದೆ, 2023 ಗಳನ್ನು ಹೆಚ್ಚಿನ ಪರಿಶೀಲನೆಗಾಗಿ ಸಂಸದೀಯ ಸಮಿತಿಗೆ ಕಳುಹಿಸಲಾಗುವುದು ಎಂದು ಶಾ ಹೇಳಿದರು.

ಈ ಸಂಬಂಧ ಮಾತನಾಡಿದ ಅಮಿತ್ ಶಾ, 1860ರಿಂದ 2023ರವರೆಗೆ, ದೇಶದ ಕ್ರಿಮಿನಲ್ ನ್ಯಾಯ ವ್ಯವಸ್ಥೆಯು ಬ್ರಿಟಿಷರು ಮಾಡಿದ ಕಾನೂನಿನಂತೆ ಕಾರ್ಯನಿರ್ವಹಿಸಿತು. ಈ ಹಿನ್ನೆಲೆ ಈ 3 ಕಾನೂನುಗಳನ್ನು ಬದಲಾಯಿಸಲಾಗುವುದು ಮತ್ತು ದೇಶದಲ್ಲಿ ಅಪರಾಧ ನ್ಯಾಯ ವ್ಯವಸ್ಥೆಯಲ್ಲಿ ಪ್ರಮುಖ ಬದಲಾವಣೆಯಾಗಲಿದೆ ಎಂದು ಕೇಂದ್ರ ಗೃಹ ಸಚಿವರು ಹೇಳಿದರು.

1860ರಲ್ಲಿ ಬ್ರಿಟಿಷರು ರೂಪಿಸಿದ ಐಪಿಸಿ, 160 ವರ್ಷಗಳಿಗೂ ಹೆಚ್ಚು ಕಾಲ ದೇಶದ ಅಪರಾಧ ನ್ಯಾಯ ವ್ಯವಸ್ಥೆಯ ಮೂಲವಾಗಿದೆ ಇದನ್ನು ಭಾರತೀಯ ನ್ಯಾಯ ಸಂಹಿತೆ, 2023ರಿಂದ ಬದಲಾಯಿಸಲಾಗುತ್ತದೆ. 1973ರ CrPC ಅನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ, 2023ರಿಂದ ಬದಲಾಯಿಸಲಾಗುತ್ತದೆ. ಹಾಗೂ, 1872ರ ಭಾರತೀಯ ಸಾಕ್ಷ್ಯ ಕಾಯ್ದೆಯನ್ನು ಭಾರತೀಯ ಸಾಕ್ಷಿ ಮಸೂದೆ, 2023ರಿಂದ ಬದಲಾಯಿಸಲಾಗುತ್ತದೆ ಎಂದು ವಿವರಿಸಿದರು.

ಈ ತಿದ್ದುಪಡಿ ಮಸೂದೆ ಉದ್ದೇಶ ಶಿಕ್ಷಿಸುವುದಲ್ಲ, ಅದು ನ್ಯಾಯವನ್ನು ಒದಗಿಸುವುದು. ಅಪರಾಧ ಮಾಡುವ ಭಾವನೆ ತಡೆಯುವ ಉದ್ದೇಶದಿಂದ ಶಿಕ್ಷೆ ನೀಡಲಾಗುವುದು ಎಂದು ಅಮಿತ್ ಶಾ ಹೇಳಿದರು. ಭಾರತೀಯ ದಂಡ ಸಂಹಿತೆ (IPC), ಕ್ರಿಮಿನಲ್ ಪ್ರೊಸೀಜರ್ ಕೋಡ್ (CrPC) ಮತ್ತು ಭಾರತೀಯ ಎವಿಡೆನ್ಸ್ ಕಾಯ್ದೆಯನ್ನು ಭಾರತೀಯ ನ್ಯಾಯ ಸಂಹಿತೆ ಬದಲಿಸುತ್ತದೆ ಎಂದು ತಿಳಿದುಬಂದಿದೆ.

ಅಲ್ಲದೆ, ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳನ್ನು ಪರಿಹರಿಸಲು ನವೀಕರಿಸಿದ ಕಾನೂನನ್ನು ಸ್ಥಾಪಿಸುವುದು ಈ ಮಸೂದೆಯ ಪ್ರಾಥಮಿಕ ಉದ್ದೇಶವಾಗಿದೆ ಎಂದೂ ಅಮಿತ್ ಶಾ ತಿಳಿಸಿದ್ದಾರೆ.

ಮಣಿಪುರ ಹೊತ್ತಿ ಉರಿಯುತ್ತಿರುವಾಗ ಸಂಸತ್ತಿನಲ್ಲಿ ಪ್ರಧಾನಿ ಮೋದಿಗೆ ನಗು: ರಾಹುಲ್ ಗಾಂಧಿ ಕಿಡಿ

ನವದೆಹಲಿ, ಆ.11– ಪ್ರಧಾನಿ ನರೇಂದ್ರ ಮೋದಿ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು, ಮಣಿಪುರವು ತಿಂಗಳುಗಟ್ಟಲೆ ಹೊತ್ತಿ ಉರಿಯುತ್ತಿರುವಾಗ ಸಂಸತ್ತಿನಲ್ಲಿ ನಗುವುದು ಮತ್ತು ಹಾಸ್ಯ ಚಟಾಕಿ ಹಾರಿಸುವುದು ದೇಶದ ಪ್ರಧಾನಿಗೆ ಸಲ್ಲದು ಎಂದು ಶುಕ್ರವಾರ ಕಿಡಿಕಾರಿದ್ದಾರೆ.



ಇಂದು ಸುದ್ದಿಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ರಾಹುಲ್ ಗಾಂಧಿ, ಲೋಕಸಭೆಯಲ್ಲಿ ಪ್ರತಿಪಕ್ಷಗಳು ಕೇಂದ್ರ ಸರ್ಕಾರದ ವಿರುದ್ಧ ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಿದ ಪ್ರಧಾನಿ ಮೋದಿ, ತಮ್ಮ ಎರಡು ಗಂಟೆಗಳ ಭಾಷಣದಲ್ಲಿ ಮಣಿಪುರದ ಕುರಿತು ಕೇವಲ ಎರಡು ನಿಮಿಷ ಮಾತನಾಡಿದ್ದಾರೆ ಎಂದು ಟೀಕಿಸಿದರು.

ನಾನು ನಿನ್ನೆ ಎರಡು ಗಂಟೆಗಳ ಕಾಲ ನಗುವುದು, ತಮಾಷೆ ಮಾಡುವುದು, ಘೋಷಣೆ ಕೂಗುತ್ತಾ ಮಾತನಾಡುವುದನ್ನು ನೋಡಿದೆ. ಮಣಿಪುರ ರಾಜ್ಯ ಹಲವು ತಿಂಗಳಿಂದ ಹೊತ್ತಿ ಉರಿಯುತ್ತಿದೆ ಎಂಬುದನ್ನು ಪ್ರಧಾನಿ ಮರೆತಂತಿದೆ ಎಂದು ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು.

ಸಂಸತ್ತಿನ ಮಧ್ಯದಲ್ಲಿ ಕುಳಿತಿದ್ದ ಪ್ರಧಾನಿ ಮೋದಿ ನಾಚಿಕೆಯಿಲ್ಲದೆ ನಗುತ್ತಿದ್ದರು. ಮಣಿಪುರ ಸಮಸ್ಯೆ ಕಾಂಗ್ರೆಸ್ ಅಥವಾ ನನ್ನದಲ್ಲ. ಅಲ್ಲಿ ಏನು ನಡೆಯುತ್ತಿದೆ ಮತ್ತು ಹಿಂಸಾಚಾರ ಏಕೆ ನಿಲ್ಲಿಸುತ್ತಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದರು.

ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ಮಣಿಪುರದಲ್ಲಿ ಭಾರತ ಮಾತೆಯನ್ನು ಕೊಂದಿದ್ದಾರೆ ಎಂಬ ತಮ್ಮ ಹೇಳಿಕೆ ಪೊಳ್ಳು ಮಾತುಗಳಲ್ಲ ಎಂದರು.

ಪ್ರಧಾನಿ ಮೋದಿ ಮಣಿಪುರ ಹೊತ್ತಿ ಉರಿಯಬೇಕು ಎಂದು ಬಯಸುತ್ತಾರೆ ಮತ್ತು ಆ ಬೆಂಕಿಯನ್ನು ನಂದಿಸಬಾರದು ಎಂಬುದು ಅವರ ಉದ್ದೇಶವಾಗಿದೆ ಎಂದು ರಾಹುಲ್ ಗಾಂಧಿ ಆರೋಪಿಸಿದರು.

ಭಾರತೀಯ ಸೇನೆಯು 2–3 ದಿನಗಳಲ್ಲಿ ಮಣಿಪುರದಲ್ಲಿ ಶಾಂತಿಯನ್ನು ಸ್ಥಾಪಿಸಬಹುದು. ಆದರೆ ಕೇಂದ್ರ ಸರ್ಕಾರ ಅಲ್ಲಿ ಸೇನೆ ನಿಯೋಜಿಸುತ್ತಿಲ್ಲ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿ ಅಗ್ನಿ ಅವಘಡ; ಹತ್ತಾರು ನೌಕರರಿಗೆ ಗಾಯ

ಬೆಂಗಳೂರು, ಆ.11– ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ)ಯ ಕೇಂದ್ರ ಕಚೇರಿಯ ಆವರಣದ ಕಟ್ಟಡವೊಂದರಲ್ಲಿ ಶುಕ್ರವಾರ ಸಂಜೆ ಅಗ್ನಿ ಅವಘಡ ಸಂಭವಿಸಿದ್ದು, 10ಕ್ಕೂ ಹೆಚ್ಚು ನೌಕರರು ಗಾಯಗೊಂಡಿದ್ದಾರೆ.



ಇಂದು ಸಂಜೆ ಗುಣಮಟ್ಟ ನಿಯಂತ್ರಣ ವಿಭಾಗದ ಲ್ಯಾಬ್ ಮತ್ತು ಕಚೇರಿ ಕಟ್ಟಡದಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಅಗ್ನಿಶಾಮಕ ಸಿಬ್ಬಂದಿಗೆ ಮಾಹಿತಿ ನೀಡಿದರೂ ಘಟನಾ ಸ್ಥಳಕ್ಕೆ ಅರ್ಧಗಂಟೆ ತಡವಾಗಿ ಬಂದ ಅಗ್ನಿಶಾಮಕ ದಳದ ಸಿಬ್ಬಂದಿ, ಬೆಂಕಿಯನ್ನು ಸಂಪೂರ್ಣ ನಂದಿಸಿದ್ದು, ಪರಿಸ್ಥಿತಿ ಹತೋಟಿಗೆ ಬಂದಿದೆ. ಘಟನೆಯಲ್ಲಿ ಬಿಎಂಪಿಯ 10ಕ್ಕೂ ಹೆಚ್ಚು ನೌಕರರಿಗೂ ಸುಟ್ಟು ಗಾಯಗಳಾಗಿದ್ದು, ಅವರನ್ನು ಸೇಂಟ್ ಮಾರ್ಥಾಸ್ ಆಸ್ಪತ್ರೆಗೆ ದಾಖಲಿಸಲಾಗಿದ್ದು, ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ. ಅದೃಷ್ಟವಶಾತ್ ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಘಟನಾ ಸ್ಥಳಕ್ಕೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಭೇಟಿನೀಡಿ ಪರಿಶೀಲನೆ ನಡೆಸಿದ್ದಾರೆ.

ಬಹುಭಾಷಾ ನಟಿ ಜಯಪ್ರದಾಗೆ ಆರು ತಿಂಗಳು ಜೈಲು ಶಿಕ್ಷೆ: 5 ಸಾವಿರ ರೂ. ದಂಡ ವಿಧಿಸಿದ ಕೋರ್ಟ್

ಚೆನ್ನೈ, ಆ.11– ಜನಪ್ರಿಯ ನಟಿ ಹಾಗೂ ಮಾಜಿ ಸಂಸದೆ ಜಯಪ್ರದಾ ಅವರಿಗೆ ಚೆನ್ನೈನ ಎಗ್ಮೋರ್ ಕೋರ್ಟ್ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಚೆನ್ನೈನ ರಾಯಪೇಟಾದಲ್ಲಿ ಆಕೆಯ ಒಡೆತನದ ಚಿತ್ರಮಂದಿರದ ನೌಕರರು ಸಲ್ಲಿಸಿದ ಅರ್ಜಿಗೆ ಸಂಬಂಧಿಸಿದಂತೆ ಆಕೆಗೆ 5,000 ರೂಪಾಯಿ ದಂಡವನ್ನೂ ವಿಧಿಸಲಾಗಿದೆ.



ಜಯಪ್ರದಾ ಅವರು ನಡೆಸುತ್ತಿದ್ದ ಚಿತ್ರಮಂದಿರದ ಕೆಲಸಗಾರರಿಗೆ ಸೂಕ್ತ ಇಎಸ್‌ಐ (ESI) ಹಣ ನೀಡಿಲ್ಲ ಎಂದು ಕೇಸ್ ದಾಖಲಾಗಿತ್ತು. ಅದರ ವಿಚಾರಣೆ ನಡೆಸಿರುವ ನ್ಯಾಯಾಲಯವು ಈ ತೀರ್ಪು ನೀಡಿದೆ. ಇಎಸ್‌ಐ ಹಣ ಪಾವತಿಸದ ಕಾರಣ ಜಯಪ್ರದಾ ವಿರುದ್ಧ ಕಾರ್ಮಿಕರು ಅಸಮಾಧಾನಗೊಂಡಿದ್ದರು.

ಈ ಹಿಂದೆ ಕೂಡ ಜಯಪ್ರದಾ ಥಿಯೇಟರ್ ಕಾಂಪ್ಲೆಕ್ಸ್‌ಗೆ ಸಂಬಂಧಿಸಿದಂತೆ ಸುಮಾರು 20 ಲಕ್ಷ ರೂಪಾಯಿ ತೆರಿಗೆ ಪಾವತಿಸಿರಲಿಲ್ಲ. ಆಗ ಸಿಟಿ ಸಿವಿಲ್ ನ್ಯಾಯಾಲಯದ ಆದೇಶದಂತೆ ಪಾಲಿಕೆ ಅಧಿಕಾರಿಗಳು ಥಿಯೇಟರ್‌ನ ಕುರ್ಚಿ, ಪ್ರೊಜೆಕ್ಟರ್‌ಗಳನ್ನು ಜಪ್ತಿ ಮಾಡಿದ್ದರು. ಈಗ ಮತ್ತೊಮ್ಮೆ ಜಯಪ್ರದಾ ಅವರಿಗೆ ಹಿನ್ನಡೆ ಆಗಿದೆ.

ಚೆನ್ನೈನಲ್ಲಿ ಜಯಪ್ರದಾ ಅವರು ರಾಮ್‌ಕುಮಾರ್ ಮತ್ತು ರಾಜ ಬಾಬು ಜೊತೆ ಸೇರಿ ಎರಡು ಚಿತ್ರಮಂದಿರಗಳನ್ನು ನಡೆಸುತ್ತಿದ್ದರು. ಅಲ್ಲಿ ಕೆಲಸ ಮಾಡುವ ಕಾರ್ಮಿಕರ ಸಂಬಳದಲ್ಲಿ ಚಿತ್ರಮಂದಿರದ ಆಡಳಿತ ಮಂಡಳಿಯವರು ಇಎಸ್‌ಐ ಹಣ ಕಡಿತ ಮಾಡಿಕೊಳ್ಳುತ್ತಿದ್ದರು.

ಆದರೆ ಅದನ್ನು ಸರ್ಕಾರಿ ಕಾರ್ಮಿಕರ ವಿಮಾ ನಿಗಮಕ್ಕೆ ಜಯಪ್ರದಾ ಪಾವತಿಸುತ್ತಿರಲಿಲ್ಲ. ತಮಗೆ ತಮ್ಮ ಪಾಲಿನ ಇಎಸ್‌ಐ ಸಿಗುತ್ತಿಲ್ಲ ಎಂದು ಕಾರ್ಮಿಕರೊಬ್ಬರು ತಕರಾರು ತೆಗೆದಿದ್ದರು. ಆಗ ಸರ್ಕಾರಿ ಕಾರ್ಮಿಕರ ವಿಮಾ ನಿಗಮವು ಜಯಪ್ರದಾ ವಿರುದ್ಧ ದೂರು ದಾಖಲಿಸಿತ್ತು.

ಲೋಕಸಭೆಯಲ್ಲಿ GST ತಿದ್ದುಪಡಿ ಮಸೂದೆ ಅಂಗೀಕಾರ

ಆನ್‌ಲೈನ್ ಗೇಮಿಂಗ್, ಕುದುರೆ ರೇಸ್ ಮೇಲೆ ಶೇ.28ರಷ್ಟು ತೆರಿಗೆ

ನವದೆಹಲಿ, ಆ.11– ಕೇಂದ್ರ ಸರ್ಕಾರ ಆನ್‌ಲೈನ್ ಗೇಮಿಂಗ್, ಕ್ಯಾಸಿನೊಗಳು ಮತ್ತು ಕುದುರೆ ರೇಸ್ ಕ್ಲಬ್‌ಗಳ ಮೇಲೆ ಶೇಕಡಾ 28ರಷ್ಟು ತೆರಿಗೆ ವಿಧಿಸಲು ಕೇಂದ್ರಿಯ ಮತ್ತು ಸಮಗ್ರ ಜಿಎಸ್‌ಟಿ ಕಾನೂನು ತಿದ್ದುಪಡಿ ಮಸೂದೆಯನ್ನು ಶುಕ್ರವಾರ ಲೋಕಸಭೆ ಅಂಗೀಕರಿಸಿದೆ.

ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವಮಾನತು ವಿರೋಧಿಸಿ ಪ್ರತಿಪಕ್ಷಗಳ ಪ್ರತಿಭಟನೆಯ ನಡುವೆಯೇ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನ ಮುಂಗಾರು ಅಧಿವೇಶನದ ಕೊನೆಯ ದಿನವಾದ ಇಂದು ಸದನದಲ್ಲಿ GST ಮಸೂದೆ ಮಂಡಿಸಿದರು.

ಕೇಂದ್ರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆ, 2023, ಮತ್ತು ಸಮಗ್ರ ಸರಕು ಮತ್ತು ಸೇವಾ ತೆರಿಗೆ (ತಿದ್ದುಪಡಿ) ಮಸೂದೆ, 2023 ಅನ್ನು ಲೋಕಸಭೆಯಲ್ಲಿ ಯಾವುದೇ ಚರ್ಚೆಯಿಲ್ಲದೆ ಧ್ವನಿ ಮತದ ಮೂಲಕ ಅಂಗೀಕರಿಸಲಾಗಿದೆ.

ಕ್ಯಾಸಿನೊಗಳು, ಕುದುರೆ ರೇಸಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಮೇಲಿನ ತೆರಿಗೆ ಕುರಿತು ಸ್ಪಷ್ಟತೆ ನೀಡಲು, 2017ರ CGST ಕಾಯಿದೆಯ ಶೆಡ್ಯೂಲ್ III ರಲ್ಲಿನ ನಿಬಂಧನೆಗಳಿಗೆ ತಿದ್ದುಪಡಿ ತರಲಾಗಿದೆ.

IGST ಕಾಯಿದೆಯಲ್ಲಿನ ತಿದ್ದುಪಡಿಯು ಆನ್‌ಲೈನ್ ಗೇಮಿಂಗ್‌ಗೆ GST ವಿಧಿಸುವ ನಿಬಂಧನೆಗೆ ಸಂಬಂಧಿಸಿದ್ದು. ಇಂತಹ ಗೇಮಿಂಗ್ ಘಟಕಗಳು ಭಾರತದಲ್ಲಿ GST ನೋಂದಣಿ ಮಾಡಿಸುವುದು ಅಗತ್ಯವಾಗಿದೆ.

ಇನ್ನು ವಿದೇಶಿ ಆನ್‌ಲೈನ್ ಗೇಮಿಂಗ್ ಪ್ಲಾಟ್‌ಫಾರ್ಮ್‌ಗಳು ನೋಂದಣಿ ಮತ್ತು ತೆರಿಗೆ ಪಾವತಿಯ ನಿಬಂಧನೆಗಳನ್ನು ಅನುಸರಿಸದಿದ್ದಲ್ಲಿ ಭಾರತದೊಳಗೆ ಈ ಗೇಮಿಂಗ್‌ಗಳಿಗೆ ಪ್ರವೇಶವನ್ನು ನಿರ್ಬಂಧಿಸಲಾಗುವುದು ಎಂಬುದನ್ನು ಈ ತಿದ್ದುಪಡಿಯಲ್ಲಿ ತಿಳಿಸಲಾಗಿದೆ.

ಬಿಜೆಪಿ ಆಡಳಿತಾವಧಿ ಕಳಪೆ ಕಾಮಗಾರಿ ವಿರುದ್ಧ ಕಠಿಣ ಕ್ರಮ

ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

ಬೆಂಗಳೂರು, ಆ.11(ಕೆಎಂಶಿ) –ಬಿಜೆಪಿ ಆಡಳಿತದಲ್ಲಿ ಕಳಪೆ ಕಾಮಗಾರಿ ನಡೆಸಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಇದರಲ್ಲಿ ಯಾವುದೇ ರಾಜೀ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿ ಅವರು, ಈಗಾಗಲೇ ಹಿಂದಿನ ಸರ್ಕಾರದಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ತನಿಖೆ ಆರಂಭವಾಗಿದೆ. ಕಾಮಗಾರಿಗಳಲ್ಲಿ ಲೋಪವಾಗದಿದ್ದರೆ ಅವರಿಗೆ ತಕ್ಷಣವೇ ಹಣ ಬಿಡುಗಡೆ ಮಾಡುತ್ತೇವೆ.

ಈಗಾಗಲೇ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರ ಬಾಕಿ ಹಣ ಬಿಡುಗಡೆ ಮಾಡುವ ಕೆಲಸ ಆರಂಭವಾಗಿದೆ. ಮೂರು ವರ್ಷದಿಂದ ಗುತ್ತಿಗೆದಾರರು ಹಣ ಪಡೆಯದೇ ಸುಮ್ಮನಿದ್ದರು.

ನಾವು ಬಂದ ತಕ್ಷಣ ಹಣಕ್ಕಾಗಿ ಬೆನ್ನು ಹತ್ತಿದ್ದಾರೆ. ಕಳಪೆ ಕಾಮಗಾರಿಯ ಬಗ್ಗೆ ತನಿಖೆ ಮಾಡಬೇಕೋ, ಬೇಡವೋ ಎಂದು ಪ್ರಶ್ನಿಸಿದರು. ಗುತ್ತಿಗೆದಾರರ ಸಂಘದವರೇ ಅಂದಿನ ಸರ್ಕಾರದ ವಿರುದ್ಧ 40% ಕಮಿಷನ್ ಆರೋಪ ಮಾಡಿದ್ದರು. ಅವರ ಆರೋಪದ ಸತ್ಯಾಸತ್ಯತೆ ಬಯಲಾಗಿ ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ ಎಂಬ ಉದ್ದೇಶದಿಂದ ತನಿಖೆ ನಡೆಸಲಾಗುತ್ತಿದೆ.

ಬಿಜೆಪಿಯವರು ಈ ರಾಜ್ಯ ಹಾಳು ಮಾಡಿದ್ದಾರೆ. ಈಗ ಭ್ರಷ್ಟಾಚಾರ ಮತ್ತು ಧರ್ಮರಾಜಕಾರಣದ ಬಗ್ಗೆ ಮಾತನಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ನಾವು ಕಮಿಷನ್ ಹಿಂದೆ ಬಿದ್ದಿಲ್ಲ, ಕಮಿಷನ್ ಹಗರಣದ ಹಿಂದಿರುವ ಭ್ರಷ್ಟರ ಬೆನ್ನು ಬಿದ್ದಿದ್ದೇವೆ ಎಂದು ತಿರುಗೇಟು ನೀಡಿದ್ದಾರೆ.

ಪ್ರತ್ಯೇಕವಾಗಿ ಮಾತನಾಡಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬೊಮ್ಮಾಯಿ ಅವರಿಗಾಗಲೀ, ಅಶೋಕ್ ಅವರಿಗಾಗಲೀ ಅವರ ಸರ್ಕಾರದಲ್ಲಿ ಗುತ್ತಿಗೆದಾರರ ಬಿಲ್ ಪಾವತಿ ಮಾಡಲು ಯಾರು ಅಡ್ಡಿ ಮಾಡಿದ್ದರು? ಅವರ ಬಳಿ ಹಣ ಇರಲಿಲ್ಲವೇ? ಕೆಲಸ ಸರಿ ಇರಲಿಲ್ಲವೇ? ಈ ಪ್ರಶ್ನೆಗೆ ಬಿಜೆಪಿ ನಾಯಕರು ಮೊದಲು ಉತ್ತರ ನೀಡಲಿ. ಉಳಿದಂತೆ ಗುತ್ತಿಗೆದಾರರಿಗೆ ನಾನು ಉತ್ತರ ನೀಡುತ್ತೇನೆ ಎಂದರು.

ನಮ್ಮ ಸರ್ಕಾರ ಬಂದ ನಂತರ ಮುಖ್ಯಮಂತ್ರಿಗಳು, ಕೆಂಪಣ್ಣ ಅವರ ದೂರಿನ ಆಧಾರದ ಮೇಲೆ ಕೆಲಸ ಆಗಿದೆಯೇ ಇಲ್ಲವೇ ಎಂದು ನೈಜತೆ ಪರಿಶೀಲನೆ ಮಾಡಿ ಎಂದು ತಿಳಿಸಿದರು.

ಇನ್ನು ಬಿಜೆಪಿ ನಾಯಕರು ಕೂಡ ಸದನದಲ್ಲಿ ಗುತ್ತಿಗೆ ಕಾಮಗಾರಿಗಳಲ್ಲಿ ಆಗಿರುವ ಅಕ್ರಮಗಳ ಬಗ್ಗೆ ತನಿಖೆ ಮಾಡಿ ಎಂದು ನಮ್ರತೆಯಿಂದ ತನಿಖಾ ಸಮಿತಿ ರಚನೆ ಮಾಡಿದ್ದೇವೆ ಕಾಮಗಾರಿಗಳ ಕೆಲಸ ಆಗಿದೆಯೇ ಇಲ್ಲವೇ ಎಂದು ಪರಿಶೀಲನೆ ಮಾಡಲು ಸಮಿತಿಗೆ ಸೂಚಿಸಿದ್ದೇವೆ. ಇನ್ನು 10–15% ಕಮಿಷನ್ ಕೇಳುತ್ತಿದ್ದಾರೆ ಎಂಬ ಆರೋಪ ಮಾಡಲಾಗಿದೆ. ಈ ಕಮಿಷನ್ ಯಾರು ಕೇಳಿದ್ದಾರೆ? ಡಿ.ಕೆ. ಶಿವಕುಮಾರ್ ಕೇಳಿದ್ದಾನಾ? ಸಿದ್ದರಾಮಯ್ಯ ಕೇಳಿದ್ದಾರಾ? ಮಂತ್ರಿಗಳು, ಶಾಸಕರು ಕೇಳಿದ್ದಾರಾ? ಅಧಿಕಾರಿಗಳು ಕೇಳಿದ್ದಾರಾ? ಎಂದು ಹೇಳಲಿ.

ನಾನು ಯಾರ ಬಳಿಯಾದರು ಕಮಿಷನ್ ಕೇಳಿದ್ದರೆ ಇಂದೇ ರಾಜಕಾರಣದಿಂದ ನಿವೃತ್ತಿಯಾಗುತ್ತೇನೆ. ನಾನು ಕೇಳಿಲ್ಲವಾದರೆ ಬೊಮ್ಮಾಯಿ, ಅಶೋಕ್ ರಾಜಕೀಯ ನಿವೃತ್ತಿ ಘೋಷಣೆ ಮಾಡುತ್ತಾರಾ? ನಾನು ಅವರ ಸ್ಥಾನ ಹಾಗೂ ಹಿರಿತನಕ್ಕೆ ಗೌರವ ನೀಡಬೇಕು ನೀಡುತ್ತೇನೆ. ಅಶೋಕ್ ಏನೆಲ್ಲಾ ಮಾತನಾಡಿದ್ದಾರೆ ಎಂಬುದು ಗೊತ್ತಿದೆ. ನನಗೆ ನನ್ನದೇ ಆದ ವ್ಯಕ್ತಿತ್ವ ಇದೆ.

ತನಿಖೆ ಒಂದೆರಡು ಕಡೆ ಮಾತ್ರ ಮಾಡುವುದಿಲ್ಲ. ಎಲ್ಲ ಕಡೆ ಮಾಡಲಾಗುತ್ತದೆ. ಕೆಲಸ ಮಾಡಿದ್ದರೆ ಬಿಲ್ ಪಾವತಿ ಆಗಲಿದೆ. ಈಗ ಒಂದೆರಡು ತಿಂಗಳು ಕಾಯಲು ಆಗುವುದಿಲ್ಲವೇ?

ಗುತ್ತಿಗೆದಾರರು ನೇಣು ಹಾಕಿಕೊಳ್ಳುವುದು ಬೇಡ, ದಯಾ ಮರಣ ಕೇಳುವುದೂ ಬೇಡ. ಅವರ ಹಿಂದೆ ಯಾರಿದ್ದಾರೆ ಎಂದು ಗೊತ್ತಿದೆ. ಪ್ರಜಾಪ್ರಭುತ್ವದಲ್ಲಿ ಇಂತಹ ಆರೋಪ ಪ್ರತ್ಯಾರೋಪ ಸಹಜ. ಗುತ್ತಿಗೆದಾರರು ರಾಜ್ಯಪಾಲರು, ಅಶೋಕ್, ಕುಮಾರಸ್ವಾಮಿ ಎಲ್ಲರನ್ನೂ ಕೇಳುತ್ತಿದ್ದಾರೆ. ನಾನು ಅಧಿಕಾರಿಗಳ ಬಳಿ ಮಾಹಿತಿ ಕೇಳಿದ್ದೇನೆ ಎಂದರು.

ರಾಜ್ಯದ ಮೊದಲ ಮಹಿಳಾ ಕಮಿಷನರ್ IPS ರೇಣುಕಾ ಸುಕುಮಾರ್ ಅಧಿಕಾರ ಸ್ವೀಕಾರ

ಹುಬ್ಬಳ್ಳಿ, ಆ.11– ಹುಬ್ಬಳ್ಳಿ–ಧಾರವಾಡ ಕಮಿಷನರೇಟ್‌ಗೆ ಮೊದಲ ಮಹಿಳಾ ಪೊಲೀಸ್ ಆಯುಕ್ತರಾಗಿ ಐಪಿಎಸ್ ಅಧಿಕಾರಿ ರೇಣುಕಾ ಸುಕುಮಾರ್ ಗುರುವಾರ ಅಧಿಕಾರ ಸ್ವೀಕರಿಸಿದರು. ರೇಣುಕಾ ಅವರು ಪೊಲೀಸ್ ಆಯುಕ್ತ ಹುದ್ದೆ ಸ್ವೀಕರಿಸಿದ ಮೊದಲ ಮಹಿಳೆ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಈ ಹಿಂದೆ ಕೆ.ಸಂತೋಷ ಬಾಬು ಅವರು ಹುಬ್ಬಳ್ಳಿ–ಧಾರವಾಡದ ಪ್ರಭಾರಿ ಆಯುಕ್ತರಾಗಿದ್ದರು. ಇದೀಗ ರೇಣುಕಾ ಸುಕುಮಾರ್ ಅವರನ್ನು ಸರ್ಕಾರ ಈ ಸ್ಥಾನಕ್ಕೆ ವರ್ಗ ಮಾಡಿ ಆದೇಶಿಸಿದೆ. ಈ ಹಿನ್ನೆಲೆಯಲ್ಲಿ ರೇಣುಕಾ ಅಧಿಕಾರ ಸ್ವೀಕರಿಸಿದರು.



ಈ ಹಿಂದೆ ಹುಬ್ಬಳ್ಳಿ – ಧಾರವಾಡ ಕಮಿಷನರೇಟ್‌ನಲ್ಲಿ ಡಿಸಿಪಿಯಾಗಿ ಕಾರ್ಯ ನಿರ್ವಹಿಸಿದ್ದರು.

ಸಿದ್ದರಾಮಯ್ಯ ಹುಟ್ಟುಹಬ್ಬ ಅಂಗವಾಗಿ ಸೇವಾ ಕಾರ್ಯ

ಮೈಸೂರು, ಆ. 11– ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಅಂಗವಾಗಿ ನಾಳೆ (ಆ. 12) ಬೆಳಗ್ಗೆ 8 ಗಂಟೆಗೆ ಸುಮಿತ್ರ ಸ್ಟೀಲ್ ಮಾಲೀಕ ಹೆಚ್.ಸಿ. ಕೃಷ್ಣಕುಮಾರ್ ಸಾಗರ್ ಅವರು ಚಾಮುಂಡೇಶ್ವರಿಬೆಟ್ಟದಲ್ಲಿ ವಿಶೇಷ ಪೂಜೆ ಸಲ್ಲಿಸಿ 101 ತೆಂಗಿನಕಾಯಿ ಒಡೆಯಲಿದ್ದಾರೆ. ನಂತರ 58ನೇ ವಾರ್ಡ್‌ನ ಸಾಯಿಬಾಬಾ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಸಿದ್ದರಾಮಯ್ಯನವರ ಕಟೌಟ್‌ಗೆ ಹಾಲಿನ ಅಭಿಷೇಕ ಮಾಡಲಿದ್ದು, ಶ್ರೀರಾಂಪುರ ಕಂದಾಯ ಬಡಾವಣೆಯಲ್ಲಿರುವ ನವಚೇತನ ಸೇವಾ ಟ್ರಸ್ಟ್‌ನಲ್ಲಿರುವ ವಿಶೇಷ ಮಕ್ಕಳಿಗೆ ಬೆಳಗ್ಗಿನ ಉಪಾಹಾರ ವ್ಯವಸ್ಥೆ ಕಲ್ಪಿಸಿದ್ದಾರೆ. ವರುಣ ಮಹೇಶ್ ಅಭಿಮಾನಿಗಳು ಗೌರಿಶಂಕರ ನಗರದಲ್ಲಿರುವ ಕುಷ್ಠರೋಗಿಗಳಿಗೆ ಬೆಡ್‌ಶೀಟ್ ವಿತರಣೆ, ಬದನವಾಳು ಗಾಂಧಿ ಗ್ರಾಮದಲ್ಲಿ ಚರಕ ನೇಯ್ಗೆಯವರಿಗೆ ಸೀರೆ ವಿತರಣೆ, ಮಾರಶೆಟ್ಟಿಹಳ್ಳಿ ಗ್ರಾಮದ ಶಾಲಾ ಮಕ್ಕಳಿಗೆ ಹಾಗೂ ಬೋಗಯ್ಯನಹುಂಡಿ ಗ್ರಾಮದ ಶಾಲಾ ಮಕ್ಕಳಿಗೆ ನೋಟ್‌ಬುಕ್ ಮತ್ತು ಬ್ಯಾಗ್ ವಿತರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ವಸ್ತ್ರ ಉತ್ಸವ

ಮೈಸೂರು, ಆ.11(ಎಸ್‌ಪಿಎನ್)–ಮೈಸೂರಿನ ಹೆಬ್ಬಾಳಿನ ಕೈಗಾರಿಕಾ ಪ್ರದೇಶದ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಶುಕ್ರವಾರದಿಂದ ಆ.20ರವರೆಗೆ 'ವಸ್ತ್ರ ಉತ್ಸವ'– 2023ಕ್ಕೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು.



ಕೈಮಗ್ಗ ಉತ್ಪನ್ನ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಚಾಲನೆ ನೀಡಿದ ಮಾತನಾಡಿದ ಶಾಸಕ ಟಿ.ಎಸ್.ಶ್ರೀವತ್ಸ ಅವರು, ನೇಕಾರರು ಮತ್ತು ನೇಕಾರ ಸಹಕಾರ ಸಂಘಗಳು ತಯಾರು ಮಾಡಿರುವ ಕೈಮಗ್ಗ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆಯನ್ನು ಒದಗಿಸುವ ದೃಷ್ಟಿಯಿಂದ ಇಂತಹ ಪ್ರದರ್ಶನ ಮತ್ತು ಮಾರಾಟ ಮೇಳಗಳ ಆಯೋಜನೆ ಅವಶ್ಯಕವಾಗಿದೆ ಎಂದು ತಿಳಿಸಿದರು.

ಕೈಮಗ್ಗ ನೇಕಾರರು ಮತ್ತು ಕರಕುಶಲಕರ್ಮಿಗಳು ತಾವು ತಯಾರು ಮಾಡಿದ ಉತ್ಪನ್ನಗಳನ್ನು ಒಂದೇ ಸೂರಿನಡಿ ಮಾರಾಟ ಮಾಡಲು ಜೆಎಸ್‌ಎಸ್ ಅರ್ಬನ್ ಹಾತ್ ವತಿಯಿಂದ ಅವಕಾಶ ಮಾಡಿಕೊಡಲಾಗಿದೆ. ವಸ್ತ್ರ ಉತ್ಸವ–2023ಯಲ್ಲಿ 75ಕ್ಕೂ ಹೆಚ್ಚು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳು ಉತ್ಪಾದಿಸಿರುವ ಉತ್ಪನ್ನಗಳಿಗೆ ಅವಕಾಶ ಕಲ್ಪಿಸಿರುವುದು ಸಂತೋಷದ ಸಂಗತಿ. ಪ್ರದರ್ಶನ ಮತ್ತು ಮಾರಾಟಕ್ಕೆ ಚಾಲನೆ ನೀಡುತ್ತಿರುವುದು ನನ್ನ ಸೌಭಾಗ್ಯ ಎಂದು ತಿಳಿಸಿದರು.

ವರಲಕ್ಷ್ಮೀ ಹಬ್ಬ ಹತ್ತಿರ ಬರುತ್ತಿರುವುದರಿಂದ ಮೈಸೂರು ಮತ್ತು ಸುತ್ತಮುತ್ತಲಿನ ಜನತೆ ಜೆಎಸ್‌ಎಸ್ ಅರ್ಬನ್ ಹಾತ್‌ಗೆ ಆಗಮಿಸಿ ನೇಕಾರರ ಕುಟುಂಬ ಉತ್ಪಾದಿಸಿರುವ ವಸ್ತುಗಳನ್ನು ಖರೀದಿಸಬೇಕೆಂದು ಮನವಿ ಮಾಡಿದರು. ಜೆಎಸ್‌ಎಸ್ ವತಿಯಿಂದ ಶಿಕ್ಷಣ, ಆರೋಗ್ಯ ಸೇರಿದಂತೆ ಇತರೆ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ಮುಂದುವರೆಸಿದ್ದು, ಸಂಕಷ್ಟದಲ್ಲಿರುವ ನೇಕಾರರ ಕುಟುಂಬಗಳಿಗೆ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿರುವ ಅವಕಾಶ ಕಲ್ಪಿಸಲಾಗಿದೆ ಎಂದರು.

ಉತ್ಪನ್ನಗಳು: ಕರ್ನಾಟಕದ ರೇಷ್ಮೆ ಸೀರೆ, ಮೊಳಕಾಲ್ಮೂರು ಸೀರೆ, ಇಳಕಲ್ ಸೀರೆ, ಕಸೂತಿ ಸೀರೆ ಕಾಂಜೀವರಂ ಸೀರೆಗಳು, ಕೇರಳ ರಾಜ್ಯದ ಕೈಮಗ್ಗ ಉತ್ಪನ್ನಗಳು, ಬಿಹಾರ್ ತಸ್ಕರ್ ಸೀರೆಗಳು, ಪಶ್ಚಿಮ ಬಂಗಾಳದ ಕಾಂತಾ ಸೀರೆ, ಬಲಚುರಿ ಸೀರೆ, ಭುಟಿಕ್ ಸೀರೆ, ಬನಾರಸಿ ಸಿಲ್ಕ್ ಸೀರೆಗಳು, ಚಿಕನ್ ಎಂಬ್ರಾಡರಿ ಸೀರೆಗಳು, ಮಧ್ಯಪ್ರದೇಶದ ಚಂದೇರಿ, ಮಹೇಶ್ವರಿ ಸಿಲ್ಕ್ ಸೀರೆಗಳು, ಒರಿಸ್ಸಾ ರಾಜ್ಯದ ಸಂಬಲ್ಪುರಿ ಸೀರೆ, ಕಾಶ್ಮೀರಿ ಶಾಲು, ಆಂಧ್ರ ಪ್ರದೇಶದ ಕಲಮ್ಕಾರಿ ಸೀರೆಗಳು, ಪೂಚಂಪಲ್ಲಿ ಸೀರೆಗಳು ಗುಜರಾತ್ ರಾಜ್ಯದ ಪಟೋಲಾ ಸೀರೆಗಳು, ವಿವಿಧ ರಾಜ್ಯಗಳ ಡ್ರೆಸ್ ಮೆಟೀರಿಯಲ್‌ಗಳು ಹಾಗೂ ಕರಕುಶಲ ಕರ್ಮಿಗಳು ತಯಾರು ಮಾಡಿರುವ ವಸ್ತುಗಳು ಒಂದೇ ಸೂರಿನಡಿ ಮೈಸೂರಿನ ಜನತೆಗೆ ದೊರೆಯುತ್ತವೆ.

ಲೆಕ್ಕ ಪರಿಶೋಧಕ ವಿಭಾಗದ ನಿರ್ದೇಶಕ ಕೆ.ಆರ್. ಸಂತಾನಂ, ಯೋಜನಾಧಿಕಾರಿ ಎಂ ಶಿವನಂಜಸ್ವಾಮಿ, ಸಂಯೋಜನಾಧಿಕಾರಿ ಎ. ರಾಕೇಶ್ ರೈ, ಸುಂದರಪ್ಪ, ಮಲ್ಲಿಕಾರ್ಜುನ ಸ್ವಾಮಿ, ಬಿಜೆಪಿ ಮುಖಂಡರಾದ ಜೋಗಿ ಮಂಜು ಸೇರಿದಂತೆ ಇತರರು ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 12 ಶನಿವಾರ 2023

ಸಂಪುಟ: 44 | ಸಂಚಿಕೆ: 118 | ಪುಟಗಳು: 12+VIII

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಇಂದು ಮೈಸೂರಿಗೆ ಸಿಎಂ ಸಿದ್ದರಾಮಯ್ಯ



ಮೈಸೂರು, ಆ.11(ಎಸ್‌ಪಿಎನ್)– ಮೈಸೂರು ದಸರಾ ವಸ್ತು ಪ್ರದರ್ಶನ ಆವರಣದಲ್ಲಿ ಶನಿವಾರ (ಆ.12) ಆರಂಭವಾಗುವ ರಾಜ್ಯ ಮಟ್ಟದ ವಕೀಲರ 10ನೇ ಸಮ್ಮೇಳನದಲ್ಲಿ ಭಾಗಿಯಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶನಿವಾರ ಆಗಮಿಸಲಿದ್ದಾರೆ.

ಬೆಂಗಳೂರು ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಬೆಳಗ್ಗೆ 10ಕ್ಕೆ ವಿಶೇಷ ವಿಮಾನದಲ್ಲಿ ಹೊರಟು ಮೈಸೂರಿನ ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ.

ಸಮ್ಮೇಳನದಲ್ಲಿ ಭಾಗವಹಿಸಿದ ನಂತರ ಸಂಜೆ 4ಕ್ಕೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ವಾಪಸಾಗಲಿದ್ದಾರೆ.

ಹೆಚ್.ಕೆ. ಪಾಟೀಲ್ ಆಗಮನ: ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರ, ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ಅವರು ಸಮ್ಮೇಳನದಲ್ಲಿ ಭಾಗಿಯಾಗಲಿದ್ದು, ನಂತರ ಸಂಜೆ 5 ಗಂಟೆಗೆ ಕೆಆರ್‌ಎಸ್ ಡ್ಯಾಂ ಹಿನ್ನೀರಿನ ಬಳಿ(ಪಾಂಡವಪುರ ತಾಲೂಕಿನ ಗಿರಿಯರಹಳ್ಳಿ) ಆಯೋಜಿಸಿರುವ ಅಂತಾರಾಷ್ಟ್ರೀಯ ಜಲಕ್ರೀಡೆ ಸಮ್ಮೇಳನದಲ್ಲಿ ಪಾಲ್ಗೊಂಡು, ರಾತ್ರಿ 10.30ಕ್ಕೆ ಮೈಸೂರಿನಿಂದ ಹುಬ್ಬಳ್ಳಿಗೆ ರೈಲು ಮೂಲಕ ಪ್ರಯಾಣ ಬೆಳೆಸಲಿದ್ದಾರೆ.

ಇಂದಿನ 'ಮೈಸೂರು ಮಿತ್ರ' ಸಂಚಿಕೆಯೊಂದಿಗೆ 8 ಪುಟಗಳ ಎಕ್ಸ್‌ಟ್ರಾ ಇನ್ನಿಂಗ್ಸ್ ನೀಡಲಾಗುತ್ತಿದ್ದು, ಇದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಹುಟ್ಟುಹಬ್ಬದ ಪ್ರಯುಕ್ತ ವಿಶೇಷ ಲೇಖನವೂ ಇದೆ.

ಬಾಕಿ 37.9 ಟಿಎಂಸಿ ನೀರು ತಕ್ಷಣ ಬಿಡುಗಡೆ ಮಾಡಿ

● ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ ಸಭೆಯಲ್ಲಿ ತಮಿಳ್ನಾಡು ತಂಟೆ
● ಕರ್ನಾಟಕದ ವಿವರಣೆಗೂ ಕಿವಿಗೊಡದೆ ಗದ್ದಲ; ಹೊರ ನಡೆದ ಅಧಿಕಾರಿಗಳು

ನವದೆಹಲಿ, ಆ.11– ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ದೆಹಲಿಯ ಜಲ ಆಯೋಗದ ಕಚೇರಿಯಲ್ಲಿ ಶುಕ್ರವಾರ ನಡೆದ 'ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರ'ದ ಸಭೆಯಲ್ಲಿ ಗದ್ದಲ ಏರ್ಪಟ್ಟಿದೆ. ಕರ್ನಾಟಕದ ಅಧಿಕಾರಿಗಳ ವಿವರಣೆಗೂ ಕಿವಿಗೊಡದೆ ನೀರು ಬಿಡುಗಡೆಗೆ ಪಟ್ಟು ಹಿಡಿದ ತಮಿಳುನಾಡು ಅಧಿಕಾರಿಗಳು ಸಭೆಯಿಂದಲೇ ಹೊರ ನಡೆದ ಘಟನೆಯೂ ನಡೆದಿದೆ. ಕರ್ನಾಟಕ ನೀರು ಬಿಡುತ್ತಿಲ್ಲ. ಕರ್ನಾಟಕದ ಅಧಿಕಾರಿಗಳು ಮನವಿಗೆ ಸ್ಪಂದಿಸುತ್ತಿಲ್ಲ ಎಂದು ತಮಿಳುನಾಡು ಅಧಿಕಾರಿಗಳು ಸಭೆಯಲ್ಲಿ ಆರೋಪ ಮಾಡಿದರು.

ಇದೇ ವೇಳೆ, ಮಳೆ ಕೊರತೆಯಿಂದಾಗಿ ಕಾವೇರಿ ನದಿಯಲ್ಲಿ ನೀರು ಕಡಿಮೆ ಇರುವ ಬಗ್ಗೆ ಮನವರಿಕೆ ಮಾಡಿಕೊಡಲು ಕರ್ನಾಟಕದ ಅಧಿಕಾರಿಗಳು ಮುಂದಾದರು. ಕಾವೇರಿ ಕಣಿವೆಯ ವಾಸ್ತವ ಚಿತ್ರಣವನ್ನು ಮುಂದಿಟ್ಟರು. ಮಳೆ ಕೊರತೆಯ ಬಗ್ಗೆ ಕರ್ನಾಟಕದ ಅಧಿಕಾರಿಗಳು ಮಾಹಿತಿ ನೀಡಿದಾಗ, ತಮಿಳುನಾಡು ಜಲಸಂಪನ್ಮೂಲ



ಕಾರ್ಯದರ್ಶಿ ಸಂದೀಪ್ ಸಕ್ಸೇನಾ ನೇತೃತ್ವದಲ್ಲಿ ಅಲ್ಲಿನ ಅಧಿಕಾರಿಗಳು ಸಭೆಯಿಂದ ಹೊರನಡೆದರು. ಸುದ್ದಿಗಾರರೊಂದಿಗೆ ಮಾತನಾಡಿದ ಸಕ್ಸೇನಾ, ಕರ್ನಾಟಕವು ಆಗಸ್ಟ್ 9ರವರೆಗೆ ಬಾಕಿ ಇರುವ 37.9 ಟಿಎಂಸಿ ಕೊರತೆಯ ನೀರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು. ಪ್ರತಿದಿನ ನೀರು ಬಿಡಲು ಪ್ರಾಧಿಕಾರವು ಕರ್ನಾಟಕಕ್ಕೆ ನಿರ್ದೇಶನ ನೀಡಬೇಕು ಎಂದು ಆಗ್ರಹಿಸಿದರು. ತಮಿಳುನಾಡು ಪಾಲಿನ ನೀರನ್ನು ಕರ್ನಾಟಕ ಬಾಕಿ ಉಳಿಸಿಕೊಂಡಿದೆ. ಕರ್ನಾಟಕ ಜೂನ್ ತಿಂಗಳಿನಿಂದ ಆಗಸ್ಟ್ 9ರವರೆಗೆ ಹರಿಸುವ 37.9 ಟಿಎಂಸಿ ನೀರು ಬಾಕಿ ಉಳಿಸಿಕೊಂಡಿದೆ. ಕೂಡಲೇ ಈ ಬಾಕಿ ನೀರನ್ನು ಬಿಡಬೇಕು ಎಂದು ಸಭೆಯಲ್ಲಿ ತಮಿಳುನಾಡು ಅಧಿಕಾರಿಗಳು ಒತ್ತಡ ಹೇರಿದರು. ಆದರೆ, ಈ ಬೇಡಿಕೆಗೆ ಕರ್ನಾಟಕ ಅಧಿಕಾರಿಗಳು ಒಪ್ಪಲಿಲ್ಲ.

ಕರ್ನಾಟಕದ ಅಧಿಕಾರಿಗಳ ವಿವರಣೆ: ಕರ್ನಾಟಕದಲ್ಲಿ ಈ ಬಾರಿ ವಾಡಿಕೆ ಮಳೆಯಾಗಿಲ್ಲ. ಅದರಲ್ಲೂ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ಕೊರತೆ ಇದೆ. ಈ ಕಾರಣದಿಂದಾಗಿ ಜಲಾಶಯಗಳು ಭರ್ತಿಯಾಗಿಲ್ಲ. ಜಲಾಶಯಗಳಲ್ಲಿ ನೀರು ಇಲ್ಲದಿರುವಾಗ ಎಲ್ಲಿಂದ ಬಿಡುವುದು? ಮುಂಗಾರು ಮಳೆ ಸರಿಯಾಗಿ ಆಗಿದ್ದರೆ ನೀರು ಬಿಡುತ್ತಿದ್ದೆವು. ಇದನ್ನು ಮಳೆ ಕೊರತೆಯ ವರ್ಷವೆಂದು ಪರಿಗಣಿಸಬೇಕು ಎಂದು ಕರ್ನಾಟಕದ ಅಧಿಕಾರಿಗಳು ಮನವಿ ಮಾಡಿದರು. ಆಗಸ್ಟ್ 4 ರಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದು, ಕಾವೇರಿ ನೀರು ಬಿಡುಗಡೆ ವಿಚಾರದಲ್ಲಿ ಮಧ್ಯ ಪ್ರವೇಶಿಸುವಂತೆ ಮನವಿ ಮಾಡಿದ್ದರು. ಭತ್ತ ಬೆಳೆಗೆ ನೀರಿನ ತುರ್ತು ಅಗತ್ಯ ಇದೆ. ಕಾವೇರಿ ಡೆಲ್ಟಾದ ರೈತರ ಉಳಿವಿಗಾಗಿ ತಕ್ಷಣ ಗಮನಹರಿಸಬೇಕು ಎಂದು ಕೋರಿದ್ದರು.

ಬೆಂಗಳೂರು–ಮೈಸೂರು ಉಪನಗರ ರೈಲು ಯೋಜನೆ ಜಾರಿ

● ಎರಡನೇ ಹಂತದಲ್ಲಿ ಕಾಮಗಾರಿ ಆರಂಭ ● ಹಾಲಿ ಹಳಿಯ ಬದಿಯಲ್ಲೇ ಉಪನಗರ ರೈಲು ಯೋಜನೆ ಜಾರಿ; ಇದೂ ಸಹ ಡಬ್ಲಿಂಗ್ ● ಉಪನಗರ ರೈಲು ಯೋಜನೆಯಿಂದ ಗ್ರಾಮೀಣ ಜನತೆಗೆ ಅನುಕೂಲ



ಬೆಂಗಳೂರು, ಆ.11(ಕೆಎಂಶಿ)– ಬೆಂಗಳೂರು–ಮೈಸೂರು ನಡುವೆ ಉಪನಗರ ರೈಲು ಯೋಜನೆ ಅನುಷ್ಠಾನಗೊಳಿಸುವುದಾಗಿ ಮೂಲಸೌಕರ್ಯ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.

ಬೆಂಗಳೂರು ನಗರ ಹೊರವಲಯದಲ್ಲಿ ಉಪನಗರ ರೈಲ್ವೆ ಯೋಜನೆ ಕಾಮಗಾರಿ ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಹಿತಿ ತಂತ್ರಜ್ಞಾನ ನಗರ ಮತ್ತು ಅರಮನೆ ನಗರ ನಡುವೆ ಪ್ರಯಾಣಿಕರ ಅನುಕೂಲಕ್ಕಾಗಿ ಈ ಯೋಜನೆ ಹಮ್ಮಿಕೊಳ್ಳಲಾಗುತ್ತಿದೆ. ರಾಜಧಾನಿಯಿಂದ ಮೈಸೂರು, ತುಮಕೂರು, ಗೌರಿಬಿದನೂರು ಹಾಗೂ ಕೋಲಾರ ನಗರ



ಗಳನ್ನು ಸಂಪರ್ಕಿಸಲು ಅನುಕೂಲವಾಗುವಂತೆ ಯೋಜನೆ ರೂಪಿಸಲಾಗುತ್ತದೆ. ಈಗಾಗಲೇ 15767 ಕೋಟಿ ರೂ. ವೆಚ್ಚದಲ್ಲಿ ಮೊದಲ ಹಂತದ ಕಾಮಗಾರಿ ಆರಂಭವಾಗಿದೆ. ಎರಡನೇ ಹಂತದಲ್ಲಿ ಮೈಸೂರು ನಗರಕ್ಕೆ ಉಪನಗರ ರೈಲು ವಿಸ್ತರಣೆಗೆ ವಿಸ್ತೃತ ಯೋಜನೆಯ ವರದಿ ಸಿದ್ಧಪಡಿಸಲು ರೈಲ್ವೆ ಮಂತ್ರಾಲಯವನ್ನು ಕೋರಲಾಗಿದೆ. ಅನುಮತಿ ದೊರೆತ ತಕ್ಷಣವೇ ಯೋಜನೆ ಸಿದ್ಧಪಡಿಸಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಬೆಂಗಳೂರು–ಮೈಸೂರು ಹಾಲಿ ● 6ನೇ ಪುಟಕ್ಕೆ

ಹಣ ನೀಡದಿದ್ದರೆ ಆತ್ಮಹತ್ಯೆ ಹಾದಿ: ಸರ್ಕಾರಕ್ಕೆ ಗುತ್ತಿಗೆದಾರರ ಸಂಘ ಎಚ್ಚರಿಕೆ

● ಎಸ್‌ಐಟಿ ತನಿಖೆಗೆ ತೀವ್ರ ವಿರೋಧ ● 25 ಸಾವಿರ ಕೋಟಿ ಬಾಕಿ ಬರಬೇಕಿದೆ

ಬೆಂಗಳೂರು, ಆ.11(ಕೆಎಂಶಿ)– ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ ಎಸ್‌ಐಟಿ ತನಿಖೆಗೆ ವಿರೋಧ ವ್ಯಕ್ತಪಡಿಸಿರುವ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮಾಡಿರುವ ಕೆಲಸದ ಹಣ ಬಿಡುಗಡೆ ಮಾಡದಿದ್ದರೆ ಆತ್ಮಹತ್ಯೆ ಹಾದಿ ತುಳಿಯಬೇಕಾಗುತ್ತದೆ ಎಂದು ರಾಜ್ಯ ಸರ್ಕಾರಕ್ಕೆ ಇಂದಿಲ್ಲಿ ಎಚ್ಚರಿಕೆ ನೀಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಮಾಡುವ ಕಾಮಗಾರಿಗೆ ಒಂದು ವರ್ಷ ಮಾತ್ರ ಗ್ಯಾರಂಟಿ. ಈ ಸರ್ಕಾರ ನಾಲ್ಕು ವರ್ಷದ ಹಳೆಯ ಕಾಮಗಾರಿಯಿಂದ ಹಿಡಿದು ಇಲ್ಲಿಯವರೆಗೆ ತನಿಖೆ ಮಾಡಿಸುವುದರಲ್ಲಿ ಅರ್ಥವಿಲ್ಲ.

ಗ್ಯಾರಂಟಿ ಅವಧಿ ಮುಗಿದ ಬಳಿಕ ತನಿಖೆ ಮಾಡಿದರೆ ಸರ್ಕಾರಕ್ಕೆ ಯಾವುದೇ ಲಾಭವಿಲ್ಲ. ಅದರ ಬದಲು ಕಳೆದ ಒಂದು ವರ್ಷದಿಂದ ಈಚೆಗೆ ನಡೆದಿರುವ ಕಾಮಗಾರಿಗಳ ತನಿಖೆಗೆ ನಮ್ಮ ವಿರೋಧವಿಲ್ಲ.

ನಾವು ಮಾಡಿರುವ ಕೆಲಸಕ್ಕೆ ಸರ್ಕಾರದಿಂದ 25 ಸಾವಿರ ಕೋಟಿ ರೂ. ಬಾಕಿ ಬರಬೇಕಿದೆ. ತನಿಖೆ ನೆಪದಲ್ಲಿ ಬಾಕಿ ಬಿಲ್ ಪಾವತಿಸದಿದ್ದರೆ, ಗುತ್ತಿಗೆದಾರರು ಆತ್ಮಹತ್ಯೆ ಹಾದಿ ತುಳಿಯುತ್ತಾರೆ. ● 6ನೇ ಪುಟಕ್ಕೆ

ಗುಣಮಟ್ಟದ ಕೆಲಸ ಮಾಡಲು ಬಿಡದೇ ಪರ್ಸೆಂಟ್‌ಗಾಗಿ ಕಾಡಿದರು

ಬೆಂಗಳೂರು, ಆ.11(ಕೆಎಂಶಿ) –ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಅವರ ಸಂಪುಟದಲ್ಲಿ ಜಲ ಸಂಪನ್ಮೂಲ ಸಚಿವರಾಗಿದ್ದ ಗೋವಿಂದ ಕಾರ್ಜೋಳ ವಿರುದ್ಧ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಏಕವಚನದಲ್ಲಿ ಹರಿಹಾಯ್ದಿದ್ದಾರೆ. ಅಧಿಕಾರ ದುರುಪಯೋಗ ಮಾಡಿಕೊಂಡು ಗುಣಮಟ್ಟದ ಕೆಲಸ ಮಾಡಲು



ಅವಕಾಶ ನೀಡದೇ ದೊಡ್ಡ ಪ್ರಮಾಣದ ಪರ್ಸೆಂಟ್‌ಗಾಗಿ ಇವರು ನಿಂತಿದ್ದರು ಎಂದು ದೂರಿದ್ದಾರೆ. ನಮ್ಮ ಸಮಸ್ಯೆಗಳನ್ನು ಆಲಿಸುವಷ್ಟು ಬೊಮ್ಮಾಯಿ ಅವರಿಗೆ ಸಮಯ ಇರಲಿಲ್ಲ. ಈಗ ನಮ್ಮ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡುತ್ತಿದ್ದಾರೆ. ನಾನು ಅವರ ಅಪ್ಪನ ಕಾಲದಿಂದಲೂ ಗುತ್ತಿಗೆ ಕೆಲಸ ಮಾಡಿಕೊಂಡು ಬಂದವನು. ದಲಿತ ನಾಯಕರು ಮುಖ್ಯಮಂತ್ರಿ ಆಗಬೇಕು ಎಂಬ ● 6ನೇ ಪುಟಕ್ಕೆ

ಮೈಸೂರು ಮಿತ್ರ

ಸೆ.2ರವರೆಗೆ ಗುರುರಾಯರ ಆರಾಧನೆ

ಮೈಸೂರು, ಆ.11– ಮೈಸೂರಿನ ಉದಯಗಿರಿಯಲ್ಲಿರುವ ಶ್ರೀ ರಾಮಧಾಮದಲ್ಲಿ ಆಗಸ್ಟ್ 10ರಿಂದ ಸೆಪ್ಟೆಂಬರ್ 2ರವರೆಗೆ ಶ್ರೀ ರಾಘವೇಂದ್ರ ಗುರುಸಾರ್ವಭೌಮರ 352ನೇ ಆರಾಧನಾ ಮಹೋತ್ಸವ ಜರುಗಲಿದೆ. ಆ.3ರಂದು ಸಂಜೆ 6ರಿಂದ 7.30ರವರೆಗೆ ಶ್ರೀ ವಿಶ್ವೇಶಕೃಷ್ಣ ಭಜನಾಮಂಡಳಿ ವತಿಯಿಂದ ದಾಸರ ಕೀರ್ತನೆಗಳು, ಸೆ.1ರಂದು ಸಂಜೆ 6ಕ್ಕೆ ಮೈಸೂರು ಅರಮನೆ ಆಸ್ಥಾನ ವಿದ್ವಾನ್ ಡಾ.ಹರೀಶ್‌ಕುಮಾರ್ ಅವರಿಂದ ಸ್ಯಾಕ್ಸೋಫೋನ್ ಜುಗಲ್‌ಬಂದಿ, ಸೆ.2ರಂದು ವಿದ್ವಾನ್ ರಾಘವೇಂದ್ರ ರತ್ನಾಕರ್ ಅವರಿಂದ ಭಕ್ತಿ ಸಂಗೀತ ನಡೆಯಲಿದೆ. ಪ್ರತಿ ಗುರುವಾರ ರಂಗಪೂಜೆ, ಪಲ್ಲಕ್ಕಿ ಉತ್ಸವ, ಹುಣ್ಣಿಮೆಯಂದು ಸಾಮೂಹಿಕ ಸತ್ಯ ನಾರಾಯಣ ಪೂಜೆ, ಸಂಕಷ್ಟಹರ ಚೌತಿ, ಪ್ರದೋಷ ಪೂಜೆ, ಪುನರ್ವಸು ಪೂಜೆ ನೆರವೇರಲಿದೆ.



ರಾಜ್ಯ ಸ್ಕೌಟ್ಸ್ ಅಂಡ್ ಗೈಡ್ಸ್ ಆಯುಕ್ತ ಪಿಜಿಆರ್ ಸಿಂಧ್ಯಾ ಅವರು ಶುಕ್ರವಾರ ಸುತ್ತೂರು ಶ್ರೀಗಳನ್ನು ಭೇಟಿಯಾಗಿ, ಸ್ಕೌಟ್ ಅಂಡ್ ಗೈಡ್ಸ್ ಸಂಬಂಧ ಚರ್ಚೆ ನಡೆಸಿದರು. ಸ್ಕೌಂಟ್ ಅಂಡ್ ಗೈಡ್ಸ್ ಮೈಸೂರು ಜಿಲ್ಲಾ ಆಯುಕ್ತ ವಿಶ್ವನಾಥ್, ಅಸಿಸ್ಟೆಂಟ್ ಕಮಿಷನರ್ ಮೆಹುಲ್ ಜೆ.ಪಟೇಲ್, ಜಮೀಲ್, ಮಂಡ್ಯದ ಆಯುಕ್ತ ವರಪ್ರಸಾದ್, ಬಸವರಾಜು ಉಪಸ್ಥಿತರಿದ್ದರು.

ಐದನೇ ಪುಟದಿಂದ

ಉಪನಗರ ರೈಲು ಯೋಜನೆ ಜಾರಿ

ರೈಲ್ವೆ ಹಳಿಗಳ ಬದಿಯಲ್ಲೇ ಉಪನಗರ ರೈಲ್ವೆ ಯೋಜನೆ ಅನುಷ್ಠಾನಗೊಳ್ಳಲಿದೆ. ಈ ಮಾರ್ಗವು ಕೂಡ ಡಬ್ಲಿಂಗ್ ಆಗಿರುತ್ತದೆ. ಹಳೆಯ ಮಾರ್ಗಕ್ಕೂ ಉದ್ದೇಶಿತ ಮಾರ್ಗಕ್ಕೂ ಸಂಬಂಧವಿಲ್ಲ. ಹಳೆಯ ಮಾರ್ಗದಲ್ಲಿ ಎಂದಿನಂತೆ ಬೆಂಗಳೂರಿನಿಂದ ಮೈಸೂರಿಗೆ ಎಕ್ಸ್‌ಪ್ರೆಸ್ ರೈಲುಗಳು ಸಂಚರಿಸಲಿವೆ. ಹಾಲಿ ರೈಲುಗಳು ಸಣ್ಣಪುಟ್ಟ ನಗರಗಳಲ್ಲಿ ನಿಲುಗಡೆ ಇಲ್ಲ. ಇದರಿಂದ ಗ್ರಾಮೀಣ ಪ್ರಯಾಣಿಕರಿಗೆ ತೊಂದರೆ ಆಗುತ್ತದೆ. ಉಪನಗರ ರೈಲು ಅನುಷ್ಠಾನಗೊಳಿಸುವುದರಿಂದ ಗ್ರಾಮೀಣ ಜನತೆ ನಗರಗಳಲ್ಲಿ ಉದ್ಯೋಗ ಮಾಡುವವರು ಪ್ರಯಾಣಿಸಲು ಅನುಕೂಲವಾಗಲಿದೆ. ನಾಲ್ಕು ನಗರಗಳ ನಡುವೆ ಸಂಪರ್ಕ ಇರುವುದರಿಂದ ನಿರಂತರವಾಗಿ ರೈಲುಗಳು ಸಂಚರಿಸುತ್ತವೆ.

ಇದರಿಂದ ಕೃಷಿ, ವಾಣಿಜ್ಯ ಮತ್ತು ಪ್ರವಾಸೋದ್ಯಮ ಬೆಳವಣಿಗೆಗೆ ಸಹಕಾರಿ ಆಗಲಿದೆ ಎಂದು ಅಭಿಪ್ರಾಯಪಟ್ಟರು. ಮಹತ್ವಾಕಾಂಕ್ಷಿ ಬೆಂಗಳೂರು ಉಪನಗರ ರೈಲ್ವೆ ಯೋಜನೆಯಲ್ಲಿ ಚಿಕ್ಕ ಬಾಣಾವರ ಮತ್ತು ಬೆನ್ನಿಗಾನಹಳ್ಳಿ ನಡುವೆ ನಡೆಯುತ್ತಿರುವ ಕಾರಿಡಾರ್–2 ಕಾಮಗಾರಿಗಳನ್ನು 26 ತಿಂಗಳಲ್ಲಿ ಮುಗಿಸಲಾಗುವುದು. ಒಟ್ಟಾರೆಯಾಗಿ, ನಾಲ್ಕೂ ಕಾರಿಡಾರ್‌ಗಳ ಕೆಲಸಗಳು 2026ಕ್ಕೆ ಮುಗಿಸುವ ಉದ್ದೇಶ ಇದೆ. ಸ್ವಲ್ಪ ತಡ ಅಂದರೂ 2028ರೊಳಗೆ ಸಂಪೂರ್ಣಗೊಳಿಸಲಾಗುವುದು. ಈ ಗಡುವು ಇಟ್ಟುಕೊಂಡು ಕಾರ್ಯನಿರ್ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಹೇಳಿದರು. ಕಾರಿಡಾರ್–2 ಯೋಜನೆಗೆ 157 ಎಕರೆ ಭೂಮಿಯನ್ನು ನೈರುತ್ಯ ರೈಲ್ವೆಯಿಂದ ಗುತ್ತಿಗೆಗೆ ಪಡೆದುಕೊಳ್ಳಲಾಗಿದೆ. ಮಿಕ್ಕಂತೆ ಹಳಿ ಹಾಕಲು 5.11 ಎಕರೆ ಖಾಸಗಿ ಸ್ವತ್ತನ್ನು ವಶಪಡಿಸಿಕೊಳ್ಳಲಾಗಿದೆ. ಯೋಜನೆಗೆ 7.73 ಎಕರೆ ಸರಕಾರಿ ಜಮೀನು ಬೇಕಿದ್ದು, ಇದರಲ್ಲಿ 2.72 ಎಕರೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗಿದೆ ಎಂದರು. ಒಟ್ಟಾರೆ ಈ ಕಾರಿಡಾರ್‌ನಲ್ಲಿ ಇದುವರೆಗೂ ಶೇ.10ರಿಂದ ಶೇ.15ರಷ್ಟು ಕಾಮಗಾರಿ ಮುಗಿದಿದೆ. ಹತ್ತು ತಿಂಗಳಲ್ಲಿ ನೆಲಮಟ್ಟದ ಕಾಮಗಾರಿಗಳು ಪೂರ್ಣವಾಗಲಿ. ಶಾಂಪುರದಲ್ಲಿಯೂ ರೈಲ್ವೆ ಕೆಳಸೇತುವೆ ಕೆಲಸ ಮುಗಿಸಲಾಗವುದು ಎಂದು ವಿವರಿಸಿದರು. ಮುಂದಿನ ಹಂತದಲ್ಲಿ ಹೀಳಲಿಗೆ–ರಾಜಾನುಕುಂಟೆ, ಕಾರಿಡಾರ್–3ರಲ್ಲಿ ಬೆಂಗಳೂರು–ದೇವನಹಳ್ಳಿ (ವಿಮಾನ ನಿಲ್ದಾಣ ಸಂಪರ್ಕ) ಮತ್ತು ಕಾರಿಡಾರ್–4ರಲ್ಲಿ ಕೆಂಗೇರಿ– ವೈಟ್‌ಫೀಲ್ಡ್ ಬೆಸೆಯಲಾಗುವುದು. ಇದು ಕಾರ್ಯಗತವಾದರೆ ಯೋಜನೆಯು ಈಗಿನ 148 ಕಿ.ಮೀ.ಗಳಿಂದ 452 ಕಿ.ಮೀ.ಗಳಿಗೆ ಹಿಗ್ಗಲಿದೆ ಎಂದು ಅವರು ಮಾಹಿತಿ ನೀಡಿದರು. ಕಾರಿಡಾರ್–2ರಲ್ಲಿ ಬರುವ 12 ನಿಲ್ದಾಣಗಳನ್ನು ಇಪಿಸಿ ಮಾದರಿಯಲ್ಲಿ ನಿರ್ಮಿಸಲಿದ್ದು, ಈ ಸಂಬಂಧ ಟೆಂಡರ್ ಕರೆಯಲಾಗಿದೆ. ಈ ಪ್ರಕ್ರಿಯೆ ಆ.31ರಂದು ಮುಗಿಯಲಿದೆ. ಕಾರಿಡಾರ್–4ರ ವ್ಯಾಪ್ತಿಯ ಸಿವಿಲ್ ಕಾಮಗಾರಿಗಳಿಗೆ ಕೂಡ ಟೆಂಡರ್ ಮುಗಿದಿದ್ದು, ಸದ್ಯದಲ್ಲೇ ಈ ಕಾಮಗಾರಿಗಳನ್ನು ಬಿಡ್‌ದಾರರಿಗೆ ವಹಿಸಲಾಗುವುದು. 2025ರ ಅಕ್ಟೋಬರ್‌ನಿಂದ ಯೋಜನೆಯ ಮೊದಲ 10 ರೈಲುಗಳ ಪೂರೈಕೆ ಕೂಡ ಆರಂಭವಾಗಲಿದೆ ಎಂದು ಅವರು ನುಡಿದರು.

ರೈಲ್ವೆ ಕಾಮಗಾರಿಗಳನ್ನು ತುಂಡು ಗುತ್ತಿಗೆ ನೀಡುತ್ತಿರುವ ಆರೋಪಗಳ ಬಗ್ಗೆ ಸಚಿವರು ಉತ್ತರಿಸಿ, ಅಂತಹದಕ್ಕೆ ನಿಯಮಗಳಲ್ಲಿ ಅವಕಾಶ. ಒಂದು ವೇಳೆ ಗುತ್ತಿಗೆದಾರರು ಅಂತಹದ್ದು ಮಾಡಿರುವುದು ಕಂಡುಬಂದರೆ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದರು. ಪ್ರಸ್ತುತ ಹಣಕಾಸು ವರ್ಷದಲ್ಲಿ 1,000 ಕೋಟಿ ರೂ. ಒದಗಿಸಿದ್ದಾರೆ. ಮಿಕ್ಕಂತೆ ಜರ್ಮನಿಯ ಕೆಎಫ್‌ಡಬ್ಲ್ಯು, ಯೂರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್ ಮತ್ತು ಲಕ್ಸಂಬರ್ಗ್‌ನಿಂದ ಒಟ್ಟು 7,438 ಕೋಟಿ ರೂ.ಗಳನ್ನು ಸಾಲ ಪಡೆಯಲಾಗುವುದು. ಇದಕ್ಕಾಗಿ ಬರುವ ಡಿಸೆಂಬರ್‌ನಲ್ಲಿ ಸಹಿ ಹಾಕಲಾಗುವುದು. ಇದಾದ ನಂತರ ಕಾರಿಡಾರ್ 1 ಮತ್ತು 3ರ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗುವುದು ಎಂದು ಎಂ.ಬಿ.ಪಾಟೀಲ ತಿಳಿಸಿದರು.

ಸರ್ಕಾರಕ್ಕೆ ಗುತ್ತಿಗೆದಾರರ ಸಂಘ ಎಚ್ಚರಿಕೆ

ಇನ್ನುಮುಂದೆ ಗುತ್ತಿಗೆ ಕಾಮಗಾರಿ ನಡೆಸಲು 28 ನಿಬಂಧನೆಗಳನ್ನು ಹಾಕಿದರೆ, ಆ ನಿಬಂಧನೆಗಳಡಿ ಕೆಲಸ ಮಾಡಲು ಸಾಧ್ಯವಿಲ್ಲ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಬಗೆಗಿನ ಮನಸ್ಥಿತಿ ಬದಲಾವಣೆ ಮಾಡಿಕೊಳ್ಳಬೇಕು ಎಂದರು.

ಬಿಬಿಎಂಪಿ ಗುತ್ತಿಗೆದಾರರ ಸಂಘ ಮಾಡಿರುವ ಆರೋಪಕ್ಕೂ ನಮಗೂ ಸಂಬಂಧವಿಲ್ಲ. ಅವರು ನಮ್ಮ ಸಂಘದಿಂದ ಹೊರ ಹೋಗಿದ್ದಾರೆ. ಕಳೆದ ಮೂರು ತಿಂಗಳಿಂದ ಯಾವುದೇ ಗುತ್ತಿಗೆ ಕಾಮಗಾರಿ ನಡೆದಿಲ್ಲ. ಇನ್ನು 15% ಲಂಚ ಪಡೆದಿದ್ದಾರೆ ಎಂಬುದರಲ್ಲಿ ಅರ್ಥವಿಲ್ಲ. ಈ ಆರೋಪಕ್ಕೂ ನಮಗೂ ಸಂಬಂಧವಿಲ್ಲ. ಹೊಸ ಸರ್ಕಾರ ಬಂದ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಹಾಗೂ ನಮಗೆ ಸಂಬಂಧಪಟ್ಟ ಎಲ್ಲಾ ಸಚಿವರನ್ನು ಭೇಟಿ ಮಾಡಿ ಹಣ ಬಿಡುಗಡೆ ಮಾಡುವಂತೆ ಕೋರಿದ್ದೇವೆ. ಎಲ್ಲೋ ಸಣ್ಣ–ಪುಟ್ಟ ಹಣ ಬಿಡುಗಡೆಯಾಗಿದೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ನಾವು ಮತ್ತು ಸರ್ಕಾರ ಎತ್ತಿನಗಾಡಿಗೆ ಎರಡು ಚಕ್ರಗಳಿದ್ದಂತೆ. ಒಟ್ಟಿಗೆ ಹೋದರಷ್ಟೇ ಅಭಿವೃದ್ಧಿ ಎಂದು ಹೇಳಲು ಬಯಸುತ್ತೇನೆ.

ಬಿಜೆಪಿ ಆಡಳಿತದಲ್ಲಿ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ನಮ್ಮ ಕಷ್ಟಗಳನ್ನು ಆಲಿಸಲು ಸಮಯವನ್ನೇ ನೀಡಲಿಲ್ಲ. ಈಗ ಆ ಮಹಾನುಭಾವ ದೊಡ್ಡದಾಗಿ ಮಾತನಾಡುತ್ತಾರೆ. ನಾವು ಆ ಸರ್ಕಾರದ ವಿರುದ್ಧ 40% ಆರೋಪ ಮಾಡಿದ್ದೆವು. ಅದಕ್ಕೆ ಈಗಲೂ ಬದ್ಧ. ನಮ್ಮ ಆರೋಪಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಸರ್ಕಾರ ಏಕ ಸದಸ್ಯ ಆಯೋಗ ರಚಿಸಿದೆ. ಅದರ ಮುಂದೆ ದಾಖಲೆಗಳನ್ನು ಬಹಿರಂಗಪಡಿಸುತ್ತೇವೆ ಎಂದು ಎರಡು ಪುಸ್ತಕಗಳನ್ನು ಪತ್ರಿಕಾಗೋಷ್ಠಿಯಲ್ಲಿ ಪ್ರದರ್ಶಿಸಿದರು.

ಬಾಕಿ ಬಿಲ್ ಪಾವತಿಯಾಗದೆ ಇರುವ ಹಿನ್ನಲೆಯಲ್ಲಿ ಹಲವು ಜಿಲ್ಲೆಗಳಿಂದ ಗುತ್ತಿಗೆದಾರರು ದೂರವಾಣಿ ಕರೆ ಮಾಡಿ ತಮಗೆ ಮಾಹಿತಿ ನೀಡುತ್ತಿದ್ದು, ಆರ್ಥಿಕವಾಗಿ ಸಂಕಷ್ಟದಲ್ಲಿದ್ದೇವೆ. ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ.

ಇತ್ತೀಚೆಗೆ ತಾವು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿದ್ದೆವು. ಎಷ್ಟು ತಿಂಗಳಿನಿಂದ ಬಿಲ್ ಬಾಕಿ ಇದೆ ಎಂದು ಕೇಳಿದರು. ಮೂರು ವರ್ಷದಿಂದ ಎಂದಾಗ, ನಮ್ಮ ಸರ್ಕಾರ ಬಂದು ಮೂರು ತಿಂಗಳಾಗಿದೆ. ಅಷ್ಟರಲ್ಲೇ ಕುತ್ತಿಗೆ ಮೇಲೆ ಕುಳಿತಿದ್ದೀರಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಈಗಾಗಲೇ ಏಳು ತಿಂಗಳಿನಿಂದಲೂ ಬಾಕಿ ಬರಬೇಕಿದೆ. ಕೆಲವಷ್ಟು ಹಣ ಬಿಡುಗಡೆಯಾಗಿದೆ. ಈಗ ನೀಡಿರುವ 100 ಕೋಟಿ ಸಾಲುವುದಿಲ್ಲ. ರಾಜ್ಯ ಸರ್ಕಾರದಿಂದ ಬಿಲ್ ಪಾವತಿಗೆ ಕಮಿಷನ್ ಕೇಳಲಾಗುತ್ತಿದೆ ಎಂದು ಈವರೆಗೂ ಯಾವುದೇ ಗುತ್ತಿಗೆದಾರ ತಮ್ಮ ಬಳಿ ದೂರು ನೀಡಿಲ್ಲ. ಮೂರನೇ ವ್ಯಕ್ತಿ ಆರೋಪ ಮಾಡಿರಬಹುದು ಎಂದು ಸ್ಪಷ್ಟಪಡಿಸಿದರು.

ಬಿಜೆಪಿಯ ವಿಪಕ್ಷ ನಾಯಕರು ಕರೆದರೂ ಹೋಗುತ್ತೇನೆ. ಈಗ ಬಿಜೆಪಿಯಲ್ಲಿ ವಿರೋಧ ಪಕ್ಷದ ನಾಯಕರಿಲ್ಲ. ಯಾರನ್ನು ಭೇಟಿ ಮಾಡಬೇಕೆಂದು ಪ್ರಶ್ನಿಸಿದರು.

ನಾವು ಕೊಟ್ಟ ದೂರನ್ನು ಜೇಬಿನಲ್ಲಿಟ್ಟುಕೊಂಡಿದ್ದರು. ಅವರಿಗೆ ಬೇಕಾದವರಿಗೆ ಮಾತ್ರ ಹಣ ಬಿಡುಗಡೆ ಮಾಡುತ್ತಿದ್ದರು. ಆದರೂ ನನಗೆ ಅವರ ಮೇಲೆ ಗೌರವವಿದೆ.

ನಾಲ್ಕು ವರ್ಷಗಳ ಹಿಂದೆ ಸಲ್ಲಿಸಲಾದ ಬಿಲ್‌ಗಳಿಗೆ ಒಂದು ವರ್ಷದ ಒಳಗೆ ಹಣ ಬಿಡುಗಡೆಯಾಗಬೇಕು. ಈವರೆಗೂ ಹಣ ಬಿಡುಗಡೆಯಾಗಿಲ್ಲ. ಆ.31ರೊಳಗೆ ಹಣ ಬಿಡುಗಡೆಯಾಗದಿದ್ದರೆ ಎಲ್ಲ ಕಾಮಗಾರಿಗಳನ್ನು ಸ್ಥಗಿತಗೊಳಿಸುವುದಾಗಿ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೇನೆ ಎಂದರು.

ಪರ್ಸೆಂಟ್‌ಗಾಗಿ ಕಾಡಿದರು

ಮಾತು ಸದಾ ಕೇಳಿ ಬರುತ್ತದೆ. ಆದರೆ, ಅದು ಸಾಧ್ಯವಾಗುತ್ತಿಲ್ಲ. ಕಾರ್ಜೋಳ ಅವರು ಮುಖ್ಯಮಂತ್ರಿಯಾಗಬೇಕು ಎಂಬ ಕೂಗು ಬಂದಿತ್ತು. ಸದ್ಯ ಅವರು ಮುಖ್ಯಮಂತ್ರಿಯಾಗದೆ ರಾಜ್ಯಕ್ಕೆ ಒಳ್ಳೆಯದಾಗಿದೆ ಎಂದರು. ನೀರಾವರಿ ಇಲಾಖೆಯಲ್ಲಿ ಅವರು ಮಾಡಿರುವಷ್ಟು ಭ್ರಷ್ಟಾಚಾರ ಹಿಂದೆ ಯಾರು ಮಾಡಿಲ್ಲ. ಮುಂದೆಯೂ ಯಾರು ಮಾಡುವುದಿಲ್ಲ. ಏಕ ಸದಸ್ಯ ಆಯೋಗದ ಮುಂದೆ ಕಮಿಷನ್‌ಗೆ ಸಂಬಂಧಿಸಿದ ವಿಚಾರಗಳ ದಾಖಲೆ ನೀಡುವುದಾಗಿ ಅವರು ಹೇಳಿದರು.

ವೈದ್ಯರ ಸೇವೆ, ಅರವಳಿಕೆ ತಜ್ಞರ ಸೇವೆ ಸದಾ ಸ್ಮರಣೀಯ

ಸಚಿವ ಹೆಚ್.ಸಿ.ಮಹದೇವಪ್ಪ

ಮೈಸೂರು, ಆ.11(ಸಿಎನ್)–ದೇಶದಲ್ಲಿ ವೈದ್ಯಕೀಯ ಸೇವೆ ಅತ್ಯುನ್ನತವಾಗಿ ಮುಂದುವರಿಯುತ್ತಿದ್ದು, ವಿದೇಶಗಳ ಮಾದರಿಯಲ್ಲಿ ಉತ್ತಮ ಗುಣಮಟ್ಟದ ಚಿಕಿತ್ಸೆ ಲಭ್ಯವಿದ್ದು, ಇದಕ್ಕೆಲ್ಲ ಕಾರಣ ನಮ್ಮ ಹೆಮ್ಮೆಯ ವೈದ್ಯರು. ವೈದ್ಯರಿಲ್ಲದೆ ನಾವು ಶೂನ್ಯ ಎಂದು ಸಮಾಜ ಕಲ್ಯಾಣ ಇಲಾಖೆ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಹೆಚ್.ಸಿ.ಮಹದೇವಪ್ಪ ಶ್ಲಾಘಿಸಿದರು.

ನಗರದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನೂತನ ಗ್ರಂಥಾಲಯ ಸಭಾಂಗಣದಲ್ಲಿ ಇಸ್ಕಾನ್ (ISAKON) ವತಿಯಿಂದ ಶುಕ್ರವಾರ ಆಯೋಜಿಸಿದ್ದ ದಕ್ಷಿಣ ಭಾರತದ ಅರವಳಿಕೆ ತಜ್ಞರ 38ನೇ ಸಮಾವೇಶ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. 1846ರಲ್ಲಿ ಅರವಳಿಕೆ ಚಿಕಿತ್ಸಾ ಪದ್ಧತಿ ಪ್ರಾರಂಭವಾಗಿದ್ದು, ಇದಕ್ಕೆ ಸುಮಾರು 100 ವರ್ಷಗಳ ಇತಿಹಾಸವಿದೆ. ಅಂದಿನಿಂದ ಇಂದಿನ ವರೆಗೂ ಈ ಸೇವೆಗೆ ಎಲ್ಲರೂ ಶಹಬ್ಬಾಸ್ ಎನ್ನುತ್ತಿದ್ದಾರೆ. ವೈದ್ಯಕೀಯ ಕ್ಷೇತ್ರದ ಎಲ್ಲಾ ವಿಭಾಗಗಳಲ್ಲೂ ಅದ್ಭುತ ಸಾಧನೆ ಮಾಡಿದ್ದೀರಿ. ತುರ್ತು ಚಿಕಿತ್ಸಾ ಸಂದರ್ಭದಲ್ಲಿ ನಿಮ್ಮ ಸೇವೆ ತ್ವರಿತವಾಗಿ ಸಿಗುತ್ತಿರುವುದರಿಂದ ಎಷ್ಟೋ ಜೀವಗಳು ಉಳಿದಿವೆ ಎಂದರು.

ಕೋವಿಡ್ ಸಂದರ್ಭದಲ್ಲಿ ಲಕ್ಷ ಲಕ್ಷ ಮಂದಿ ಗುಣಮುಖರಾಗಲು ವೈದ್ಯರ ಸೇವೆ ಕಾರಣ. ಅನಸ್ತೇಷಿಯಾ ನೀಡಿದರೆ ಮಾತ್ರ ಶಸ್ತ್ರಚಿಕಿತ್ಸೆ ಯಶಸ್ವಿಯಾಗಲು ಸಾಧ್ಯವಾಗುತ್ತದೆ. ನಾನು ತಿಳಿದಿರುವ ಮಾಹಿತಿ ಪ್ರಕಾರ ಶಸ್ತ್ರಚಿಕಿತ್ಸೆ ಯಶಸ್ವಿಗೆ ಶಸ್ತ್ರಚಿಕಿತ್ಸೆ ನಡೆಸುವ ವೈದ್ಯರು ಎಷ್ಟು ಮುಖ್ಯವೋ, ಅರವಳಿಕೆ ತಜ್ಞರು ಕೂಡ ಅಷ್ಟೇ ಮುಖ್ಯ ಎಂದು ಹೇಳಿದರು.

ಕೆಲವೇ ತಿಂಗಳುಗಳಲ್ಲಿ ದಸರಾ ಶುರುವಾಗಲಿದೆ. ವಿಶೇಷವಾಗಿ ಮೈಸೂರು ದಸರಾ ಸಂದರ್ಭದಲ್ಲಿ ಎಲ್ಲರೂ ಕುಟುಂಬ ಸಮೇತರಾಗಿ ಬಂದು ದಸರಾ ವೀಕ್ಷಿಸಿ. ರಾಜವೈಭೋಗವನ್ನು, ತಾಯಿ ಚಾಮುಂಡೇಶ್ವರಿಯನ್ನು ಕಣ್ತುಂಬಿಕೊಳ್ಳಿ. ಇಂತಹ ಕಾರ್ಯಕ್ರಮಗಳು ನಡೆಯುತ್ತಲಿರಬೇಕು. ನಿಮ್ಮ ಸೇವೆ ಸದಾ ಹೀಗೆ ಮುಂದುವರಿಯಲಿ ಎಂದರು.

ಇದೇ ವೇಳೆ ವೈದ್ಯಕೀಯ ಕ್ಷೇತ್ರದಲ್ಲಿ ಉನ್ನತ ಸೇವೆ ನೀಡಿದ ಸಾಧಕರಿಗೆ ಜೀವಮಾನ ಶ್ರೇಷ್ಠ ಸಾಧನೆ, ಐಎಸ್‌ಎ ಕರ್ನಾಟಕ ರಾಜ್ಯ ಪ್ರಶಸ್ತಿ, ಐಎಸ್‌ಎ ಮೈಸೂರು ನಗರ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಪ್ರಶಸ್ತಿ ಸಂದರ್ಭ ಕರ್ನಾಟಕ, ಆಂಧ್ರ ಪ್ರದೇಶ, ತೆಲಂಗಾಣ, ಕೇರಳ, ತಮಿಳುನಾಡು ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಯ ಪ್ರತಿಷ್ಠಿತ ವೈದ್ಯರು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ.ಕೆ.ಆರ್.ದಾಕ್ಷಾಯಿಣಿ, ಐಎಸ್‌ಎ ರಾಷ್ಟ್ರೀಯ ಅಧ್ಯಕ್ಷ ಎಂ.ವಿ ಡಾ.ಭೀಮೇಶ್ವರ್, ಐಎಸ್‌ಎ ರಾಷ್ಟ್ರೀಯ ಗೌರವ ಕಾರ್ಯದರ್ಶಿ ಡಾ.ಸುಖ್ಮಿಂದರ್ ಜಿತ್ ಸಿಂಗ್ ಬಾಜ್ವಾ, ರಾಷ್ಟ್ರೀಯ ಶೈಕ್ಷಣಿಕ ಅಧ್ಯಕ್ಷ ಡಾ.ಕೆ.ಎಂ.ವೆಂಕಟಗಿರಿ, ಐ.ಎಸ್.ಎ ಅಧ್ಯಕ್ಷರಾದ ಡಾ.ಗುರುಲಿಂಗಪ್ಪ ಪಾಟೀಲ್, ಐಎಸ್‌ಎ ಖಜಾಂಚಿ ಡಾ.ಡಿ.ಸಂಧ್ಯಾ, ಅಧ್ಯಕ್ಷರಾದ ಡಾ.ವಿ.ವೈ ಶ್ರೀನಿವಾಸ್, ಸಂಘಟನಾ ಅಧ್ಯಕ್ಷ ಡಾ. ಉಷಾದೇವಿ, ಸಂಘಟನಾ ಕಾರ್ಯದರ್ಶಿ ಡಾ. ಎಚ್.ಜಿ. ಮಂಜುನಾಥ್ ಹಾಗೂ ಇಸ್ಕಾನ್ ದಕ್ಷಿಣ ವಲಯದ ಸಂಘಟನಾ ಸಮಿತಿ ಸದಸ್ಯರು ಸೇರಿದಂತೆ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು ಇದ್ದರು.



ನಗರದ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ನೂತನ ಗ್ರಂಥಾಲಯ ಸಭಾಂಗಣದಲ್ಲಿ ಇಸ್ಕಾನ್ (ISAKON) ವತಿಯಿಂದ ಶುಕ್ರವಾರ ಆಯೋಜಿಸಿದ್ದ ದಕ್ಷಿಣ ಭಾರತದ ಅರವಳಿಕೆ ತಜ್ಞರ 38ನೇ ಸಮಾವೇಶ ಕಾರ್ಯಕ್ರಮವನ್ನು ಉಸ್ತುವಾರಿ ಸಚಿವರಾದ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು. ಈ ವೇಳೆ ಮೈಸೂರು ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ.ಕೆ.ಆರ್.ದಾಕ್ಷಾಯಿಣಿ, ಐಎಸ್‌ಎ ರಾಷ್ಟ್ರೀಯ ಅಧ್ಯಕ್ಷ ಎಂ.ವಿ ಡಾ.ಭೀಮೇಶ್ವರ್, ಐಎಸ್‌ಎ ರಾಷ್ಟ್ರೀಯ ಗೌರವ ಕಾರ್ಯದರ್ಶಿ ಡಾ.ಸುಖ್ಮಿಂದರ್ ಜಿತ್ ಸಿಂಗ್ ಬಾಜ್ವಾ, ರಾಷ್ಟ್ರೀಯ ಶೈಕ್ಷಣಿಕ ಅಧ್ಯಕ್ಷ ಡಾ.ಕೆ.ಎಂ.ವೆಂಕಟಗಿರಿ ಮತ್ತಿತರರಿದ್ದರು.

ವ್ಯಸನಮುಕ್ತರಾಗಿ ಜೀವನ ಸಾರ್ಥಕಪಡಿಸಿಕೊಳ್ಳಿ

• ಇಳಕಲ್ ಚಿತ್ತರಗಿ ಶ್ರೀ ವಿಜಯ ಸಂಸ್ಥಾನದ ಶ್ರೀಗಳ ಬೋಧನೆ • ಬಸವ ಮಾರ್ಗ ಫೌಂಡೇಷನ್‌ನ ವ್ಯಸನ ಮುಕ್ತ ಶಿಬಿರಕ್ಕೆ ಚಾಲನೆ

ಮೈಸೂರು, ಆ.11(ಎಸ್‌ಬಿಡಿ)– ಮನುಷ್ಯನ ದೇಹವೇ ದೇಗುಲ. ಇದನ್ನು ವ್ಯಸನದಿಂದ ಹಾಳು ಮಾಡಿಕೊಳ್ಳದೆ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ಇಳಕಲ್‌ನ ಚಿತ್ತರಗಿ ಶ್ರೀ ವಿಜಯ ಸಂಸ್ಥಾನ ಮಹಾಂತೇಶ್ವರ ಮಠದ ಡಾ. ಶ್ರೀ ಗುರು ಮಹಾಂತ ಸ್ವಾಮೀಜಿ ಹೇಳಿದರು.

ಮೈಸೂರಿನ ಹೆಬ್ಬಾಳು ರಿಂಗ್ ರಸ್ತೆಯಲ್ಲಿರುವ ಬಸವ ಮಾರ್ಗ ಫೌಂಡೇಷನ್ ವ್ಯಸನ ಮುಕ್ತ ಕೇಂದ್ರದಲ್ಲಿ ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಪ್ರಯುಕ್ತ ಆಯೋಜಿಸಿರುವ 30ನೇ ಉಚಿತ ಮದ್ಯ ವರ್ಜನ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಸವಾದಿ ಶರಣರ ವಚನಗಳು ಸಾರ್ವಕಾಲಿಕ ಸತ್ಯ. ಉಪಜೀವನಕ್ಕೆ ಕಲಿಯುವ ಲೌಕಿಕ ವಿದ್ಯೆಯಲ್ಲ. ವಚನಗಳು ಆತ್ಮವಿದೆ. ಹಾಗಾಗಿ ಶರಣರು ಅನುಭವ ಮಂಟಪ ಮೂಲಕ ಕಾಯಕ, ಅರಿವು, ಆರಾಧನೆ ಶಿಕ್ಷಣದ ಮಹತ್ವ ಸಾರಿದರು. ಬಸವ ಮಾರ್ಗ ಮನುಷ್ಯನನ್ನು ಮಹದೇವನನ್ನಾಗಿ ಮಾಡುವ ಒಂದು ಅದ್ಭುತ ಮಾರ್ಗ. ಹಾಗಾಗಿ ಬಸವಣ್ಣನವರು ದೇಹವನ್ನು ದೇಗುಲ ಎಂದು ಕರೆದಿದ್ದಾರೆ. ಮನುಷ್ಯ ಜನ್ಮ ಸಾಮಾನ್ಯವಲ್ಲ. ಯಾವ ಕಾರಣಕ್ಕೂ ವ್ಯಸನಗಳಿಗೆ ಗುರಿಯಾಗಿ ಜೀವನವನ್ನು ಹಾಳು ಮಾಡಿಕೊಳ್ಳಬಾರದು ಎಂದು ಕಿವಿಮಾತು ಹೇಳಿದರು.

ಶ್ರೀ ವಿಜಯ ಮಹಾಂತ ಸ್ವಾಮೀಜಿ ಮಾತನಾಡಿ, ಕುಡಿತದ ಚಟ ಇಡೀ ಕುಟುಂಬದ ಸಂತೋಷವನ್ನು ಕಿತ್ತುಕೊಳ್ಳುತ್ತದೆ. ಮಕ್ಕಳ ಭವಿಷ್ಯವನ್ನು ಹಾಳು ಮಾಡುತ್ತದೆ. ಹೆಣ್ಣು ಮಗಳನ್ನು ವಿಧವೆಯನ್ನಾಗಿ ಮಾಡುತ್ತದೆ. ನಂಬಿದವರನ್ನು ಅನಾಥರನ್ನಾಗಿ ಮಾಡುತ್ತದೆ. ಆದ್ದರಿಂದ ಕುಡಿತಕ್ಕೆ ಯಾರೂ ದಾಸರಾಗುವುದು ಬೇಡ ಎಂದು ತಿಳಿಹೇಳಿದರು.

ಸಾಹಿತಿ ಬನ್ನೂರು ಕೆ.ರಾಜು ಮಾತನಾಡಿ, ಶ್ರೀ ಮಹಾಂತ ಶಿವಯೋಗಿ ಸ್ವಾಮೀಜಿಯವರು ವ್ಯಸನ ಮುಕ್ತ ಸಮಾಜಕ್ಕಾಗಿ ತಮ್ಮ ಇಡೀ ಜೀವನವನ್ನು ಮೀಸಲಿಟ್ಟರು. ಜೋಳಿಗೆ ಹಿಡಿದು ಸಂಚಾರ ಮಾಡುವ ಮೂಲಕ ಜನರ ಬಳಿ ಹೋಗಿ ಜಾಗೃತಿ ಮೂಡಿಸಿದರು. ನಿಮ್ಮಲ್ಲಿರುವ ಎಲ್ಲಾ ವ್ಯಸನಗಳನ್ನು ನನ್ನ ಜೋಳಿಗೆಗೆ ಹಾಕಿ ಮತ್ತೆಂದೂ ಹತ್ತಿರ ಸುಳಿಯಲು ಬಿಡುವುದಿಲ್ಲ ಎಂಬ ಸಂಕಲ್ಪ ಮಾಡಿ ಎಂದು ಕೇಳಿಕೊಳ್ಳುತ್ತಿದ್ದರು. ಚಿತೆ ದೇಹವನ್ನು ಸುಟ್ಟರೆ, ಚಟ ದೇಹದ ಜೊತೆಗೆ ಆತ್ಮ ಹಾಗೂ ಸುಂದರ ಬದುಕನ್ನೂ ಸುಟ್ಟು ಹಾಕುತ್ತದೆ. ಚಟದ ಮೂಲಕ ನಮ್ಮನ್ನು ನಾವೇ ನಾಶ ಮಾಡಿಕೊಳ್ಳಬಾರದು ಎಂದು ಸಲಹೆ ನೀಡಿದರು.



ಬಸವ ಫೌಂಡೇಷನ್ ಅಧ್ಯಕ್ಷ ಸಿ.ಬಸವರಾಜು ಮಾತನಾಡಿ, ಶಿಬಿರಗಳ ಮೂಲಕ ಈವರೆಗೆ 3 ಸಾವಿರಕ್ಕೂ ಹೆಚ್ಚು ಮಂದಿಯನ್ನು ವ್ಯಸನ ಮುಕ್ತಗೊಳಿಸಿ, ಸಮಾಜದ ಮುಖ್ಯವಾಹಿನಿಗೆ ತರಲಾಗಿದೆ. ಈ ಸೇವೆಯನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಿ, ಪ್ರತಿ ತಿಂಗಳು ಉಚಿತ ಶಿಬಿರಗಳನ್ನು ನಡೆಸುವ ಮೂಲಕ ಇಡೀ ರಾಜ್ಯವನ್ನು ವ್ಯಸನ ಮುಕ್ತಗೊಳಿಸುವುದು ನಮ್ಮ ಫೌಂಡೇಷನ್‌ನ ಮಹತ್ತರ ಗುರಿಯಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿ ಕಾರ್ಯದರ್ಶಿ ಎಸ್.ಶಂಕರಪ್ಪ, ಪವಾಡ ಬಯಲು ತಜ್ಞ ಹುಲಿಕಲ್ ನಟರಾಜು, ಬಸವಮಾರ್ಗದ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.8.2023 ಶನಿವಾರ, ಮಳೆ ನಕ್ಷತ್ರ: ಆಶ್ಲೇಷ 04.08.2023 ರಿಂದ 16.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಏಕಾದಶಿ, ನಕ್ಷತ್ರ: ಮೃಗಶಿರ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಸದ್ವಿದ್ಯಾ ಪ್ರೌಢಶಾಲೆ :** ಸದ್ವಿದ್ಯಾ ಶತೋತ್ತರ, ಸುವರ್ಣ, ರಜತ ಮಹೋತ್ಸವ ವರ್ಷ, ಬಹುಮಾನ ವಿತರಣಾ ಸಮಾರಂಭ, ಅಧ್ಯಕ್ಷತೆ : ಸದ್ವಿದ್ಯಾ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪ್ರೊ. ಎಂ.ಎಸ್.ಕೆ. ನರಹರಿಬಾಬು, ಮುಖ್ಯ ಅತಿಥಿಗಳು : ಹೆಚ್.ಆರ್. ನಾಗೇಂದ್ರರಾವ್, ಸಹ ಕಾರ್ಯದರ್ಶಿ ಪ್ರೊ. ಕೆ.ಎಸ್. ಹಿರಿಯಣ್ಣ, ಸ್ಥಳ: ಟಿ.ಪಿ. ಕೈಲಾಸಂ ರಂಗ ಮಂಟಪ, ವಿದ್ಯಾಸಂಸ್ಥೆ ಆವರಣ, ಬೆಳಗ್ಗೆ 9.30ಕ್ಕೆ.

■ **ಶ್ರೀಆದಿಪೂಜಿತ ಗೆಳೆಯರ ಬಳಗ, ಗರಡಿಕೇರಿ, ಸಿದ್ಧಿವಿನಾಯಕ ಯುವಕರ ಸೇವಾ ಸಂಘ, ಶ್ರೀ ಪಂಚಮುಖಿ ಗಣಪತಿ ಯುವಕರ ಸಂಘ, ಕುರುಬಗೇರಿ :** ಬೆಳಗ್ಗೆ 10ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಪ್ರಯುಕ್ತ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನದಲ್ಲಿ, ಚಾಮುಂಡಿಬೆಟ್ಟದ ಶ್ರೀಚಾಮುಂಡೇಶ್ವರಿ ದೇವಸ್ಥಾನದಲ್ಲಿ, ಗರಡಿಕೇರಿಯ ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಉಚಿತ ಆರೋಗ್ಯ ತಪಾಸಣಾ ಶಿಬಿರ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಉಪಸ್ಥಿತರು: ಮಾಜಿ ಶಾಸಕ ಡಾ. ಯತೀಂದ್ರ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ಡಾ. ಡಿ. ತಿಮ್ಮಯ್ಯ, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಡಿಸಿಸಿ ಅಧ್ಯಕ್ಷ ಆರ್. ಮೂರ್ತಿ, ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ಕೆ. ಮರೀಗೌಡ, ಅಯೂಬ್ ಖಾನ್, ಡಿ. ಧ್ರುವಕುಮಾರ್, ಸುನೀಲ್‌ಬೋಸ್, ಎಂ. ಲಕ್ಷ್ಮಣ್, ಅನಂತು, ಎಸ್. ಚಂದ್ರಶೇಖರ್, ಮಧ್ಯಾಹ್ನ 1 ಗಂಟೆಗೆ ಮೈಸೂರು ನಗರ ಕಿವುಡ ಮತ್ತು ಮೂಕರ ಪಾಠಶಾಲೆಯ ಮಕ್ಕಳಿಗೆ ಭೋಜನ ಕಾರ್ಯಕ್ರಮ, ಸ್ಥಳ: ಶ್ರೀ ಮಹದೇಶ್ವರ ಭವನ, ಗರಡಿಕೇರಿ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್–ಹ್ಯಾಂಡ್‌ಲೂಮ್ ಮತ್ತು ಹ್ಯಾಂಡಿಕ್ರಾಫ್ಟ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಮತ್ತು ಗೈಡ್ಸ್ ಮೈದಾನ, ಡಿಸಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮಹಿಳಾ ಘಟಕ, ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು :** 77ನೇ ಸ್ವಾತಂತ್ರ್ಯೋತ್ಸವದ ಸವಿನೆನಪಿನ ಚುಟುಕು ಕವಿಗೋಷ್ಠಿ ಮತ್ತು ಮಹಿಳಾ ಘಟಕ ಸ್ಥಾಪನೆ, ಚುಟುಕು ಕವಿಗೋಷ್ಠಿ ಉದ್ಘಾಟನೆ : ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಡಾ. ಸಿಪಿಕೆ, ಮಹಿಳಾ ಘಟಕ ಉದ್ಘಾಟನೆ : ಮಾಜಿ ಸಚಿವ ಎಂ. ಶಿವಣ್ಣ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಭಿನಂದನಾ ಪತ್ರ ವಿತರಣೆ : ಚುಟುಕು ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ತೋಂಟದಾರ್ಯ, ಪುಸ್ತಕ ತಾಂಬೂಲ ವಿತರಣೆ : ಡಾ. ಎಂ.ಜಿ.ಆರ್. ಅರಸ್, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.

■ **ವಿದ್ಯಾವರ್ಧಕ ಕಾನೂನು ಕಾಲೇಜು :** ಕೆ. ಪುಟ್ಟಸ್ವಾಮಿಯವರ ನೆನಪಿಗಾಗಿ 4ನೇ ದತ್ತಿ ಉಪನ್ಯಾಸ ಕಾರ್ಯಕ್ರಮ, ವಿಷಯ : ಏಕರೂಪ ನಾಗರೀಕ ಸಂಹಿತೆ–ಸಂವಿಧಾನಾತ್ಮಕ ಆದೇಶ, ದತ್ತಿ ಉಪನ್ಯಾಸ : ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಎನ್. ಕುಮಾರ್, ಅಧ್ಯಕ್ಷತೆ : ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ, ಉಪಸ್ಥಿತರು : ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಕೋಶಾಧ್ಯಕ್ಷ ಶ್ರೀಶೈಲ ರಾಮಣ್ಣವರ್, ಸ್ಥಳ: ಪಿ.ಎಂ. ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಫಾರ್ಮಸಿ ಕಾಲೇಜು :** ಅಲ್ಯೂಮ್ನಿ ಮೀಟ್–2ಕೆ23, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಉಪಮೇಯರ್ ಡಾ. ಜಿ. ರೂಪಾ, ಗೌರವ ಅತಿಥಿಗಳು : ಜೆಎಸ್‌ಎಸ್ ಎಹೆಚ್‌ಇಆರ್ ಸಮಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಸುರೀಂದರ್ ಸಿಂಗ್, ಕುಲಸಚಿವ ಡಾ. ಬಿ. ಮಂಜುನಾಥ್, ಅಧ್ಯಕ್ಷತೆ : ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಟಿ.ಎಂ. ಪ್ರಮೋದ್ ಕುಮಾರ್, ಸ್ಥಳ: ಜೆಎಸ್‌ಎಸ್ ಫಾರ್ಮಸಿ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಆರ್ಟ್ ಗ್ಯಾಲರಿ :** ಸಾಧಕರೊಂದಿಗೆ ಸಂವಾದ, ತಿಂಗಳ ಸಾಧಕರು ವಯೋವೃದ್ಧರ ರೋಗಗಳ ತಜ್ಞೆ ಡಾ. ಪ್ರತಿಭಾ ಪೆರೇರ, ಮುಖ್ಯ ಅತಿಥಿಗಳು : ಮಕ್ಕಳ ತಜ್ಞ ಡಾ. ಎಸ್.ಎನ್. ಮೋತಿ, ಅಧ್ಯಕ್ಷತೆ: ಮೈಸೂರು ಆರ್ಟ್ ಗ್ಯಾಲರಿ ಸ್ಥಾಪಕ ಅಧ್ಯಕ್ಷ ಎಲ್. ಶಿವಲಿಂಗಪ್ಪ, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ಬೆಳಗ್ಗೆ 11ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ :** ಪ್ರೊ. ಹೆಚ್.ಟಿ. ಬಸವರಾಜಪ್ಪ ಅವರಿಗೆ ಅಭಿನಂದನಾ ಸಮಾರಂಭ, ಮುಖ್ಯ ಅತಿಥಿಗಳು : ನಿವೃತ್ತ ಪ್ರಾಧ್ಯಾಪಕ ಪ್ರೊ. ಜಿ. ವೆಂಕಟೇಶ್‌ಕುಮಾರ್, ಅಧ್ಯಕ್ಷತೆ : ಮೈಸೂರು ವಿವಿ ಕಾನೂನು ಅಧ್ಯಯನ ವಿಭಾಗದ ನಿವೃತ್ತ ಡೀನ್ ಪ್ರೊ. ಸಿ. ರಮೇಶ್, ಸ್ಥಳ : ಪ್ರೊ. ಎಂ.ಎನ್. ವಿಶ್ವನಾಥಯ್ಯ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ರಾಜ್ಯ ವಕೀಲರ ಪರಿಷತ್ತು :** ರಾಜ್ಯ ಮಟ್ಟದ ವಕೀಲರ 10ನೇ ಸಮ್ಮೇಳನ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಸುಪ್ರೀಂ ಕೋರ್ಟ್ ನ್ಯಾಯಾಧೀಶ ಎ.ಎಸ್. ಬೋಪಣ್ಣ, ಹೈಕೋರ್ಟ್ ಚೀಫ್ ಜಸ್ಟೀಸ್ ಪ್ರಸನ್ನ ಬಿ. ವರಲೆ, ಬಾರ್ ಕೌನ್ಸಿಲ್ ಆಫ್ ಇಂಡಿಯಾ ಅಧ್ಯಕ್ಷ ಮನನ್ ಕುಮಾರ್ ಮಿಶ್ರಾ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್, ಅಧ್ಯಕ್ಷತೆ : ಕರ್ನಾಟಕ ಬಾರ್ ಕೌನ್ಸಿಲ್ ಅಧ್ಯಕ್ಷ ಹೆಚ್.ಎಲ್. ವಿಶಾಲ ರಘು, ಗೌರವ ಅತಿಥಿಗಳು : ಹೈಕೋರ್ಟ್ ನ್ಯಾಯಾಧೀಶ ಕೆ. ಸೋಮಶೇಖರ್, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಪಿಡಬ್ಲ್ಯುಡಿ ಸಚಿವ ಸತೀಶ್ ಜಾರಕಿಹೊಳಿ, ಅಡ್ವೋಕೇಟ್ ಜನರಲ್ ಕೆ. ಶಶಿಕಿರಣ್ ಶೆಟ್ಟಿ, ಬಾರ್ ಕೌನ್ಸಿಲ್ ಆಫ್ ಇಂಡಿಯಾ ಉಪಾಧ್ಯಕ್ಷ ಎಸ್. ಪ್ರಭಾಕರನ್, ಸ್ಥಳ: ದಸರಾ ವಸ್ತುಪ್ರದರ್ಶನ ಮೈದಾನ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಶೋಧ ಅನುಶೋಧ– ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು –ಎಂ.ಎಸ್. ಶ್ರೀಕೃಪಾ, ರಾಜು ಅನಂತಸ್ವಾಮಿ. ಮೈಸೂರು ಅನಂತಸ್ವಾಮಿ, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಆರ್.ಎನ್. ತ್ಯಾಗರಾಜನ್ ಮತ್ತು ಡಾ.ಆರ್.ಎನ್. ತಾರಾನಾಥನ್–ಯುಗಳ ಗಾಯನ, 11.00 'ಸ್ವರಾಜ್'– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ

ಮಧ್ಯಾಹ್ನ: 12.30 ದೇವರನಾಮ–ಡಿ. ಪುರುಷೋತ್ತಮ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ–ಕೃಷ್ಣೇಗೌಡ ಮತ್ತು ಸಂಗಡಿಗರು, 1.20 ಭಾವಗೀತೆ –ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ–ವೈಲಿನ್ ನುಡಿಸುವ ಅನ್ವಿತಾ ಶ್ರೀಕಿರಣ್ ಪರಿಚಯ, 4.30 ನೆನಪಿನಂಗಳ– ಸ್ವಾತಂತ್ರ್ಯ ಹೋರಾಟಗಾರ್ತಿ, ನಿವೃತ್ತ ಶಿಕ್ಷಕಿ, ಆಕಾಶವಾಣಿಯ ಹಿರಿಯ ಕಲಾವಿದೆ ಎಂ.ಎನ್. ಪಾರ್ವತಮ್ಮ ಅವರೊಂದಿಗೆ ಮಂಜುಳಾ ಪುರಾಣಿಕ್ ನಡೆಸಿರುವ ಸಂವಾದ. ಸ್ವಾತಂತ್ರ್ಯದ ಚೇತನ ಗಾಂಧೀಜಿ ಕುರಿತು ಮಾತನಾಡಿರುವವರು ಅಗರಂ ರಗಯ್ಯ, ಸಂಕಲನ–ಎಸ್. ಲಕ್ಷ್ಮೀ ನಾರಾಯಣ, 6.50 ಕೃಷಿರಂಗ–ತೋರಣ ಹೂರಣ, ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ– ಬಾನುಲಿ ಸರಣಿ, 8.00 ಇಸ್ ಸಪ್ತಾಹ್ ಸಂಸದ್ ಮೇ, 8.15 ಯುವವಾಣಿ– ಆಧುನಿಕ ತಂತ್ರಜ್ಞಾನದ ಇತ್ತೀಚಿನ ಬೆಳವಣಿಗೆಗಳು ಮತ್ತು ವಿದೇಶಿ ವ್ಯಾಸಂಗ ಕುರಿತು ಮಾತುಕತೆಯಲ್ಲಿ ಭಾಗವಹಿಸುವವರು ವಿಶ್ವಾಸ್ ಹೆಗಡೆ, ಪ್ರಫೂಲ್ ಕೊಪ್ಪ್ಳಕರ್ ನಮ್ರತಾ ಎಂ.ಜೆ. ಮತ್ತು ಬೇದ್ರೆ ಎಂ. ಸಮರ್ಥ್ ನಡೆಸಿಕೊಡುತ್ತಾರೆ ಪ್ರಭಂಜನ್ ವಿ.ಬಿ, 9.30 ಅಮೇರಿಕೆಯ ಮಾದರಿಗಳು–ಡಾ. ಬಿ.ಎನ್. ಜಯರಾಂ ಅವರೊಂದಿಗೆ ಸಂದರ್ಶನ, ಸಂದರ್ಶಕರು– ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ಪ್ರದೀಪ್ತಾ ಶೇಖರ್ ಮಹಾಪಾತ್ರ – ಬಾನ್ಸುರಿವಾದನ

■ **ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸೇವಾದಳ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 76ನೇ ಹುಟ್ಟುಹಬ್ಬ ಆಚರಣೆ ಅಂಗವಾಗಿ ಅಗ್ನಿನಂದಕ ಯಂತ್ರ ವಿತರಣೆ, ಉಪಸ್ಥಿತರು : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಶಾಸಕ ತನ್ವೀರ್ ಸೇಠ್, ಅಧ್ಯಕ್ಷತೆ : ಶಾಸಕ ಕೆ. ಹರೀಶ್‌ಗೌಡ, ಮುಖ್ಯ ಅತಿಥಿಗಳು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಮೈಸೂರು ಕಾಂಗ್ರೆಸ್ ಸೇವಾದಳ ಮುಖ್ಯ ಸಂಘಟಕ ಎಂ.ಕೆ. ಅಶೋಕ, ಸ್ಥಳ: ಸಿಎಸ್‌ಐ ವೆಸ್ಲಿ ಗರ್ಲ್ಸ್ ಕಡುಬಡವರ ಬೋರ್ಡಿಂಗ್ ಹೋಂ, ಸಿದ್ದಪ್ಪ ವೃತ್ತ, ಬೆಳಗ್ಗೆ 11.30ಕ್ಕೆ.

■ **ಡಾ. ವಿಜಯಲಕ್ಷ್ಮಿ ಬಸವರಾಜ್ ಚಾರಿಟಬಲ್ ಸೊಸೈಟಿ :** ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಸಂಸ್ಥೆ ನಿವೃತ್ತ ನಿರ್ದೇಶಕರಾದ ಡಾ. ವಿ. ಪ್ರಕಾಶ್ ಅವರಿಂದ ಆಹಾರ ಸಂಸ್ಕೃತಿ, ಆರೋಗ್ಯ ಮತ್ತು ಪರಿಸರ, ಸುಸ್ಥಿರ ಸ್ವಾಸ್ಥ ಇವುಗಳ ನಡುವಣ ಸಮನ್ವಯ ಸಂಬಂಧ ಕುರಿತು ವಿಶೇಷ ಉಪನ್ಯಾಸ, ಸ್ಥಳ: ಸೆಮಿನಾರ್ ಹಾಲ್, ನಾಲೆಡ್ಜ್ ಪಾರ್ಕ್, ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಬೆಳಗ್ಗೆ 11ಕ್ಕೆ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ, ಉದ್ಘಾಟನೆ : ಶಾಸಕ ಟಿ.ಎಸ್. ಶ್ರೀವತ್ಸ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಸಂಜೆ 4ಕ್ಕೆ.

■ **ಅಖಿಲ ಭಾರತೀಯ ಸಾಹಿತ್ಯ ಪರಿಷತ್ :** ಸ್ವರಾಜ್ಯ–ಸುರಾಜ್ಯ ಕವಿಗೋಷ್ಠಿ, ಮುಖ್ಯ ಅತಿಥಿಗಳು: ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ. ಗೋಪಿನಾಥ್, ಅಧ್ಯಕ್ಷತೆ : ಅಖಿಲ ಭಾರತೀಯ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರೊ. ಜಿ. ರಾಮರತನ್, ಉಪಸ್ಥಿತರು : ವಿಜಯ ವಿಠ್ಠಲ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಸತ್ಯಪ್ರಸಾದ್, ವಲಯ ಪ್ರಮುಖ ಡಾ. ವಿ. ರಂಗನಾಥ್, ಸ್ಥಳ: ವಿಜಯ ವಿಠ್ಠಲ ವಿದ್ಯಾಸಂಸ್ಥೆ, ಸರಸ್ವತಿಪುರಂ, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಆದ್ಯಗೋವಿಂದಾಚಾರ್ಯ ಅವರಿಂದ ಭಾಗವತ ಸಪ್ತಾಹ ಕುರಿತು ಪ್ರವಚನ, ಸ್ಥಳ: ಶ್ರೀರಾಘವೇಂದ್ರಸ್ವಾಮಿ ಮಠ, ಜಯಲಕ್ಷ್ಮಿಪುರಂ, ಸಂಜೆ 4.45ರಿಂದ.

■ **ಶ್ರೀ ವ್ಯಾಸರಾಜ ಮಠ ಸೋಸಲೆ (ಮುನಿತ್ರಯ ಪೀಠ), ಶ್ರೀ ವ್ಯಾಸತೀರ್ಥ ವಿದ್ಯಾಪೀಠ:** ಅಧಿಕ ಮಾಸದ ಪ್ರಯುಕ್ತ ಸಂಪೂರ್ಣ ರಾಮಾಯಣ ಪ್ರವಚನ ಯಜ್ಞ, ವಿದ್ವಾನ್ ಶ್ರೀನಿವಾಸಾಚಾರ್ಯ ಕೂರ್ಲಹಳ್ಳಿ ಅವರಿಂದ ಯುದ್ಧಕಾಂಡ ಕುರಿತು ಪ್ರವಚನ, ಸ್ಥಳ:ವಿದ್ಯಾಪೀಠದ ಆವರಣ, ಕೃಷ್ಣಮೂರ್ತಿಪುರಂ, ಸಂಜೆ 6 ರಿಂದ 7ರವರೆಗೆ.


■ **ಶ್ರೀಕೃಷ್ಣಧಾಮ :** ಶ್ರೀ ಶ್ರೀ ಪ್ರಸನ್ನತೀರ್ಥ ಶ್ರೀಪಾದಂಗಳವರ 36ನೇ ಚಾತುರ್ಮಾಸ್ಯದ ಪ್ರಯುಕ್ತ ಸಾಂಸ್ಕೃತಿಕ ಹಬ್ಬ, ಆರ್ಯಭಟ ಪ್ರಶಸ್ತಿ ವಿಜೇತರಾದ ವಿದುಷಿ ಲಕ್ಷ್ಮೀ ನಾಗರಾಜ್ ಮತ್ತು ವಿದುಷಿ ಇಂದು ನಾಗರಾಜ್ ಅವರಿಂದ ಶಾಸ್ತ್ರೀಯ ಸಂಗೀತ, ಸ್ಥಳ: ಶ್ರೀಕೃಷ್ಣಧಾಮ, ಸರಸ್ವತಿಪುರಂ, ಸಂಜೆ 7 ರಿಂದ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಮಹಿಪಾಲಾನಂದ ಅವರಿಂದ ಉಪನ್ಯಾಸ, ಸ್ಥಳ: ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ :** ವಿದುಷಿ ಶ್ರೀಮತಿ ರೂಪಶ್ರೀ ಆನಂದ್ ಅವರಿಂದ ಕರ್ನಾಟಕ ಸಂಗೀತ ಕಾರ್ಯಕ್ರಮ, ವಿದುಷಿ ಪೃಥ್ವಿ ಭಾಸ್ಕರ್–ಪಿಟೀಲು, ವಿದ್ವಾನ್ ಶುಭಾಂಗ್–ಮೃದಂಗ, ಸ್ಥಳ: ಶ್ರೀರಾಮಮಂದಿರದ ಆವರಣ, ಶಿವರಾಂಪೇಟೆ, ಸಂಜೆ 6ಕ್ಕೆ.

ಬೆಟ್ಟದಪುರದಲ್ಲಿಂದು, ಪಿರಿಯಾಪಟ್ಟಣ ತಾ.

■ **ತಾಲೂಕು ಕುರುಬ ಸಮಾಜ, ಕಾಂಗ್ರೆಸ್ ಪಕ್ಷ :** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 76ನೇ ಹುಟ್ಟುಹಬ್ಬದ ಅಂಗವಾಗಿ ಪಿರಿಯಾಪಟ್ಟಣದ ಹೌಸಿಂಗ್ ಬೋರ್ಡ್ ಗಣೇಶ ದೇವಾಲಯದಲ್ಲಿ ವಿಶೇಷ ಪೂಜೆ, ಅಭಿಷೇಕ, ಪಿರಿಯಾಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಬ್ಬದ ವಿತರಿಸುವ ಕಾರ್ಯಕ್ರಮ, ಉಪಸ್ಥಿತರು : ತಾಲೂಕು ಕುರುಬರ ಸಂಘದ ಅಧ್ಯಕ್ಷ ಎಚ್.ಡಿ.ಗಣೇಶ್, ನಿತಿನ್ ವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಹಮತ್ ಜಾನ್ ಬಾಬು, ಡಿ.ಟಿ.ಸ್ವಾಮಿ, ಬೆಳಗ್ಗೆ 9ಕ್ಕೆ


ಕರ್ನಾಟಕದ ಜನಪ್ರಿಯ ಮುಖ್ಯಮಂತ್ರಿ ಸನ್ಮಾನ್ಯ
ಶ್ರೀ ಸಿದ್ಧರಾಮಯ್ಯ
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು:
ಹೆಚ್.ಎಂ.ಗಣೇಶ್‌ಪ್ರಸಾದ್
ಶಾಸಕರು,
ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ


ಶ್ರೀ ಕೆಂಪಯ್ಯ IPS ನಿವೃತ್ತಿ ಅಭಿಮಾನಿಗಳ ಬಳಗ ಸೇವಾ ವೇದಿಕೆ,
ಮೈಸೂರು
ನಾಡಿನ ದೊರೆ, ಧೀಮಂತನಾಯಕ, ಬಡವರ ಬಂಧು
ಕರ್ನಾಟಕ ರಾಜ್ಯ ಜನಪ್ರಿಯ ಮುಖ್ಯಮಂತ್ರಿ
ಸನ್ಮಾನ್ಯ ಶ್ರೀ
ಸಿದ್ಧರಾಮಯ್ಯ ರವರಿಗೆ
ಜನುಮದಿನದ
ಹಾರ್ಧಿಕ ಶುಭಾಶಯಗಳು
ಇದಕ್ಕೆ ನಾಡಿನ ಸಚಿವರು, ಶಾಸಕರು
ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು
ತುಂಬು ಹೃದಯದ ಅಭಿನಂದಿಸುತ್ತ
ಶ್ರೀ ತಾಯಿ ಚಾಮುಂಡೇಶ್ವರಿ ಹಾಗೂ ಭುವನೇಶ್ವರಿ ಅಮ್ಮನವರು
ಆಶೀರ್ವಾದಿಸಿ ಇನ್ನು ಹೆಚ್ಚು ರೀತಿಯಲ್ಲಿ ಆಡಳಿತವನ್ನು
ಯಶ್ವಿಗೊಳಿಸಲೆಂದು ಆಶೀರ್ವಾದಿಸಲೆಂದು ಅಭಿಮಾನಿಗಳ ಪ್ರಾರ್ಥನೆ.
ಶ್ರೀ ಜಗದೀಶ್
ಸಮಾಜ ಸೇವಕರು
ಪಂಚಮುಖಿ ಮಂಡಿ ಮೊಹಲ್ಲಾ
ಶ್ರೀ ಸುನೀಲ್‌ಕುಮಾರ್
ಸಮಾಜ ಸೇವಕರು
ಕೆ.ಜಿ.ಕೊಪ್ಪಲ್
ಶ್ರೀ ಕಂಸಾಳೆ ರವಿ
ಸಮಾಜ ಸೇವಕರು
ಶ್ರೀ ಮಹದೇವ ಪಾಂಡೆ
ಉಪಾಧ್ಯಕ್ಷರು, ಹಿಂದುಳಿದ ವರ್ಗ ಕಾಂಗ್ರೆಸ್
ಶ್ರೀ ಕೆಂಪಯ್ಯ
ನಿವೃತ್ತ ಐ.ಪಿ.ಎಸ್
ಮಾಜಿ ಗೃಹ ಇಲಾಖೆ- ವಿಶೇಷ ಸಲಹೆಗಾರರು
ಕರ್ನಾಟಕ ರಾಜ್ಯ
ಶ್ರೀ ರಾಜಶೇಖರ್
ರಾಜ್ಯಾಧ್ಯಕ್ಷರು,
ಸಂಗೊಳ್ಳಿರಾಯಣ ಯುವ ವೇದಿಕೆ
ಶ್ರೀ ಎಂ.ಹೆಚ್.ಕಿರಣ್
ಉಪಾಧ್ಯಕ್ಷರು
ರಾಜ್ಯ ಹಿಂದುಳಿದ ವರ್ಗ ಕಾಂಗ್ರೆಸ್
9845129192
ಎಂ.ವಿ. ಶ್ರೀನಿವಾಸ ಮಿತ್ರ
9342421021


ಸಾಮಾಜಿಕ ನ್ಯಾಯದ ಹರಿಕಾರ, ಭಾಗ್ಯಗಳ ಸರದಾರ,
ಕರ್ನಾಟಕ ಸರ್ವಜನರ ರಾಜ್ಯದ ಮುಖ್ಯಮಂತ್ರಿ
ಶ್ರೀ ಸಿದ್ಧರಾಮಯ್ಯ
ರವರಿಗೆ
ಜನುಮದಿನದ ಶುಭಾಶಯಗಳು
ಶುಭಕೋರುವವರು
ದರ್ಶನ್ ಧ್ರುವನಾರಾಯಣ್
ಶಾಸಕರು, ನಂಜನಗೂಡು ವಿಧಾನಸಭಾ ಕ್ಷೇತ್ರ

ಮೈಸೂರು ಮಿತ್ರ ಶನಿವಾರ 12 ಆಗಸ್ಟ್ 2023

ಬಾಯ್ತೆರೆದಿದ್ದ ಫುಟ್‌ಪಾತ್ ಚರಂಡಿಗೆ ಸ್ಲಾಬ್ ಅಳವಡಿಕೆ



ಮೈಸೂರು, ಆ. 11(ಆರ್‌ಕೆ)– ಮೈಸೂರಿನ ಅರಮನೆ ಪಶ್ಚಿಮ ಭಾಗದ ಸಯ್ಯಾಜಿರಾವ್ ರಸ್ತೆಯ ಫುಟ್‌ಪಾತ್‌ನಲ್ಲಿ ತೆರೆದುಕೊಂಡಿದ್ದ ಚರಂಡಿಗೆ ಮೇಯರ್ ಶಿವಕುಮಾರ್ ನೇತೃತ್ವದಲ್ಲಿ ಪಾಲಿಕೆ ಅಧಿಕಾರಿಗಳು ಟೈಲ್ಸ್ ಸ್ಲ್ಯಾಬ್ ಹಾಕಿ ಮುಚ್ಚಿಸಿದರು. 'ಮೈಸೂರು ಮಿತ್ರ'ನ ಗುರುವಾರದ ಸಂಚಿಕೆಯಲ್ಲಿ 'ಅಪಾಯಕ್ಕೆ ಬಾಯ್ತೆರೆದ ಫುಟ್‌ಪಾತ್ ಸ್ಲ್ಯಾಬ್‌ಗಳು' ಶೀರ್ಷಿಕೆಯಡಿ ಚಿತ್ರ ಸಹಿತ ವರದಿ ಪ್ರಕಟವಾಗಿದ್ದ ಬೆನ್ನಲ್ಲೇ ಎಚ್ಚೆತ್ತ ಮೇಯರ್ ಇಂದು ಮಧ್ಯಾಹ್ನ ಸ್ಥಳಕ್ಕೆ ಸ್ವತಃ ಖುದ್ದು ಭೇಟಿ ನೀಡಿ ಬಾಯ್ತೆರೆದಿದ್ದ ಚರಂಡಿ ಮೇಲೆ ಸ್ಲ್ಯಾಬ್ ಟೈಲ್ಸ್ ಅಳವಡಿಸಿದರಲ್ಲದೆ, ಇಡೀ ಅರಮನೆ ಸುತ್ತ ಪರಿಶೀಲಿಸಿ ಅಪಾಯ ತಂದೊಡ್ಡುವ ಸ್ಥಳದಲ್ಲಿ ಅಗತ್ಯ ಕಾಮಗಾರಿ ಮಾಡಿಸಿ ಜನರು ಸರಾಗವಾಗಿ ಓಡಾಡಲು ಅನುವು ಮಾಡಿಕೊಟ್ಟರು. ಅದೇ ರೀತಿ ಲಲಿತಮಹಲ್ ರಸ್ತೆಯ ಎಟಿಐ ಎದುರು ಫುಟ್‌ಪಾತ್‌ನಲ್ಲಿ ಉಂಟಾಗಿದ್ದ ಗುಂಡಿಗೂ ಟೈಲ್ಸ್ ಅಳವಡಿಸಿದರು. ವಾರಕ್ಕೊಮ್ಮೆ ಮೈಸೂರು ನಗರದಾದ್ಯಂತ ಸಂಚರಿಸಿ, ರಸ್ತೆ, ಚರಂಡಿ, ಫುಟ್‌ಪಾತ್ ಸಮಸ್ಯೆ ಗುರ್ತಿಸಿ ಬಗೆಹರಿಸುವುದಾಗಿಯೂ ಶಿವಕುಮಾರ್ ತಿಳಿಸಿದ್ದಾರೆ.

ಮಿತ್ರನ ಫಲಶ್ರುತಿ

ಟೆಂಪೋ ಟ್ರಾವೆಲರ್‌ಗೆ ಸಿಲುಕಿ ಬಾಲಕ ಸಾವು

ಮೈಸೂರು, ಆ. 11(ಆರ್‌ಕೆ)– ಟೆಂಪೋ ಟ್ರಾವೆಲರ್‌ಗೆ ಸಿಲುಕಿ ಶಾಲಾ ಬಾಲಕನೋರ್ವ ಸಾವನ್ನಪ್ಪಿರುವ ಘಟನೆ ಮೈಸೂರಿನ ಹೆಬ್ಬಾಳಿನ ಅಭಿಷೇಕ್ ಸರ್ಕಲ್‌ನಲ್ಲಿ ಇಂದು ಸಂಜೆ ಸಂಭವಿಸಿದೆ.

ಹೆಬ್ಬಾಳು ನಿವಾಸಿ ರಾಮಶೆಟ್ಟಿ ಅವರ ಪುತ್ರ ಚರಣ್ ಬಾಲಾಜಿ(10) ಸಾವನ್ನಪ್ಪಿದ ಬಾಲಕ. ಶಾಲೆಯೊಂದರಲ್ಲಿ 5ನೇ ತರಗತಿ ಓದುತ್ತಿದ್ದ ಆತ, ಸೂರ್ಯ ಬೇಕರಿ ಕಡೆಯಿಂದ ಸೈಕಲ್‌ನಲ್ಲಿ ಬರುತ್ತಿದ್ದಾಗ ರಿಂಗ್ ರಸ್ತೆ ಕಡೆಯಿಂದ ಬರುತ್ತಿದ್ದ ಟೆಂಪೋ ಟ್ರಾವೆಲರ್ (ಕೆಎ 01–ಎಬಿ 2739)ಗೆ ಸಂಜೆ 5.15 ಗಂಟೆಯಲ್ಲಿ ಅಭಿಷೇಕ್ ಸರ್ಕಲ್‌ನಲ್ಲಿ ಸಿಲುಕಿದ.

ಪರಿಣಾಮ ಚರಣ್ ಬಾಲಾಜಿಗೆ ತೀವ್ರವಾಗಿ ಗಾಯವಾಯಿತು. ತಕ್ಷಣ ಟೆಂಪೋ ಟ್ರಾವೆಲರ್ ಚಾಲಕನೇ ತನ್ನ ವಾಹನದಲ್ಲಿ ಬಾಲಕನನ್ನು ಬೃಂದಾವನ ಆಸ್ಪತ್ರೆಗೆ ಕರೆದೊಯ್ದರಾದರೂ, ಪರೀಕ್ಷಿಸಿದ ವೈದ್ಯರು, ಆತ ಮಾರ್ಗ ಮಧ್ಯೆಯೇ ಕೊನೆಯುಸಿರೆಳೆದಿರುವುದನ್ನು ದೃಢಪಡಿಸಿದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ವಿವಿ ಪುರಂ ಸಂಚಾರ ಠಾಣೆ ಪೊಲೀಸರು, ಮಹಜರು ನಡೆಸಿ ಬೃಂದಾವನ ಆಸ್ಪತ್ರೆಯಿಂದ ಬಾಲಕನ ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸ್ಥಳಾಂತರಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಟಿಟಿ ವಾಹನ ಹಾಗೂ ಚಾಲಕನನ್ನು ವಶಕ್ಕೆ ಪಡೆದಿದ್ದಾರೆ.

ಹಾಡಹಗಲೇ 40 ಲಕ್ಷ ನಗದಿನೊಂದಿಗೆ ಕಾರು ಅಪಹರಣ

● ಬೇಗೂರು ಗ್ರಾಮದಲ್ಲಿ ಘಟನೆ ● ಎರಡು ಕಾರುಗಳಲ್ಲಿ ಬಂದಿದ್ದ ದುಷ್ಕರ್ಮಿಗಳು ● ಒಂದು ಕಾರು ಅಪಘಾತಕ್ಕೀಡಾಗಿ ನಾಲ್ವರು ದುಷ್ಕರ್ಮಿಗಳು ಸೆರೆ



ಗುಂಡ್ಲುಪೇಟೆ, ಆ.11– ರಾಷ್ಟ್ರೀಯ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಕಾರನ್ನು ಅಡ್ಡಗಟ್ಟಿ ಚಿನ್ನದ ವ್ಯಾಪಾರಿ ಹಾಗೂ ಚಾಲಕನನ್ನು ಹೊರಗೆ ಎಳೆದಾಕಿ ಹಾಡಹಗಲೇ 40 ಲಕ್ಷ ರೂ. ನಗದು ಸಮೇತ ಕಾರನ್ನು ಅಪ ಹರಿಸಿದ ಘಟನೆ ತಾಲೂಕಿನ ಬೇಗೂರು ಗ್ರಾಮದಲ್ಲಿ ಶುಕ್ರವಾರ ನಡೆದಿದೆ.

ಘಟನೆ ನಡೆದ ಕೆಲವೇ ನಿಮಿಷಗಳಲ್ಲಿ ಪೊಲೀಸರು ಸೋಮಹಳ್ಳಿ ಗ್ರಾಮಸ್ಥರ ನೆರವಿನಿಂದ ನಾಲ್ವರು ದುಷ್ಕರ್ಮಿಗಳನ್ನು ಬಂಧಿಸಿ ಕಾರು ವಶಪಡಿಸಿಕೊಂಡಿದ್ದಾರೆ. ಎರಡು ಕಾರುಗಳಲ್ಲಿ ಅಪಹರಣಕಾರರು ಬಂದಿದ್ದರೆಂದು ಹೇಳಲಾಗಿದ್ದು, ಅಪಹರಣಕಾರರ ಮತ್ತೊಂದು ಕಾರು ಮತ್ತು ಅಪಹರಿಸಲ್ಪಟ್ಟ ಕಾರಿಗಾಗಿ ಪೊಲೀಸರು ಹುಡುಕಾಟ ನಡೆಸಿದ್ದಾರೆ.

ವಿವರ: ಶುಕ್ರವಾರ ಬೆಳಗ್ಗೆ 11 ಗಂಟೆ ಸಮಯದಲ್ಲಿ ಮೈಸೂರಿನಿಂದ ಕೇರಳದತ್ತ ತೆರಳುತ್ತಿದ್ದ ಕೇರಳ ಮೂಲದ ಚಿನ್ನದ ವ್ಯಾಪಾರಿ ಸುಖದೇವ್ ಎಂಬುವರ ಹೋಂಡಾ ಸಿಟಿ ಕಾರನ್ನು ಬೇಗೂರಿನ ಮುಖ್ಯರಸ್ತೆಯಲ್ಲಿ ಇಟಿಯಾಸ್ ಹಾಗೂ ಇನ್ನೋವಾ ಕಾರುಗಳಲ್ಲಿ ಹೆಲ್ಮೆಟ್ ಧರಿಸಿ ಬಂದಿದ್ದ ದುಷ್ಕರ್ಮಿಗಳು ಅಡ್ಡಗಟ್ಟಿ ಚಾಲಕ ಅಶ್ರಫ್ ಹಾಗೂ ಸುಖದೇವ್ ಅವರನ್ನು ಕಾರಿನಿಂದ ಎಳೆದು ಹೊರಹಾಕಿ ಕಾರನ್ನು ಅಪಹರಿಸಿದರು.

ಅಪಹರಣಕಾರರು ತಾವು ಅಪಹರಿಸಿದ ಕಾರು ಹಾಗೂ ತಾವು ಬಂದಿದ್ದ ಎರಡೂ ಕಾರುಗಳು ಸೇರಿ ಮೂರು ಕಾರುಗಳಲ್ಲಿ ಬೇರೆ ಬೇರೆ ದಿಕ್ಕುಗಳಲ್ಲಿ ಸಾಗುವ ಮೂಲಕ ಪೊಲೀಸರ ಕಣ್ತಪ್ಪಿಸಲು ಪ್ರಯತ್ನಿಸಿದ್ದಾರೆ. ಆದರೆ ಸೋಮಹಳ್ಳಿ ಬಳಿ ಅಪಹರಣಕಾರರ ಇನ್ನೋವಾ ಕಾರು ಸೇತುವೆಗೆ ಡಿಕ್ಕಿಹೊಡೆದು ನಿಂತಿದೆ. ಈ ವೇಳೆ ಗ್ರಾಮದ ಬಸವನ ಗುಡಿಯ ಸಮೀಪ ಕುಳಿತಿದ್ದ ನಿರಂಜನ, ಮಣಿಕಂಠ ಹಾಗೂ ಮಹೇಶ್ ಎಂಬ ಯುವಕರು ಕಾರಿನತ್ತ ಓಡಿ ಬಂದಿದ್ದಾರೆ.

ಇವರನ್ನು ಕಂಡ ಅಪಹರಣಕಾರರು ಓಡಲು ಆರಂಭಿಸಿದಾಗ ಯುವಕರು ಅವರನ್ನು ಹಿಡಿದುಕೊಂಡಿದ್ದಾರೆ. ದರೋಡೆಕೋರರ ಬೆನ್ನತ್ತಿಬಂದ ಪೊಲೀಸರು ನಾಲ್ವರು ದುಷ್ಕರ್ಮಿಗಳನ್ನು ವಶಕ್ಕೆ ಪಡೆದು ಬೇಗೂರು ಠಾಣೆಗೆ ಕರೆದೊಯ್ದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೂ ಭೇಟಿ ನೀಡಿ ಘಟನೆಯ ವಿವರ ಪಡೆದರು.

ಎರಡೂ ಕಾರುಗಳಲ್ಲೂ ಸೇರಿ ಒಟ್ಟು 8 ಮಂದಿ ಅಪಹರಣಕಾರರು ಇದ್ದರು ಎಂದು ಹೇಳಲಾಗಿದ್ದು, ಅಪಹರಣದ ವಿಚಾರ ತಿಳಿಯುತ್ತಿದ್ದಂತೆಯೇ ಚಾಮರಾಜನಗರ ಜಿಲ್ಲಾ ಪೊಲೀಸರು ಗುಂಡ್ಲುಪೇಟೆಯ ಎಲ್ಲಾ ಸಂಪರ್ಕ ರಸ್ತೆಗಳಲ್ಲೂ ನಾಕಾಬಂಧಿ ರಚಿಸಿ ಅಪಹಣಕಾರರ ಬಂಧನಕ್ಕೆ ಬಲೆ ಬೀಸಿದ್ದಾರೆ. ಈ ಸಂಬಂಧ ಬೇಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆಕ್ಯೂಪ್ರೆಶರ್, ಸುಜೋಕ್ ಚಿಕಿತ್ಸಾ ಶಿಬಿರ

ಮೈಸೂರು, ಆ. 11– ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ ವತಿಯಿಂದ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಪ್ರಸನ್ನ ಗಣಪತಿ ದೇವಸ್ಥಾನ ಮತ್ತು ಶ್ರೀ ವೀರಾಂಜನೇಯಸ್ವಾಮಿ ದೇವಸ್ಥಾನದಲ್ಲಿ ಆ. 13 ರಿಂದ 21 ದಿನಗಳ ಕಾಲ ಆಕ್ಯೂಪ್ರೆಶರ್, ಸುಜೋಕ್ ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಬೆಳಗ್ಗೆ 10.30 ರಿಂದ ಸಂಜೆ 6.30ರವರೆಗೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9845182716, 7892798768 ಸಂಪರ್ಕಿಸಬಹುದು.

ವಿ. ಸುರೇಶ್‌ಬಾಬು ನಿಧನ



ಮೈಸೂರು, ಆ. 11(ಆರ್‌ಕೆ)– ಮೈಸೂರಿನ ರಾಮಾನುಜ ರಸ್ತೆ 14ನೇ ಮೇನ್ ನಿವಾಸಿಯಾದ ಪಿಕೆಟಿಬಿ ಆಸ್ಪತ್ರೆ ನಿವೃತ್ತ ಡ್ರಗ್ಗಿಸ್ಟ್ ವಿ. ಸುರೇಶ್‌ಬಾಬು(64) ಇಂದು ಮಧ್ಯಾಹ್ನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ನಿಧನರಾದರು.

ಅವರು ಪತ್ನಿ ಸುನಂದಾ, ಓರ್ವ ಪುತ್ರ ಓರ್ವ ಪುತ್ರಿ ಹಾಗೂ ಅಪಾರ ಬಂಧು–ಬಳಗ, ಸ್ನೇಹಿತರು, ಹಿತೈಷಿಗಳನ್ನು ಅಗಲಿದ್ದಾರೆ. ನಾಳೆ (ಆ. 12) ಮಧ್ಯಾಹ್ನ ಚಾಮುಂಡಿ ಬೆಟ್ಟದ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುದೀರ್ಘ ಅನಾರೋಗ್ಯದಿಂದ ಬಳಲುತ್ತಿದ್ದ ಅವರು, ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು. ಕರ್ನಾಟಕ ರಾಜ್ಯ ಫಾರ್ಮಸಿಸ್ಟ್ ಸಂಘಟನೆಯಲ್ಲಿ ಸಕ್ರಿಯವಾಗಿದ್ದ ಸುರೇಶ್‌ಬಾಬು, ಸುಮಾರು 25 ವರ್ಷಗಳ ಕಾಲ ರಜೆ ಪಡೆಯದೇ ಸರ್ಕಾರಿ ಕೆಲಸ ಮಾಡಿ ಈ ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪ್ರಶಂಸೆಗೂ ಪಾತ್ರರಾಗಿದ್ದರು.

ಇವರ ನಿಧನಕ್ಕೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಫಾರ್ಮಸಿಸ್ಟ್‌ಗಳ ಸಂಘದ ಮಾಜಿ ಅಧ್ಯಕ್ಷ ವಿ. ಮಂಜುನಾಥ, ಫಾರ್ಮಸಿಸ್ಟ್‌ಗಳು ತೀವ್ರ ಸಂತಾಪ ಸೂಚಿಸಿದ್ದಾರೆ.

ಇಂದು ರಾಜ್ಯಮಟ್ಟದ 10ನೇ ವಕೀಲರ ಸಮ್ಮೇಳನ

ಎರಡು ದಿನಗಳ ಸಮಾವೇಶ, ಸಿಎಂ ಸಿದ್ದರಾಮಯ್ಯ ಉದ್ಘಾಟನೆ

ಮೈಸೂರು, ಆ.11(ಜಿಎ)–ಮೈಸೂರಿನಲ್ಲಿ ಶನಿವಾರದಿಂದ ನಡೆಯಲಿರುವ ರಾಜ್ಯಮಟ್ಟದ 10ನೇ ವಕೀಲರ ಸಮ್ಮೇಳನಕ್ಕೆ ಭರದ ಸಿದ್ಧತೆ ನಡೆಯುತ್ತಿದ್ದು, ಬೃಹತ್ ವೇದಿಕೆ ನಿರ್ಮಾಣವಾಗಿದೆ.

ರಾಜ್ಯ ವಕೀಲರ ಪರಿಷತ್, ಕರ್ನಾಟಕ ರಾಜ್ಯ ವಕೀಲರ ಸಂಘ ಹಾಗೂ ಮೈಸೂರು ವಕೀಲರ ಸಂಘದ ಸಂಯುಕ್ತಾಶ್ರಯದಲ್ಲಿ ರಾಜ್ಯಮಟ್ಟದ ವಕೀಲರ ಸಮ್ಮೇಳನ ಮೈಸೂರಿನ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ಆ.12 ಮತ್ತು 13ರಂದು ಏರ್ಪಡಿಸಲಾಗಿದ್ದು, ಬೃಹತ್ ವೇದಿಕೆ, ಆಸನದ ವ್ಯವಸ್ಥೆ ಮತ್ತು ಊಟದ ಸಿದ್ಧತೆ ನಡೆಸಲಾಗುತ್ತಿದೆ.

ಶನಿವಾರ ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಸುಪ್ರೀಂಕೋರ್ಟ್ ನ್ಯಾಯಮೂರ್ತಿಗಳಾದ ಎ.ಎಸ್. ಬೋಪಣ್ಣ, ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಿ. ವರಾಲೆ, ಭಾರತೀಯ ವಕೀಲರ ಪರಿಷತ್ ಅಧ್ಯಕ್ಷ ಮೋಹನ್ ಕುಮಾರ್ ಮಿಶ್ರಾ, ಸಚಿವರಾದ ಹೆಚ್.ಕೆ ಪಾಟೀಲ್, ಡಾ.ಹೆಚ್.ಸಿ.ಮಹದೇವಪ್ಪ ಸೇರಿದಂತೆ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಮಧ್ಯಾಹ್ನ 3ರಿಂದ ಸಂಜೆ 5.30ರವರೆಗೆ ಎರಡು ಗೋಷ್ಠಿ ಜರುಗಲಿವೆ. ಸಂಜೆ 6.30ರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಜರುಗಲಿದೆ.

ಸಮ್ಮೇಳನ ನಡೆಯುವ ಮೈಸೂರಿನ ದಸರಾ ವಸ್ತು ಪ್ರದರ್ಶನ ಮೈದಾನದಲ್ಲಿ ವೇದಿಕೆ ಕಾರ್ಯಕ್ರಮಕ್ಕೆ 200 X 300 ಅಳತೆಯ ಬೃಹತ್ ವೇದಿಕೆ ನಿರ್ಮಾಣ ಮಾಡಿದ್ದು, ಈ ವೇದಿಕೆಯಲ್ಲಿ ಗಣ್ಯರಿಗಾಗಿ 100 ವಿಶೇಷ ಆಸನಗಳನ್ನು ವ್ಯವಸ್ಥೆ ಮಾಡಲಾಗಿದೆ. ಮಳೆ ಬಂದರೆ ಯಾವುದೇ ತೊಂದರೆಯಾಗಬಾರದು ಎಂದು ಜರ್ಮನ್ ಪೆಂಡಾಲ್ ಹಾಕಲಾಗಿದೆ. ಮುಖ್ಯಮಂತ್ರಿಗಳು ಮೈದಾನಕ್ಕೆ ಬರುವ ಎರಡು ಕಡೆ ಮರದ ಬ್ಯಾರಿಕೇಡ್ ನಿರ್ಮಾಣ ಮಾಡಿದ್ದಾರೆ. ಜೊತೆಗೆ 200ಕ್ಕೂ ಅಧಿಕ ಸಿಸಿ ಕ್ಯಾಮರ ಅಳವಡಿಸಲಾಗಿದೆ. ಸಮ್ಮೇಳನಕ್ಕೆ ಸುಮಾರು 15 ಸಾವಿರ ಮಂದಿ ಬರುವ ನಿರೀಕ್ಷೆ ಇದ್ದು, ಇಷ್ಟು ಜನಕ್ಕೂ ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ಸಂಜೆ ಲಘು ಉಪಾಹಾರ ಮತ್ತು ರಾತ್ರಿ ಊಟದ ವ್ಯವಸ್ಥೆ ಮಾಡಲಾಗಿದೆ.

ಆ.13ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಮೂರು ಗೋಷ್ಠಿ ನಡೆಯಲಿದೆ. ಮಧ್ಯಾಹ್ನ 3ಕ್ಕೆ ಸಮ್ಮೇಳನದ ಸಮಾರೋಪ ಸಮಾರಂಭ ನಡೆಯಲಿದ್ದು, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸ್ಮರಣ ಸಂಚಿಕೆಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಬಿಡುಗಡೆ ಮಾಡಲಿದ್ದಾರೆ. ಹಿಮಾಚಲ ಪ್ರದೇಶ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿ ಅವರು 10ನೇ ಸಮ್ಮೇಳನದ ವೆಲ್ಫೇರ್ ಸ್ಟ್ಯಾಂಪ್ಸ್ ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಉಪಲೋಕಾಯುಕ್ತ ನ್ಯಾ.ಕೆ.ಎನ್.ಫಣೀಂದ್ರ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ, ಶಾಸಕ ಎ.ಎಸ್.ಪೊನ್ನಣ್ಣ ಸೇರಿದಂತೆ ಇನ್ನಿತರರು ಪಾಲ್ಗೊಳ್ಳಲಿದ್ದಾರೆ.

ರಾಜ್ಯಮಟ್ಟದ 10ನೇ ವಕೀಲರ ಸಮ್ಮೇಳನದಲ್ಲಿ ರಾಷ್ಟ್ರ ನಿರ್ಮಾಣದಲ್ಲಿ ವಕೀಲರ ಪಾತ್ರ, ಕಾನೂನು ವೃತ್ತಿಯಲ್ಲಿ ಹೊಸ ಆಯಾಮ, ಯುವ ವಕೀಲರು ಎದುರಿಸುತ್ತಿರುವ ಸವಾಲು ಮತ್ತು ಸಮಸ್ಯೆ, ಸಾರ್ವಜನಿಕ ಆಡಳಿತದಲ್ಲಿ ವಕೀಲರ ಪಾತ್ರ ಮೊದಲಾದ ವಿಷಯಗಳ ಬಗ್ಗೆ ಹಿರಿಯ ನ್ಯಾಯಮೂರ್ತಿಗಳು, ಹಿರಿಯ ವಕೀಲರು ಮಾತನಾಡಲಿದ್ದಾರೆ.



ಹೋಟೆಲ್ ರೂಂಗಳು ಭರ್ತಿ

ಸಾಲು ಸಾಲು ರಜೆ, ರಾಜ್ಯಮಟ್ಟದ ವಕೀಲರ ಸಮ್ಮೇಳನ ಸ್ವಾತಂತ್ರ್ಯ ದಿನಾಚರಣೆಯ ಮಹೋತ್ಸವ ರಜೆಯ ಹಿನ್ನೆಲೆಯಲ್ಲಿ ಮೈಸೂರಿನ ಎಲ್ಲಾ ಹೋಟಲ್‌ಗಳಲ್ಲಿ ಸರ್ಕಾರಿ ಅತಿಥಿ ಗೃಹಗಳು, ಕೆಲವು ಕಲ್ಯಾಣ ಮಂಟಪಗಳು, ಹಾಗೂ ಕ್ಲಬ್‌ಗಳಲ್ಲಿ ಆ.11 ರಿಂದ 15ರವರೆಗೂ ಭರ್ತಿಯಾಗಿವೆ.

ಮೈಸೂರಿಗೆ ಸ್ವಚ್ಛತೆಯಲ್ಲಿ ಪ್ರಥಮ ಸ್ಥಾನ ಗಳಿಸಲು ಸಾರ್ವಜನಿಕರ ಸಹಕಾರಕ್ಕೆ ಮನವಿ

ಮೈಸೂರು, ಆ. 11(ಆರ್‌ಕೆ)– 2023ರ ಸ್ವಚ್ಛ ಭಾರತ ಸರ್ವೇಕ್ಷಣೆಯಲ್ಲಿ ಮೈಸೂರು ನಗರ ಪ್ರಥಮ ಸ್ಥಾನ ಗಳಿಸಲು ನಾಗರಿಕರಿಂದ ಪೂರಕ ಫೀಡ್‌ಬ್ಯಾಕ್ ಅಗತ್ಯ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರು ಮಹಾ ನಗರಪಾಲಿಕೆ ಕಚೇರಿ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಇಂದು ನಡೆದ ಸಂಘ–ಸಂಸ್ಥೆಗಳ ಪ್ರಮುಖರ ಸಭೆಯಲ್ಲಿ ಮಾತನಾಡಿದ ಕೇಂದ್ರ ನಗರಾಭಿವೃದ್ಧಿ ಸಚಿವಾಲಯವು ಪ್ರತೀ ವರ್ಷದಂತೆ ಈ ಬಾರಿಯೂ ಸ್ವಚ್ಛ ಸಮೀಕ್ಷೆ ಆರಂಭಿಸಿದ್ದು, ಒಟ್ಟು 600 ಅಂಕ ಗಳಿಸಬೇಕಾಗಿದೆ. ನಗರದ ಒಟ್ಟು ಜನಸಂಖ್ಯೆಯ ಶೇ. 10ರಷ್ಟು ನಾಗರಿಕರು ಸ್ವಚ್ಛತೆಯ ಬಗ್ಗೆ ತಮ್ಮ ಅಭಿಪ್ರಾಯ ನೀಡಬೇಕಾಗಿದೆ ಎಂದರು.

ನಗರದ ರಸ್ತೆ, ಜಂಕ್ಷನ್, ಮಾರುಕಟ್ಟೆ, ವಾಣಿಜ್ಯ ಕೇಂದ್ರ, ಮಾಲ್‌ಗಳು, ಸರ್ಕಾರಿ ಕಚೇರಿ ಆವರಣಗಳಲ್ಲಿ ಸ್ವಚ್ಛತೆ ಕಾಪಾಡುವುದು, ಮಳೆ ನೀರು ಚರಂಡಿ, ಒಳಚರಂಡಿ ಶೌಚಾಲಯಗಳು, ಕಸ ಸಂಗ್ರಹ, ಸಾಗಣೆ, ವಿಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸುವುದು ಪಾಲಿಕೆಯ ಜವಾಬ್ದಾರಿಯಾಗಿದೆ. ಆರೋಗ್ಯ ಶಾಖೆ, ಪರಿಸರ ಇಂಜಿನಿಯರ್‌ಗಳು ಮೈಸೂರು ನಗರವನ್ನು ಸ್ವಚ್ಛವಾಗಿರಿಸಲು ಶ್ರಮಿಸಬೇಕು ಎಂದು ಅವರು ತಿಳಿಸಿದರು.

ಸರ್ವೇಕ್ಷಣೆಯಲ್ಲಿ ಹೆಚ್ಚು ಅಂಕ ಗಳಿಸಲು ಸಂಘ–ಸಂಸ್ಥೆಗಳು, ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬರಬೇಕಾಗಿದೆ. ಪಾಲುದಾರರಿಂದ ಸ್ವಚ್ಛತೆ ಬಗ್ಗೆ ಒಳ್ಳೆಯ ಅಭಿಪ್ರಾಯಗಳು ಬಂದರೆ ಮಾತ್ರ ಮೈಸೂರು ಪ್ರಥಮ ಸ್ವಚ್ಛ ನಗರವೆಂಬ ಪ್ರಶಸ್ತಿ ಬರಲಿದೆ. 600 ಅಂಕಗಳ ಸಮೀಕ್ಷೆಗೆ ಜನರು ಸಹಕರಿಸಬೇಕೆಂದು ಶಿವಕುಮಾರ್ ಮನವಿ ಮಾಡಿದರು.

ಜೆಎಸ್‌ಎಸ್‌ನ ಶ್ರೀಹರಿ, ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು, ವಿಜಯನಗರ 3ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿಕುಮಾರ್, ಪಾಲಿಕೆ ಉಪ ಆಯುಕ್ತ (ಅಭಿವೃದ್ಧಿ) ಸೋಮಶೇಖರ್, ಆರೋಗ್ಯಾಧಿಕಾರಿ ಡಾ. ಹರ್ಷ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಕೆ.ಎಸ್. ಮೃತ್ಯುಂಜಯಮೂರ್ತಿ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಕಿಂಗ್ ಫಿಷರ್ ಬಿಯರ್‌ನಲ್ಲಿ ಆರೋಗ್ಯಕ್ಕೆ ಹಾನಿಕಾರಕ ಅಂಶ

ಕೋಟ್ಯಾಂತರ ರೂಪಾಯಿ ಮೌಲ್ಯದ ಕಿಂಗ್ ಫಿಷರ್ ಬಿಯರ್ ಜಪ್ತಿ

● ಮೈಸೂರಿನ ನಂಜನಗೂಡಿನಲ್ಲಿ ತಯಾರಾಗಿದ್ದ ಬಿಯರ್ ● ಜುಲೈ 15ರಂದು ಬಾಟ್ಲಿಂಗ್ ವೇಳೆ ಹಾನಿಕಾರಕ ಅಂಶ ಸೇರ್ಪಡೆ ● ಅಬಕಾರಿ ಇಲಾಖೆಯವರ ದಿಢೀರ್ ಕಾರ್ಯಾಚರಣೆ

ಮೈಸೂರು, ಆ.11(ಬಿಎಲ್‌ಯು)– ಮೈಸೂರಿನ ನಂಜನಗೂಡು ಯುನೈಟೆಡ್ ಬ್ರೆವರೀಸ್ ಲಿಮಿಟೆಡ್‌ನಲ್ಲಿ ತಯಾರಾಗಿರುವ ಕಿಂಗ್ ಫಿಷರ್ ಬಿಯರ್‌ನಲ್ಲಿ ಆರೋಗ್ಯಕ್ಕೆ ಹಾನಿಕಾರಕ ಸೆಡಿಮೆಂಟ್ ಅಥವಾ ಬಗ್ಗಡ ಶೇಖರಣೆ ಆಗಿರುವ ಕಾರಣ ಕೋಟ್ಯಾಂತರ ರೂಪಾಯಿ ಮೌಲ್ಯದ ಕಿಂಗ್ ಫಿಷರ್ ಬಿಯರ್ ಬಾಟಲ್‌ಗಳನ್ನು ಅಬಕಾರಿ ಇಲಾಖೆಯವರು ಜಪ್ತಿ ಮಾಡಿದ್ದಾರೆ.

ಬಿಯರ್ ಸೇರಿದಂತೆ ಯಾವುದೇ ಮದ್ಯ ತಯಾರಾದರೂ ಅದರ ಮಾದರಿ ಬಾಟಲ್‌ಗಳನ್ನು ಮದ್ಯ ತಯಾರಿಕೆ ಕಂಪನಿಗಳು ಅಬಕಾರಿ ಇಲಾಖೆಗೆ ಕಳುಹಿಸಬೇಕು. ಹೀಗೆ ಕಳುಹಿಸಿದ ಮದ್ಯವನ್ನು ಅಬಕಾರಿ ಇಲಾಖೆಯವರು ತಮ್ಮ ಕಚೇರಿಯಲ್ಲಿರುವ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸುತ್ತಾರೆ.

ನಂಜನಗೂಡಿನ ಯುನೈಟೆಡ್ ಬ್ರೆವರೀಸ್ ಲಿಮಿಟೆಡ್‌ನಲ್ಲಿ ಜುಲೈ 15 ರಂದು ಬಾಟ್ಲಿಂಗ್ ಮಾಡಲಾದ ಕಿಂಗ್ ಫಿಷರ್ ಬಿಯರ್‌ನಲ್ಲಿ ಸೆಡಿಮೆಂಟ್ ಶೇಖರಣೆಯಾಗಿತ್ತು. ಆರೋಗ್ಯಕ್ಕೆ ಹಾನಿಕಾರಕವಾದ ಸೆಡಿಮೆಂಟ್ ಶೇಖರಣೆ ಆಗಿರುವುದು ಅಬಕಾರಿ ಇಲಾಖೆಯ ಪ್ರಯೋಗಾಲದಲ್ಲಿ ದೃಢಪಟ್ಟಿತು. ಇದನ್ನು ಖಚಿತಪಡಿಸಿಕೊಳ್ಳಲು ಮತ್ತೊಂದು ಬಾರಿ ಪರೀಕ್ಷೆ ಮಾಡಿದಾಗ ಅದೇ ಫಲಿತಾಂಶ ಬಂದಿತು.

ಈ ಹಿನ್ನೆಲೆಯಲ್ಲಿ ಜುಲೈ 15ರಂದು ಬಾಟ್ಲಿಂಗ್ ಆಗಿರುವ ಕಿಂಗ್ ಫಿಷರ್ ಬಿಯರ್ ಮಾರಾಟ ಮಾಡಬಾರದು ಎಂದು ಅಬಕಾರಿ ಉಪ ಆಯುಕ್ತರು ಆಗಸ್ಟ್ 2ರಂದು ಆದೇಶ ನೀಡಿದರು.

ಸೆಡಿಮೆಂಟ್ ಶೇಖರಣೆಯಾಗಿರುವ ಬಿಯರ್ ಸೇವನೆ ಮಾಡಿದರೆ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿತ್ತು. ಈ ಹಿನ್ನೆಲೆ ಕೂಡಲೇ ಕಾರ್ಯಮಗ್ನರಾದ ಅಬಕಾರಿ ಇಲಾಖೆಯ ಸಿಬ್ಬಂದಿ ಆ ದಿನದಂದು ಬಾಟ್ಲಿಂಗ್ ಆಗಿರುವ ಬಿಯರ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಗೋಡೌನ್ ಸೇರಿದಂತೆ ಇತರೆಡೆ ಸರಬರಾಜಾಗಿದ್ದ ಕೋಟ್ಯಾಂತರ ರೂಪಾಯಿ ಮೌಲ್ಯದ ಬಿಯರ್ ಬಾಟಲ್‌ಗಳನ್ನು ಸೀಝ್ ಮಾಡಿದ್ದಾರೆ.

ಸದರಿ ದಾಸ್ತಾನಿನ ಬಗ್ಗೆ ರಾಸಾಯನಿಕ ಪ್ರಯೋಗಾಲಯದಿಂದ ಮತ್ತೊಂದು ವರದಿ ಬರುವ ತನಕ ಮಾರಾಟಕ್ಕೆ ಅವಕಾಶ ನೀಡಬಾರದು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಪಾನೀಯ ನಿಗಮದ ಮೂಲಕ ಕಿಂಗ್ ಫಿಷರ್ ಬಿಯರ್‌ಗಳನ್ನು ಹಲವು ಗೋಡೌನ್‌ಗಳಿಗೆ ಸರಬರಾಜು ಮಾಡಲಾಗಿತ್ತು. 19 ಕೋಟಿ ರೂಪಾಯಿ ಮೌಲ್ಯದ ಸುಮಾರು 35 ಸಾವಿರ ಬಿಯರ್ ಬಾಟಲ್ ಗೋಡೌನ್‌ನಿಂದ ಬಾರ್ ಹಾಗೂ ರೆಸ್ಟೋರೆಂಟ್‌ಗಳಿಗೆ ಕೂಡ ಸಬರಾಜಾಗಿತ್ತು. ಕೂಡಲೇ ಕಾರ್ಯಾಚರಣೆ ಕೈಗೊಂಡ ಅಬಕಾರಿ ಇಲಾಖೆಯ ಸಿಬ್ಬಂದಿ ಗೋಡೌನ್ ಹಾಗೂ ಬಾರ್ ಗಳಿಗೆ ಸರಬರಾಜಾಗಿದ್ದ ಬಿಯರ್ ಬಾಟಲ್‌ಗಳನ್ನು ವಶಕ್ಕೆ ತೆಗೆದುಕೊಂಡಿದ್ದಾರೆ.

ಹಾನಿಕಾರಕ ಅಂಶವಿರುವ ಬಿಯಲ್ ಬಾಟಲ್‌ಗಳ ಮಾದರಿಯನ್ನು ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಮತ್ತೊಂದು ವರದಿ ಬರುವ ತನಕ ಸೀಜ್ ಆಗಿರುವ ಬಾಟಲ್‌ಗಳನ್ನು ಮಾರಾಟಕ್ಕೆ ನೀಡಬಾರದು ಎಂದು ಅಬಕಾರಿ ಇಲಾಖೆ ಕಟ್ಟುನಿಟ್ಟಿನ ಆದೇಶ ನೀಡಿದೆ.

ಇಂದು ವಿಶೇಷ ಉಪನ್ಯಾಸ

ಮೈಸೂರು, ಆ.11– ಮೈಸೂರಿನ ಡಾ.ವಿಜಯಲಕ್ಷ್ಮಿ ಬಸವರಾಜ್ ಚಾರಿಟಬಲ್ ಸೊಸೈಟಿ ವತಿಯಿಂದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಆವರಣದ ನಾಲೆಡ್ಜ್ ಪಾರ್ಕ್ ಸೆಮಿನಾರ್ ಹಾಲ್‌ನಲ್ಲಿ ಶನಿವಾರ ಬೆಳಗ್ಗೆ 11ಕ್ಕೆ ವಿಶೇಷ ಉಪನ್ಯಾಸ ಏರ್ಪಡಿಸಲಾಗಿದೆ. ಸಿಎಫ್‌ಟಿಆರ್‌ಐ ನಿವೃತ್ತ ನಿರ್ದೇಶಕರೂ ಆದ ಅಂತಾರಾಷ್ಟ್ರೀಯ ಖ್ಯಾತಿಯ ಆಹಾರ ವಿಜ್ಞಾನಿ ಡಾ.ವಿ.ಪ್ರಕಾಶ್ ಅವರು 'ಆಹಾರ ಸಂಸ್ಕೃತಿ, ಆರೋಗ್ಯ ಮತ್ತು ಪರಿಸರ ಹಾಗೂ ಸುಸ್ಥಿರ ಸ್ವಾಸ್ಥ್ಯ ಇವುಗಳ ನಡುವಣ ಸಮನ್ವಯ ಸಂಬಂಧ' ಕುರಿತು ಉಪನ್ಯಾಸ ನೀಡಲಿದ್ದಾರೆ. ಮಾಹಿತಿಗೆ ಮೊ.ಸಂ: 7483136251 ಸಂಪರ್ಕಿಸಬಹುದು.



ಜಯಪುರ ಗ್ರಾಪಂ ನೂತನ ಅಧ್ಯಕ್ಷ ಮಹದೇವಯ್ಯ, ಉಪಾಧ್ಯಕ್ಷೆ ರೇಣುಕಾ ಅವರನ್ನು ಅಖಿಲ ಕರ್ನಾಟಕ ಶ್ರೀಕಾಂತ್ ಅಭಿಮಾನಿಗಳ ಬಳಗದ ಸದಸ್ಯರು ಅಭಿನಂದಿಸಿದರು. ಈ ವೇಳೆ ಉದ್ಯಮಿ ಎಸ್.ಶ್ರೀಕಾಂತ್, ಅಖಿಲ ಕರ್ನಾಟಕ ಶ್ರೀಕಾಂತ್ ಅಭಿಮಾನಿ ಬಳಗದ ಅಧ್ಯಕ್ಷ ಎಸ್.ಸಂತೋಷ್ ಕುಮಾರ್, ಜಯಪುರ ಡೇರಿ ಅಧ್ಯಕ್ಷ ಮೂಗನಾಯಕ, ಮುಖಂಡರಾದ ಶಿವರಾಜು, ಕೆ.ರಂಗಸ್ವಾಮಿ, ಅಜೀಜ್, ತೋಟ ಮಹದೇವು, ಡೇರಿ ಕಾರ್ಯದರ್ಶಿ ಪಿ.ಬಸವರಾಜು, ಅಬ್ದುಲ್ ಮುತಾಲಿಫ್, ಜವರನಾಯಕ, ಪರಮೇಶ್, ಶಿವಪ್ಪ, ಸಿದ್ದರಾಜು, ಹೊಸಕೆರೆ ಸಣ್ಣಪ್ಪ, ಬಸವಣ್ಣ, ಶಿವಪ್ಪ, ರಾಘವೇಂದ್ರ ಇದ್ದರು.

ರೀಲ್ಸ್ ಮಾಡುತ್ತಿದ್ದ ಪತ್ನಿಯನ್ನು ಕೊಂದು ಶವ ನದಿಗೆಸೆದ ಪತಿರಾಯ

ಪುತ್ರಿ ಹತ್ಯೆಗೆ ತಂದೆಯೇ ಸಾಥ್





ಮಂಡ್ಯ, ಆ.11– ರೀಲ್ಸ್ ಮಾಡುತ್ತಿದ್ದ ಪತ್ನಿಯ ಮೇಲೆ ಅನುಮಾನಗೊಂಡ ಪತಿರಾಯ ಆಕೆಯನ್ನು ಕೊಂದು ಶವವನ್ನು ಕಾವೇರಿ ನದಿಗೆ ಎಸೆದಿರುವ ಘಟನೆ ಮಂಡ್ಯದ ಕೊಪ್ಪಲು ಗ್ರಾಮದಲ್ಲಿ ನಡೆದಿದ್ದು, ಅಳಿಯನ ದುಷ್ಕೃತ್ಯಕ್ಕೆ ಮಾವ ಸಹಕರಿಸಿದ್ದಾನೆ.

ಗ್ರಾಮದ ದೊರೆಸ್ವಾಮಿ ಎಂಬುವರ ಪುತ್ರಿ ಪೂಜಾ(26) ಎಂಬಾಕೆಯನ್ನು ಪತಿ ಶ್ರೀನಾಥ್ (34) ಹತ್ಯೆಗೈದಿದ್ದು, ಒಂದೇ ಗ್ರಾಮದವರಾದ ಇವರಿಬ್ಬರು ಪ್ರೀತಿಸಿ ಮದುವೆಯಾಗಿದ್ದರು. ಇವರಿಗೆ 8 ವರ್ಷದ ಮಗಳಿದ್ದಾಳೆ.

ಇತ್ತೀಚೆಗೆ ಪೂಜಾ ಟಿಕ್‌ಟಾಕ್ ಹಾಗೂ ರೀಲ್ಸ್ ಮಾಡುತ್ತಿದ್ದರಿಂದ ಆಕೆಯ ಮೇಲೆ ಅನುಮಾನಗೊಂಡಿದ್ದ ಶ್ರೀನಾಥ್ ಪದೇ ಪದೆ ಜಗಳವಾಡುತ್ತಿದ್ದ ಎನ್ನಲಾಗಿದೆ. ಆ.7ರಂದು ಬೆಳಗ್ಗೆ ತನ್ನ ಮಗಳು ಶಾಲೆಗೆ ಹೋದ ಸಂದರ್ಭ ಪತ್ನಿಯನ್ನು ಮನೆಯಲ್ಲೇ ಶ್ರೀನಾಥ್ ವೇಲ್‌ನಿಂದ ಕುತ್ತಿಗೆ ಬಿಗಿದು ಕೊಂದಿದಲ್ಲದೇ ಈ ವಿಚಾರವನ್ನು ಪೂಜಾಳ ತಂದೆಗೂ ತಿಳಿಸಿದ್ದಾನೆ. ಮಗಳು ಶಾಲೆ ಮುಗಿಸಿಕೊಂಡು ಬಂದಾಗ ಅನುಮಾನ ಬಾರದಿರಲಿ ಎಂದು ಪತ್ನಿಯ ದೇಹವನ್ನು ಬೈಕ್ ಮೂಲಕ ತನ್ನ ಅಮ್ಮನ ಮನೆಯಲ್ಲಿ ಇರಿಸಿದ್ದಾನೆ. ಮಾರನೇ ದಿನ ಅಂದರೆ ಆ.8ರಂದು ಶ್ರೀನಾಥ್ ಹಾಗೂ ಆತನ ಮಾವ (ಪೂಜಾಳ ತಂದೆ) ದೊರೆಸ್ವಾಮಿ ಇಬ್ಬರೂ ಸೇರಿ ತರಕಾರಿ ತುಂಬುವ ಚೀಲದಲ್ಲಿ ಪತ್ನಿಯ ದೇಹವನ್ನು ತುಂಬಿಕೊಂಡು ಮನೆಯಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ಕಾವೇರಿ ನದಿಗೆ ಬೈಕ್‌ನಲ್ಲಿ ಕೊಂಡೊಯ್ದು ಶವಕ್ಕೆ ಕಲ್ಲು ಕಟ್ಟಿ ನದಿಗೆ ಎಸೆದಿದ್ದಾರೆ. ಈ ಸ್ಥಳದಲ್ಲಿ ಸಾಕಷ್ಟು ಮೊಸಳೆಗಳಿರುವುದರಿಂದ ಮೃತದೇಹವನ್ನು ಅವು ತಿಂದು ಹಾಕುತ್ತವೆ ಎಂಬ ಲೆಕ್ಕಾಚಾರ ಇವರದ್ದಾಗಿತ್ತು.


ನಿನ್ನೆ ಬುಧವಾರ ಫಾರೆಸ್ಟ್ ಗಾರ್ಡ್ ಒಬ್ಬರು ಮೃತ ದೇಹ ನೋಡಿ ಅರಕೆರೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಪೂಜಾ ಆಗಾಗ ಅರಕೆರೆಯಲ್ಲಿರುವ ತನ್ನ ತಂದೆಯ ಹೋಟೆಲ್‌ಗೆ ಹೋಗಿ ಕ್ಯಾಶ್ ಕೌಂಟರ್‌ನಲ್ಲಿ ಕೂರುತ್ತಿದ್ದರಿಂದ ಮೃತದೇಹ ಆಕೆಯದ್ದೆ ಎಂಬುದನ್ನು ಪತ್ತೆ ಹಚ್ಚಲು ಪೊಲೀಸರಿಗೆ ಹೆಚ್ಚು ಸಮಯ ಹಿಡಿಯಲಿಲ್ಲ.

ಈಕೆ ಎರಡು ದಿನಗಳ ಹಿಂದೆ ಸಾವನ್ನಪ್ಪಿರಬಹುದು ಎಂಬ ಕುರುಹುಗಳು ಕಂಡುಬಂದಿದ್ದರಿಂದ ಪತ್ನಿ ನಾಪತ್ತೆ ಬಗ್ಗೆ ದೂರು ನೀಡದಿದ್ದ ಪತಿ ಶ್ರೀನಾಥ್‌ನನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದಾಗ ಕೊಲೆ ಪ್ರಕರಣ ಬಯಲಾಗಿದೆ ಈ ಸಂಬಂಧ ಶ್ರೀನಾಥ್ ಹಾಗೂ ಪೂಜಾಳ ತಂದೆ ದೊರೆಸ್ವಾಮಿಯನ್ನು ಅರಕೆರೆ ಪೊಲೀಸರು ಬಂಧಿಸಿ, ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಆ.15ರಂದು ಕೃತಿ ಬಿಡುಗಡೆ, ಸ್ವಾತಂತ್ರ್ಯೋತ್ಸವ ಕವಿಗೋಷ್ಠಿ

ಮೈಸೂರು, ಆ.11– ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗದ ಆಶ್ರಯದಲ್ಲಿ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾಮಂಟಪದಲ್ಲಿ ಆ.15ರ ಮಂಗಳವಾರ ಬೆಳಿಗ್ಗೆ 10.30ಕ್ಕೆ ಹಿರಿಯ ಲೇಖಕ ಟಿ.ಎಸ್.ನಾಗರಾಜರಾವ್ ಅವರ 'ಸದ್ಗುರು ದರ್ಶನ' ಕೃತಿ ಲೋಕಾರ್ಪಣೆ ಮತ್ತು ಸ್ವಾತಂತ್ರ್ಯೋತ್ಸವ ಕವಿಗೋಷ್ಠಿ ನಡೆಯಲಿದೆ.

ಕೃತಿಯನ್ನು ಹಿರಿಯ ಸಂಸ್ಕೃತ ವಿದ್ವಾಂಸ ಡಾ.ಎಚ್.ವಿ.ನಾಗರಾಜರಾವ್ ಲೋಕಾರ್ಪಣೆ ಮಾಡಿ ಮಾತನಾಡಲಿದ್ದಾರೆ. ಮೈಸೂರು ಜಿಲ್ಲಾ ಕನ್ನಡಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಲಿದ್ದು, ಮೇಲುಕೋಟೆ ವಂಗೀಪುರ ನಂಬೀಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಸಮಾಜಸೇವಕ ಮತ್ತು ಚಿಂತಕ ಡಾ.ಕೆ.ರಘುರಾಂ ವಾಜಪೇಯಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ನಂತರ ನಡೆಯಲಿರುವ ಆಹ್ವಾನಿತ ಕವಿಗಳ 'ನನ್ನ ದೇಶ ನನ್ನ ಕವಿತೆ' ಶೀರ್ಷಿಕೆಯ ಸ್ವಾತಂತ್ರ್ಯೋತ್ಸವ ಕವಿಗೋಷ್ಠಿಯ ಅಧ್ಯಕ್ಷತೆಯನ್ನು ವಿಶ್ರಾಂತ ಪೊಲೀಸ್ ಅಧಿಕಾರಿ ಬಿ.ಪಿ.ಅಶ್ವತ್ಥನಾರಾಯಣ ವಹಿಸಲಿದ್ದಾರೆ. ಕೃತಿಯ ಲೇಖಕ ಟಿ.ಎಸ್.ನಾಗರಾಜರಾವ್, ಸವಿಗನ್ನಡ ಪತ್ರಿಕೆ ಸಂಪಾದಕ ರಂಗನಾಥ್ ಮೈಸೂರು ಸಮಾರಂಭದಲ್ಲಿ ಉಪಸ್ಥಿತರಿರಲಿದ್ದಾರೆ.



ಸಾರ್ವಜನಿಕ ತಿಳುವಳಿಕೆ ಪತ್ರ

ನನ್ನ ಕಕ್ಷಿದಾರರಾದ, ಮಂಡ್ಯ ಜಿಲ್ಲೆ. ಕೆ.ಆರ್ ಪೇಟೆ ತಾಲ್ಲೂಕು, ಕಿಕ್ಕೇರಿ, ಶಫ್ ಸ್ಟ್ರೀಟ್ ಕಿಕ್ಕೇರಿ, ಇಲ್ಲಿ ವಾಸವಾಗಿರುವ ಶ್ರೀ ಸುನಿಲ್ ಕುಮಾರ್ ಜಿ.ಎಂ.ರವರ ಧರ್ಮಪತ್ನಿ ಶ್ರೀಮತಿ ಹೇಮಲತಾ ರವರು ಮೈಸೂರು ಸಿಟಿ, ನೇತಾಜಿ ನಗರ, 3ನೇ ಕ್ರಾಸ್‌ನಲ್ಲಿರುವ ಮನೆ ನಂ.312 ರಲ್ಲಿ ವಾಸವಾಗಿರುವ ಶ್ರೀಮತಿ.ಜಿ. ಕಮಲಮ್ಮ ಹಾಗೂ ಇವರ ಮಕ್ಕಳಾದ ಶ್ರೀಮತಿ ವಿಜಯಲಕ್ಷ್ಮಿ.ಕೆ.ಎಂ, ಶ್ರೀಮತಿ ಶಿಲ್ಪ. ಎಂ. ಮತ್ತು ಶ್ರೀ ಅವಿನಾಶ್.ಎಂ ರವರಿಂದ ಈ ಕೆಳಗೆ ಅನುಸೂಚಿಯಲ್ಲಿ ನಮೂದಿಸಿರುವ ಸ್ವತ್ತನ್ನು ಖರೀದಿಸುವ ಈರಾದೆಯನ್ನು ಹೊಂದಿ ಕ್ರಯದ ಕರಾರನ್ನು ಮಾಡಿಕೊಂಡಿ ರುವುದು ಸರಿಯಷ್ಟೆ. ಶ್ರೀಮತಿ.ಜಿ. ಕಮಲಮ್ಮ ಹಾಗೂ ಇವರ ಮಕ್ಕಳಾದ ಶ್ರೀಮತಿ ವಿಜಯಲಕ್ಷ್ಮಿ.ಕೆ.ಎಂ, ಶ್ರೀಮತಿ ಶಿಲ್ಪ. ಎಂ. ಮತ್ತು ಶ್ರೀ ಅವಿನಾಶ್.ಎಂ ರವರುಗಳು ಮಾತ್ರ ಮಾಲೀಕರಾಗಿ ಅನುಸೂಚಿ ಸ್ವತ್ತಿನ ಮೇಲೆ ಹಕ್ಕು, ಅಸಕ್ತಿ ಮತ್ತು ಸೌಮ್ಯಂಗಳಗೂ ಒಳಪಟ್ಟು ಸ್ವಾಧೀನದಲ್ಲಿದ್ದು ಅವರು ವಿಕ್ರಯಿಸಲು, ಪರಭಾರೆ ಮಾಡಲು ಸಂಪೂರ್ಣ ಸ್ವತಂತ್ರರಾ ಗಿಯೂ ಮತ್ತು ಕಾನೂನು ಪ್ರಕಾರ ಹಕ್ಕುಳ್ಳವರಾಗಿಯೂ ಇರುತ್ತೇವೆ ಎಂದು ಪ್ರತಿಪಾದಿಸುತ್ತಿದ್ದಾರೆ.

ಅನುಸೂಚಿ ಸ್ವತ್ತು ಯಾವುದೆ ಬ್ಯಾಂಕಿಗೆ, ಹಣಕಾಸು ಸಂಸ್ಥೆಗೆ ಅಥವ ಯಾವುದೇ ಸಂಘ, ಸಂಸ್ಥೆಗೆ, ನ್ಯಾಸ(ಟ್ರಸ್ಟ್) ಮತ್ತು ಯಾವುದೇ ವ್ಯಕ್ತಿಗೆ ಸಮ್ಮತವಾದ ಮತ್ತು ಕಾನೂನು ಬದ್ಧವಾದ ಹಕ್ಕು ಅಸಕ್ತಿ ಅಂದರೆ, ಆಧಾರ, ಭೋಗ್ಯ, ಗೇಣಿ, ಕ್ರಯ, ದಾನ, ರಿಲೀಸ್, ವ್ಯವಸ್ಥಾ, ಹಿಸ್ಸೆ, ಜೀವನಾಂಶ, ಭಾಗಾಂಶ, ಮೈನರ್ ಹಕ್ಕು, ವಾರಸು ಹಕ್ಕು, ರಹದಾರಿ, ನಿರಂತರವಾಗಿ ಬಳಸಿರುವ (ಹಾದಿ) ಹಕ್ಕು, ಡಿಮಾಂಡ್ ಸಿವಿಲ್, ರೆವಿನ್ಯೂ, ಕ್ರಿಮಿನಲ್, ಕೋರ್ಟ್ ಅಟ್ಯಾಚ್ ಮೆಂಟ್, ದಾವಾ, ಡಿಕ್ರಿ, ಜಪ್ತಿ, ಜಾಮೀನು, ನಿರ್ದಿಷ್ಟ ಪರಿಹಾರ ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಇದ್ದಲ್ಲಿ, ಅವರು ಖುದ್ದಾಗಿ ದಾಖಲೆಗಳ ಸಹಿತ ಈ ಪತ್ರಿಕಾ ಪ್ರಕಟಣೆಯಾದ 7 (ಏಳು) ದಿನಗಳ ಸೂಕ್ತ ದಾಖಲೆಗಳೊಂದಿಗೆ ಒಳಗೆ ಕೆಳಕಂಡ ನನ್ನ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಸಂಪರ್ಕಿಸತಕ್ಕದ್ದು ಅಥವಾ ಲಿಖಿತವಾಗಿ ತಿಳಿಸತಕ್ಕದ್ದು ಎಂದು ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಅನುಸೂಚಿ ನಿವೇಶನಗಳ ಸಂಬಂಧ ಯಾರು ಅಧಿಕಾರ ಪತ್ರ ಹೊಂದಿಲ್ಲವೆಂದು ಮತ್ತು ಯಾರಿಗೂ ಯಾವುದೇ ರೀತಿಯ ಹಕ್ಕು, ಅಸಕ್ತಿ, ಸೌಮ್ಯ, ಕ್ಲೈಮ್, ಆಧಾರ, ಸಾಲ ಬಾಕಿ, ಕರಾರು, ಅಧಿಕಾರ ಪತ್ರ, ಇತರೆ ತಂಟೆ ತಕರಾರು ಯಾವುದು ಇರುವುದಿಲ್ಲಾ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಅನುಸೂಚಿ ಸ್ವತ್ತಿನ ಸಂಬಂಧ ಕ್ರಯದ ಕ್ರಯ ಪತ್ರವನ್ನು ಬರೆಯಿಸಿ ನೋಂದಾಯಿಸಿಕೊಳ್ಳುವ ಪ್ರಕ್ರಿಯೆಗೆ ಮುಂದಾಗುತ್ತಾರೆ ಎಂದು ತಿಳಿಯುವುದು. ಅನಂತರದಲ್ಲಿ ಉಂಟಾಗತಕ್ಕ ಯಾವುದೇ ತಂಟೆ ತಕರಾರುಗಳು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲವೆಂದು ತಿಳಿಯತಕ್ಕದ್ದು.

ಅನುಸೂಚಿ: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಕಡಕೊಳ ಗ್ರಾಮದ ಸರ್ವೆ ನಂ178/1 ರಲ್ಲಿನ 2 ಎಕರೆ 09 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಸರ್ವೆ ನಂ.179 ರ ಶ್ರೀ ಕಲ್ಯಾಣಯ್ಯ ರವರ ಜಮೀನು, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ : ಸರ್ವೆ ನಂ.178/2 ರ ನವೀನ ಜಿನ್ ಶಿವಣ್ಣ ಮತ್ತು ಸರ್ವೆ ನಂ.178/3 ರ ಕುಮಾರಿ ಜಿನ್ ಪಾಪಣ್ಣ ರವರ ಜಮೀನು. ದಕ್ಷಿಣಕ್ಕೆ: ಸರ್ವೆ ನಂ.181 ರ ಶ್ರೀ ಪುಟ್ಟಣ್ಣಪ್ಪ ರವರ ಜಮೀನು

ಸಹಿ/- ಮೋಹನ ಸಿ, ವಕೀಲರು, ನಂ.1164, 1ನೇ ಮಹಡಿ, ನಂಜುಂಡೇಶ್ವರ ಕಾಂಪ್ಲೆಕ್ಸ್, ನಾರಾಯಣ ಶಾಸ್ತ್ರಿ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು-04, ಮೊ: 9945445252

ದಿನಾಂಕ: 10/08/2023, ಸ್ಥಳ: ಮೈಸೂರು

ಗುತ್ತಿಗೆದಾರರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಮೈಸೂರು

ಮುಡಾ ಕಛೇರಿ ಆವರಣ, ಜೆ.ಎಲ್.ಬಿ. ರಸ್ತೆ, ಮೈಸೂರು.
ದೂರವಾಣಿ : 0821 - 2424246

ಸಂಘದ 2022-23 ನೇ ಸಾಲಿನ 21ನೇ ವಾರ್ಷಿಕ ಸರ್ವಸದಸ್ಯರ ಮಹಾ ಸಭೆಯ ಸೂಚನಾ ಪತ್ರ (ನೋಟೀಸ್) ಹಾಗೂ ಆಡಳಿತ ಮಂಡಳಿಗೆ ಚುನಾವಣೆ

ಮಾನ್ಯ ಸದಸ್ಯರುಗಳ ಗಮನಕ್ಕೆ,

ಸಂಘದ 2022-2023 ನೇ ಸಾಲಿನ ಹಾಗೂ ಸಂಘದ 21ನೇ ವಾರ್ಷಿಕ ಸರ್ವಸದಸ್ಯರ ಮಹಾಸಭೆಯನ್ನು ದಿನಾಂಕ 13.08.2023 ನೇ ಭಾನುವಾರ ಬೆಳಗ್ಗೆ 9.30 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ. ಮಹಾಲಿಂಗಂ ರವರ ಅಧ್ಯಕ್ಷತೆಯಲ್ಲಿ 'ಸಿ.ಐ.ಟಿ.ಬಿ. ಛತ್ರ, ಸಿದ್ಧಾರ್ಥನಗರ, ಮೈಸೂರು, ಇಲ್ಲಿ ನಡೆಸಲಾಗುವುದು. ಹಾಗೂ ಸಂಘದ ಚುನಾವಣೆಯು ದಿನಾಂಕ 13.08.2023 ರ ಭಾನುವಾರದಂದು ಬೆಳಗ್ಗೆ 9.00 ರಿಂದ ಸಂಜೆ 4.00 ಗಂಟೆಯವರೆಗೆ ವಾರ್ಷಿಕ ಮಹಾಸಭೆ ನಡೆಯುವ ದಿನದಂದೆ ನಡೆಯುತ್ತಿದ್ದು, ವಾರ್ಷಿಕ ಮಹಾಸಭೆ ಹಾಗೂ ಸಂಘದ ಚುನಾವಣೆ ನಡೆಯುವ ಬಗ್ಗೆ ಈಗಾಗಲೆ ಸದಸ್ಯರುಗಳಿಗೆ ಸಭೆಯ ನೋಟಿಸನ್ನು ಕಳುಹಿಸಲಾಗಿದೆ. ಸಭೆಯ ನೋಟಿಸ್ ತಲುಪದೆ ಇರುವವರು ಇದನ್ನೆ ಸಭೆಯ ನೋಟಿಸ್ ಎಂದು ಪರಿಗಣಿಸಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕೆಂದು ಈ ಮೂಲಕ ಎಲ್ಲಾ ಸದಸ್ಯರುಗಳಲ್ಲಿ ವಿನಂತಿಸಿಕೊಳ್ಳಲಾಗಿದೆ.

ವಿ. ಸೂ:- 1. ಸಂಘದ ವಾರ್ಷಿಕ ಮಹಾಸಭೆ ಬೆಳಗ್ಗೆ 9.30 ಗಂಟೆಗೆ.


2. ಸಂಘದ ಆಡಳಿತ ಮಂಡಳಿಯ ಚುನಾವಣೆ ಸಮಯ ಬೆಳಗ್ಗೆ 9.00 ರಿಂದ ಮಧ್ಯಾಹ್ನ 4.00 ಗಂಟೆಯವರೆಗೆ.

3. ಸಂಘದ ಚುನಾವಣೆಯಲ್ಲಿ ಮತ ಚಲಾಯಿಸುವ ಅರ್ಹ ಸದಸ್ಯರುಗಳು ಸಂಘದಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರಬೇಕಾಗಿ ವಿನಂತಿಸಿಕೊಳ್ಳಲಾಗಿದೆ.

ವಾರ್ಷಿಕ ಮಹಾಸಭೆ ಹಾಗೂ ಚುನಾವಣೆ ನಡೆಯುವ ಸ್ಥಳ: ಸಿ.ಐ.ಟಿ.ಬಿ. ಛತ್ರ, ಸಿದ್ಧಾರ್ಥನಗರ, ಮೈಸೂರು.

ದಿನಾಂಕ 13.08.2023 ರಂದು ಸಂಘದ ವಾರ್ಷಿಕ ಮಹಾಸಭೆ ಹಾಗೂ ಚುನಾವಣೆ ಪ್ರಯುಕ್ತ ದಿನಾಂಕ 14.08.2023 ರ ಸೋಮವಾರ ಸಂಘಕ್ಕೆ ರಜೆ ಘೋಷಿಸಲಾಗಿದೆ.

ದಿ: 09.08.2023 ಆಡಳಿತ ಮಂಡಳಿ ಅಪ್ಪಣೆಯ ಮೇರೆಗೆ
ಸ್ಥಳ : ಮೈಸೂರು. ಸಹಿ/- ಮುಖ್ಯ ಕಾರ್ಯನಿರ್ವಹಣಾಧಿಕಾರಿ



ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. 06-ಎಸ್‌ಎನ್‌ಟಿ-ಎಂವೈಎಸ್-2023
ದಿನಾಂಕ : 02-08-2023

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಮೈಸೂರು ವಿಭಾಗದಲ್ಲಿ ಮ್ಯಾಗ್ನೆಟೋ ಟೆಲಿಫೋನ್‌ನ್ನು ವಾಯ್ಸ್ ಲಾಗಿಂಗ್ ಸೌಲಭ್ಯದೊಂದಿಗೆ ಎಲೆಕ್ಟ್ರಾನಿಕ್ ಟೆಲಿಫೋನ್‌ಗೆ ಬದಲಿಸುವುದು.	ರೂ. 1,00,10,430.21

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 28-08-2023 ರಂದು 11:00 ಗಂಟೆವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

ಹಿರಿಯ ವಿಭಾಗೀಯ ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರ್, ಮೈಸೂರು

ಪಿಆರ್‌ಒ/292/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2023-24

S.W.Railways SWRRLY SWRRLY

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ 44
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು





ಇಂದು ಕವಿತಾ ಕಾಮತ್ ಗೀತ್ ಸಂಗಮ್ ತಂಡದಿಂದ ಸ್ವರಧಾರಾ ಸಂಗೀತ ಸಂಜೆ



ಮೈಸೂರು, ಆ.11– ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಆ.12 ರಂದು ಸಂಜೆ 5.30 ಗಂಟೆಗೆ ಶ್ರೀಮತಿ ಕವಿತಾ ಕಾಮತ್ ಗೀತ್ ಸಂಗಮ್ ತಂಡ ದಿಂದ 'ಸ್ವರಧಾರಾ' ಸುಮಧುರ ಹಳೆಯ ಕನ್ನಡ ಹಾಗೂ ಹಿಂದಿ ಚಲನಚಿತ್ರ ಗೀತೆಗಳ ಸಂಗೀತ ಸಂಜೆಯನ್ನು ಆಯೋಜಿಸಲಾಗಿದೆ. ಈ ಸಂಗೀತ ಸಂಜೆಯಲ್ಲಿ ವೃತ್ತಿಪರ ಗಾಯಕರು ಅಲ್ಲದೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ, ಉದಯೋನ್ಮುಖ ಗಾಯಕರು ಹಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀಮತಿ ಕವಿತಾ ಕಾಮತ್, ನಿತ್ಯಾನಂದ ಕಾಮತ್, ಸದಾಶಿವ ಶೆಣೈ, ಹೆಡತಲೆ ನಾರಾಯಣ್, ಡಾ.ಸುರೇಂದ್ರನ್, ಶ್ರೀಮತಿ ಜಯಲಕ್ಷ್ಮಿ ನಾಯ್ಡು, ಬಿ.ಎಸ್.ಕುಮಾರಸ್ವಾಮಿ, ಶ್ರೀಮತಿ ಎಂ.ಎಸ್. ಶಾರದಾಂಬ, ಡಾ.ರವೀಂದ್ರ ಕುಮಾರ್, ಡಾ.ಭರತ್‌ರಾಜ್ ಹಾಗೂ ಶ್ರೀಮತಿ ಗೀತಾ ರಾವ್ ಹಾಡಲಿದ್ದಾರೆ. ಕಾರ್ಯಕ್ರಮದ ನಿರೂಪಣೆಯನ್ನು ಡಾ.ಆರ್.ಎಲ್. ಜಗದೀಶ್ ಮತ್ತು ಶ್ರೀಮತಿ ಎಂ.ಆರ್. ಅನಿತಾ ನಿರ್ವಹಿಸಲಿದ್ದಾರೆ. ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿರುತ್ತದೆ.



ಮೈಸೂರು ದಸರಾ ವಸ್ತುಪ್ರದರ್ಶನ ಆವರಣದಲ್ಲಿ ಆಯೋಜಿಸಲಾಗಿರುವ 'ಗೃಹಶೋಭೆ ಮಾನ್ಸೂನ್ ಶಾಪಿಂಗ್ ಫೆಸ್ಟಿವಲ್ 2023'ಕ್ಕೆ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಶುಕ್ರವಾರ ಚಾಲನೆ ನೀಡಿದರು. ಈ ವೇಳೆ ಕೆಇಎ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಜಿ.ಗೌಡ, 2023ರ ಮಿಸ್ ಕರ್ನಾಟಕ ಕು.ತನಿಷ್ಕಾ ಮೂರ್ತಿ ಸೇರಿದಂತೆ ಮತ್ತಿತರರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
Fresh Electrical Engineers
Email: epowerele@gmail.com
9035000016

Urgent Site Sale
in Paramananda Sagara 40x60 west 30x40 north Nithyananda Sagara 30x40, 60x40
Call Me J K
8951144240

ಕುಡಿತದ ಚಟದಿಂದ ಮುಕ್ತರಾಗಬೇಕೇ?
ಮೈಸೂರಿನ ಚೈತನ್ಯ ಫೌಂಡೇಷನ್ ವತಿಯಿಂದ ಆಗಸ್ಟ್ 13 ರಿಂದ ಸೆ. 2 ರವರೆಗೆ 21 ದಿನಗಳ ಕಾಲ ಉಚಿತ ಕುಡಿತ ಮತ್ತು ಮಾದಕ ವಸ್ತುಗಳ ಚಟ ಬಿಡಿಸುವ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಊಟ, ವಸತಿ, ಚಿಕಿತ್ಸಾ ಸೌಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9164469570, 6361744190

HOUSE FOR SALE
20X30 East Face (2BHK) GF & FF Independent Mathrushree Layout University Layout, Mysore 100 mtr Close to Ring Road
9448528635
6362989639

SITE FOR SALE
20x30, 30x30, Sites For Sale 3 Km From Bogadi, Ring Road 2500/ sqft
7026901111

3 ಬೆಡ್ರೂಮ್ ಹೊಸ ಮನೆ ಮಾರಾಟಕ್ಕಿದೆ
20x30 ದಟ್ಟಗಳ್ಳಿ, ಮೈಸೂರು, ತ್ರಿವೇಣಿ ಸೂಪರ್ ಮಾರ್ಕೆಟ್ ಹತ್ತಿರ, Price - 79 Lakhs
ಮಾಲೀಕರು ಸಂಪರ್ಕಿಸಿ:
6361295132

ನೇಗಿಲಯೋಗಿ ಮರುಳೇಶ್ವರ ಒಕ್ಕಲಿಗ ವಧು–ವರರ ಮಾಹಿತಿ ಕೇಂದ್ರ
12ನೇ ಒಕ್ಕಲಿಗ ವಧು–ವರರ ಸಮಾವೇಶ
ದಿ.: 13–08–2023, ಭಾನುವಾರ, ಸಮಯ: ಬೆಳಿಗ್ಗೆ 9 ಗಂಟೆಗೆ ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ನ್ಯಾಯಾಲಯದ ಎದುರು, ಜಯನಗರ, ಕೆ.ಜಿ.ಕೊಪ್ಪಲು, ಮೈಸೂರು–14
ವಿವರಗಳಿಗೆ ಸಂಪರ್ಕಿಸಿ ಮೊ:
9483453005,9900629393
9448392488,9113201893

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

ಸೈಟ್ಸ್ @ ಮೈಸೂರು
ಟಿ.ನರಸೀಪುರ ರಿಂಗ್ ರೋಡ್ ನಿಂದ ಸುಮಾರು 1.5 KMS
NORTH FACING SITES
MUDA APPROVED
ಸುತ್ತಮುತ್ತ ಮೂಡಾ ಲೇಔಟ್ಗಳಿವೆ
GSS 89512-76688

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

ಸುವರ್ಣ ಯಾತ್ರ
1) ಕಾಶಿ ಪ್ರವಾಸ 2 ಜ್ಯೋತಿರ್ಲಿಂಗ ಸೇರಿ 7 ದಿನಗಳು 30–08–2023 (ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್, ಆಯೋಧ್ಯ, ನೈಮಿಶಾರಣ್ಯ)
2) ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು 08–09–2023 (ಸೋನಾಲಿ, ಲುಂಬಿನಿ, ಮುಕ್ತಿನಾಥ, ಪೋಕ್ರಾ, ಕಠ್ಮಂಡು, ಮನೋಕಾಮನ)
9008381022
9019462508

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM ® 10yrs WARRANTY
ISO 9001:2015 Certified Depot
CALL 99012 91267 98454 26862

ಬೇಕಾಗಿದ್ದಾರೆ
ಮೈಸೂರಿನನಲ್ಲಿರುವ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಪುರುಷರು/ ಮಹಿಳೆಯರು ಬೇಕಾಗಿದ್ದಾರೆ. ಪಿ.ಎಫ್. & ಇ.ಎಸ್.ಐ ಲಭ್ಯವಿದೆ. ಸಂಬಳ: 12,000/–
7899754149

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ ವಿದ್ಯಾರ್ಹತೆ : ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ 13,448 + ESI+PF. ಮತ್ತು ಉಚಿತ ಊಟದ ವ್ಯವಸ್ಥೆ. ಅಗತ್ಯ ದಾಖಲಾತಿಗಳು : ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ.
8453408502,9108100117

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಬೇಕಾಗಿದ್ದಾರೆ
ಮೈಸೂರಿನ ಸರಸ್ವತಿಪುರಂನಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ರೆಸ್ಟೋರೆಂಟ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ. ದೋಸೆ ಮತ್ತು ಇಡ್ಲಿ ಬಾಣಸಿಗ ಬೇಕಾಗಿದ್ದಾರೆ–2, ಟೇಬಲ್ ಕ್ಲೀನರ್–2, ವಾಷಿಂಗ್–02
9845355473

WANTED IMMEDIATELY ACCOUNTANT& A/C'S ASSISTANT
Preffered Only Male Candidate Accounts Exp or Fresher Can also apply with Basic Computer Knowledge Tally with GST
9243505461,7624968220
0821-2547926

ಉಚಿತ ತರಬೇತಿ
ಮನೆಯಿಂದಲೇ ಬತ್ತಿಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಸೈಟುಗಳು ಮಾರಾಟಕ್ಕಿವೆ ಮುಡಾ ಅಪ್ರೂವ್ಡ್
30x40 - North West, 40x60 N/F, 40x60 W/F, 58x60 North East Corner ರಿಂಗ್ ರಸ್ತೆ ಹತ್ತಿರ, ಯೂನಿವರ್ಸಿಟಿ ಲೇಔಟ್ ಎದುರು. 30x50 E/F ATME Engineering ಕಾಲೇಜ್ ಪಕ್ಕ. 40x60 East face ವರುಣ ಹತ್ತಿರ.
Mob: 9900372792

ನಿರ್ಮಲ ಸರ್ವೀಸ್
ಸಂಪು ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

ಹಳೇಮನೆ / ಸೈಟ್ ಬೇಕಾಗಿದೆ
30x40 ಈಸ್ಟ್ ದಿಕ್ಕಿನ ಹಳೇಮನೆ /ಸೈಟ್ ಬೇಕಾಗಿದೆ ಕೆಸರೆ 3ನೇ ಹಂತ ನಾಯ್ಡು ನಗರದಲ್ಲಿ
9686119686

ಶ್ರೀ ಮಹಾಲಕ್ಷ್ಮೀ ಟ್ರಾವೆಲ್ಸ್
21–9–23: ನೇಪಾಳ್ ಮುಕ್ತಿನಾಥ್, ಪಶುಪತಿನಾಥ್.
30–9–2023: ಕಾಶಿ, ಗಯಾ, ಅಯೋಧ್ಯೆ, ಪ್ರಯಾಗ್‌ರಾಜ್.
29–8–2023: ಶಿರಡಿ, 3 ಜ್ಯೋತಿರ್ಲಿಂಗ ದರ್ಶನ.
11–9–2023: ಪುರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ್ ಬೀಚ್, ಭುವನೇಶ್ವರ್.
7–9–2023: ರಾಮೇಶ್ವರಂ, ಕನ್ಯಾಕುಮಾರಿ, ಮಧುರೈ.
9591017782, 9964527782

ಮುಡಾ ಖಾತಾ ಸೈಟ್ ಸೇಲ್
30x40, ಈಸ್ಟ್ ಫೇಸಿಂಗ್, ಡೈರೆಕ್ಟ್ ಓನರ್, ದಡದಹಳ್ಳಿ, ಜ್ಞಾನಭಾರತಿ ಲೇಔಟ್, ಜೆ.ಪಿ.ನಗರದ ರಿಂಗ್ ರೋಡ್ ನಿಂದ 5 ಕಿ.ಮೀ. ದೂರ
9342123373

SHREE SAPTHAMATHRUKA LAYOUT
30X40, 40X60 & 50X80 Price 18 Lacks onwards Off. T-Narasipura Road, Next to Lalbahadur Shastri Nagar
7795609173

ಕೊಳ್ಳೇಗಾಲದ ಜ್ಯೋತಿಷ್ಯರು
ಪಂ. ಎಸ್. ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
MOB: 9880583804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ ಅಘೋರ ಶಕ್ತಿಯಿಂದ ಸ್ತ್ರೀ ಪುರುಷ ಪ್ರೇಮ, ದಾಂಪತ್ಯ ಸಮಸ್ಯೆ, ಶತ್ರು ದೋಷ, ಸಾಲ ಬಾಧೆ, ಯಾವುದೇ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ ಮತ್ತು ಭೂತರಾಯನ ಪ್ರಯೋಗ ದಿಂದ ಎರಡೇ ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಬಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಬಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೆಲಸಕ್ಕೆ ಬೇಕಾಗಿದ್ದಾರೆ
ಟಿ.ನರಸೀಪುರದ ಐದು ಮಹಡಿಯ ಫ್ಯಾಮಿಲಿ ಶೋರೂಮ್ ಶ್ರೀ ಮಹದೇಶ್ವರ ಸಿಲ್ಕ್ಸ್ ಅಂಡ್ ರೆಡಿಮೇಡ್‌ಗೆ ಸೇಲ್ಸ್‌ಮನ್ ಸೇಲ್ಸ್‌ಗರ್ಲ್ಸ್ ಹಾಗೂ ಎಕ್ಸೆಲ್ Tally ಯಲ್ಲಿ ಅನುಭವ ಇರುವ ಅಕೌಂಟೆಂಟ್ ಹಾಗೂ ಬಿಲ್ಲಿಂಗ್ ಹುಡುಗರು ಹುಡುಗಿಯರು ಬೇಕಾಗಿದ್ದಾರೆ. ಸಂದರ್ಶನದ ಸ್ಥಳ ಮಹದೇಶ್ವರ ಕಲ್ಯಾಣ ಮಂಟಪ ಟಿ.ನರಸೀಪುರ ಪೆಟ್ರೋಲ್ ಬಂಕ್ ಎದುರು.
7676685839,9663015447

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಓಟಿ 15,200/- to 86,000/-
9740733021, 9535028750

SITE FOR SALE
30X40 West Facing No 5463 Allotted Site Vijayanagar 4th Stage 2nd Phase Price : 84 Lakhs nego
JK PROPERTIES
8197707001

ಬೇಕಾಗಿದ್ದಾರೆ
ಮೈಸೂರಿನಲ್ಲಿ ಇರುವ ಸಸ್ಯಾಹಾರಿ ಹೋಟೆಲ್‌ಗೆ ಸಪ್ಲೆಯರ್ಸ್ ಕಾಫಿ ಮೇಕರ್ಸ್, ಹೌಸ್ ಕೀಪಿಂಗ್ ಸ್ಟಾಫ್, ಕೌಂಟರ್ ಸ್ಟಾಫ್, ಕ್ಯಾಪ್ಟನ್ಸ್, ಬೇಕಾಗಿದ್ದಾರೆ.
9538556565
8951114554,9743162417

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಮುಡಾ ಅನುಮೋದಿತ ಸೈಟುಗಳು ಮಾರಾಟಕ್ಕಿವೆ
1) ಶ್ರೀನಿಧಿ ಎನ್‌ಕ್ಲೇವ್ 20x40 (W) (ಶಾಹಿ ಗಾರ್ಮೆಂಟ್ಸ್ ಎದುರು) Site No. 245 & 206. Rate: Rs. 27 Lakhs. ಬೆಳವಾಡಿ ಹತ್ತಿರ ಮನೆಗಳು ಕಟ್ಟಲ್ಪಟ್ಟಿವೆ. 2) ಸುವರ್ಣ ಕರ್ನಾಟಕ ಗೃ.ನಿ.ಸಂಘ, ಹೆಚ್.ಡಿ. ಕೋಟೆ ರಸ್ತೆ (ಉದ್ದೂರು ಗೇಟ್ ಹತ್ತಿರ). 30x40 (W), 279 (40 feet road). Rate: Rs. 20.50 Lakhs. 25x30 (S) Site No. 40. Rate: Rs. 12.50 Lakhs. Contact Owner:
Mob: 9448739000
BROKERS EXCUSE

Semi Commercial SITE FOR SALE
40x52 W/F 50 feet road in Police Layout 3rd Stage, IPS Nagar, T.Narasipura Road, Mysore. Price: 87 Lakhs (Negotiable) (BROKERS EXCUSE)
Mob: 7676171798

COMMERCIAL SITES FOR SALE
(130x47) Brahmin's Layout Total 3000 sq.ft. 80 ft. Rd. Rs. 70 Lakhs
(40x60) & (50x80) Yelwala, near Satellite Bus Stand, Mys-Hunsur NH Road.
95388-39926

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. Property Services (Opp. Kuvempu School), S.S. Puram
93421-25252

3 SITES FOR SALE
50x80, 203, 204, 205 Jnanabharathi Housing Society, Dadadahalli Road, Near J.P.Nagar, Mysore
9448323010

ಮನೆ ಬಾಡಿಗೆಗೆ ದೊರೆಯುತ್ತದೆ
ವಿಜಯನಗರ 2ನೇ ಸ್ಟೇಜ್‌ನ ಮಹಾಜನ ಲೇಔಟ್‌ನಲ್ಲಿ ವಿಶಾಲವಾದ 2BHK ಗ್ರೌಂಡ್ ಫ್ಲೋರ್ ಮನೆ ಬಾಡಿಗೆಗೆ ದೊರೆಯುತ್ತದೆ. ಕ್ಲಿನಿಕ್ / ಆಫೀಸ್/ ಗೋಡೌನ್‌ಗೆ ಸೂಕ್ತವಾಗಿದೆ. ಸಸ್ಯಹಾರಿಗಳಿಗೆ ಆದ್ಯತೆ (Brokers Excuse)
9900096943

NISARGA ENTERPRISES LOAN OFFICE
MOB: 8296400433 9880436288
New Start of Business Loan Industrial Loan, Machinery Loan, Garments Loan, Business Loan, Home Loan, Home Mortgage Loan, Site Mortgage Loan, Personal Loan 12,000/- Salary above

GSS 25 YEARS
THE MOST TRUSTED REAL ESTATE BRAND IN MYSURU
100 SITES REQUIRED
MUDA OR DTCP • FULLY DEVELOPED • UNDER DEVELOPED • PLAN SANCTIONED
96868-25025

ಬೇಕಾಗಿದ್ದಾರೆ
ಸ್ಟಿಕ್ಕರ್ ಪೇಸ್ಟ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
ಸಂಬಳ 10000-14000/-
Ph.9380142144
ಶಿವರಾಂಪೇಟೆ, ಮೈಸೂರು

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

KITCHEN INTERIORS
₹95,000/-
www.ssbuildmart.com
ISO 9001:2015 Certified Company Depot
SS Build Mart®
Talk to our Design Team
9901291267 / 9845426862

ಕೆ.ಆರ್.ಎಸ್. ಬಳಿ ಕಟ್ಟೇರಿ
ತೋಟದಲ್ಲಿ ಕೆಲಸ ಮಾಡಲು ಸಣ್ಣ ಕುಟುಂಬದವರು ಬೇಕಾಗಿದ್ದಾರೆ. ವಸತಿ ಸೌಲಭ್ಯವಿರುತ್ತದೆ ಇಚ್ಛೆಯುಳ್ಳವರು ಸಂಪರ್ಕಿಸಿ
9591212047
8970101710

WANTED
SAPTHAGIRI ENTERPRISES
2 Female Accountant Experienced in Tally
3 Male Sales Representative Compulsory 2 Wheeler DL
HOOTGALLI INDUSTRIAL AREA, MYSORE
9986680843

30x30 ಅಳತೆಯ MUDA ಖಾತೆಯುಳ್ಳ ಸೈಟು ಮಾರಾಟಕ್ಕಿದೆ 21 ಲಕ್ಷದ 50 ಸಾವಿರಗಳು ಯಶಸ್ವಿನಿ ಲೇಔಟ್ ಶ್ರೀನಗರದಿಂದ 3 ಕಿ.ಮೀ ಮೈಸೂರು
20x30 ಅಳತೆಯ KHB ಸೈಟು ಮಾರಾಟಕ್ಕಿದೆ N/F, 9 ಲಕ್ಷದ 50 ಸಾವಿರಗಳು ಇಲವಾದ ಹತ್ತಿರ, ಮೈಸೂರು
9742198093

ಬೇಕಾಗಿದೆ/WANTED
30x40, 30x50, ಅಳತೆಯ ಸೈಟ್ KHB ನಿಸರ್ಗ ಬಡಾವಣೆ, ಇಲವಾಲ / ಸನ್ ಸಿಟಿ ಹೋಮ್ಸ್ ಅಥವಾ ಇಲವಾಲದ ಆಸುಪಾಸಿನಲ್ಲಿ (ಬ್ರೋಕರ್ಸ್‌ಗಳಿಗೆ ಅವಕಾಶವಿಲ್ಲ)
9148223153

ಹೊಸ ಮನೆ ಮಾರಾಟಕ್ಕಿದೆ
20x30 ಡ್ಯೂಪ್ಲೆಕ್ಸ್ ವಿವೇಕಾನಂದ ನಗರ ಪೆಟ್ರೋಲ್ ಬಂಕ್ ಹತ್ತಿರ, ಮೈಸೂರು
7204401199
7795269272

ಮಳಿಗೆ ಪಿ.ಜಿ. ಕಟ್ಟಡ ವಾಸದ ಮನೆ ಬಾಡಿಗೆಗಿದೆ
ಮೈಸೂರು ಅಪೋಲೋ ಆಸ್ಪತ್ರೆ ಮುಖ್ಯ ರಸ್ತೆಯ ಪೂರ್ವ ದಿಕ್ಕಿನ ನೆಲದಲ್ಲಿ 12x16 ಅಳತೆಯ ಮಳಿಗೆ ಹಾಗೂ ಅದರ ಹಿಂಭಾಗಕ್ಕೆ 900 ಚದರಡಿ ಮನೆ ಕಚೇರಿ ಹಾಗೂ ವಾಸಕ್ಕೆ ಹಾಗೂ 1 ಮಹಡಿಯಲ್ಲಿ 10x30 ಅಳತೆಯ 9 ರೂಮುಗಳು ಪಿ.ಜಿ. ನಡೆಸಲು ಎಲ್ಲಾ ಉಪಕರಣದೊಂದಿಗೆ ಬಾಡಿಗೆಗಿದೆ ಸೋಲಾರ್, ಪೀಠೋಪಕರಣ ಎಲ್ಲಾ ಇರುತ್ತದೆ.
8197609290

SITE FOR SALE
30X40 In J P Nagar 2nd Stage Near Kavitha bakery
6364084823

ಮೈಸೂರು ಮ್ಯಾರೇಜ್ ಬ್ಯೂರೋ
ಎಲ್ಲಾ ಜಾತಿಯ ವಧುವರರಿಗೆ ನೇರ ಸಂಪರ್ಕಿಸಿ ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ
ಡಾ. ಗುರೂಜಿ
9448229184
7899625268

ಹೋಂ ನರ್ಸಿಂಗ್ ಕೆಲಸ
ಮೈಸೂರಿನ ಹೆಸರಾಂತ ಹೆಲ್ತ್ ಕೇರ್ ಸಂಸ್ಥೆಗೆ ಹೋಂ ನರ್ಸಿಂಗ್ ಕೆಲಸಕ್ಕೆ ಯುವಕ, ಯುವತಿಯರು, ಮಹಿಳೆಯರು, ವಿಧವೆಯರು ತಕ್ಷಣವೇ ಸಂಪರ್ಕಿಸಿ, ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ ಇರುತ್ತದೆ (ಮೊದಲ ಬಂದವರಿಗೆ ಆದ್ಯತೆ)
9739292222
9035113222

FOR SALE
1) 40x60 Vishwaprajna Bogadi Rd
2) 14x100 Ramavilas Rd Near
3) 20x30 Duplex and G+1 Ramakrishna Nagar
4)30x40 HD Kote Road
5)40x60 Univercity layout opp
Prakruthi Properties
9538690359
9035990359

ಸೈಟ್ ಮಾರಾಟಕ್ಕಿದೆ
40x60 South Facing, M.Pro ಹೋಟೆಲ್ ಹಿಂಭಾಗ ಮಾನಸಿನಗರ Direct Owner
7892565278

SITE FOR SALE
ನಿವೇಶನ ಮಾರಾಟಕ್ಕೆ ಇದೆ Size 23x60 Site No. 133 (West Face) ಪೂರ್ವ ಪಶ್ಚಿಮ 60 ಅಡಿ ಉತ್ತರ ದಕ್ಷಿಣ 23 ಹತ್ತಿರ ನಿರ್ಮಿತಿ ಕೇಂದ್ರ ವಿಳಾಸ: ಸಿದ್ದಲಿಂಗೇಶ್ವರ ನಗರ ಬಡಾವಣೆ ಬೋಗಾದಿ 2ನೇ ಹಂತ.
9964958335,9632329036

FOR SALE
A 32 Starling nest , 3rd floor, East face, Vishweshwara Nagar With complete furnished new apartment, Total area 1500 +car parking 82 Lakh
9844083298

SITE FOR SALE
40x60 Near Devegowda Circle, Near KSFC Layout
6364084823

ನೀರಾವರಿ ಸೌಲಭ್ಯದ ಜಮೀನು ಬಾಡಿಗೆಗಿದೆ
ಮೈಸೂರಿನಿಂದ 9 ಕಿ.ಮೀ ದೂರದಲ್ಲಿ ಉತ್ತಮ ರಸ್ತೆ ಸೌಕರ್ಯವಿರುವ, 3 ಎಕರೆ ಜಮೀನು, ಬೋಗಾದಿ ರಸ್ತೆಯಲ್ಲಿ ತಂತಿ ಬೇಲಿ ಕಾಂಪೌಂಡ್, ಬೋರವೆಲ್ ವಾಸಕ್ಕೆ 1 ದೊಡ್ಡಮನೆ 1 ಚಿಕ್ಕಮನೆ, ವಿದ್ಯುಚ್ಛಕ್ತಿ ಹಾಗೂ ಪೈಪ್‌ಲೈನಿರುವ 3 ಎಕರೆ ಜಮೀನು ತಿಂಗಳಿಗೆ 15 ಸಾವಿರಕ್ಕೆ ಹೂತೋಟ, ಹೈನುಗಾರಿಕೆ, ಮೇಕೆ ಸಾಗಾಣಿಕೆ, ಕೈಗಾರಿಕೆ ಬಾಡಿಗೆಗಿದೆ. ಅಡ್ವಾನ್ಸ್ 5 ಲಕ್ಷ
8197609290

ಸೈಟ್ ಮಾರಾಟಕ್ಕಿದೆ
30x40 S/F 56 ಲಕ್ಷ
30x40 E/F 58 ಲಕ್ಷ, ರೂಪನಗರ, ಬೋಗಾದಿ, ಮೈಸೂರು
30x40 W/F 66 ಲಕ್ಷ ಐಶ್ವರ್ಯ ಲೇಔಟ್, ಮೈಸೂರು
9986856999

MUDA APPROVED
30X40 E/F Site Rs.30 Lakhs Ready for Registration Ready to Construction Bank Loan Available Bannur Road, Mysore 12 Kms From City Center 5 Kms from Devegowda Circle
9538583377

VINAYAKA VENTURES
Commercial Property For Sale @ VV Mohalla
8660352905
7975246389

WE ARE HIRING URGENTLY FOR TELECALLING
1) Any Qualification, 2) Language Needed For : Tamil, Telugu, Hindi, Kannada, 3) Any one Language with kannada, 4) Salary: Experienced 12K, Freshers 10 K Fixed Salary 5) Location- Jayalakshmipuram K.D.Road, Mysore-570002
9901269622
6364579125

MUDA APPROVED
30X40 W/F Site Rs.41 Lakhs 40x73 E/F Site Rs.94 Lakhs Ready for Registration Ready to Construction Bank Loan Available Next to Vijayanagar 4th Stage, 12 KMS from City Center
9538583377

ತಕ್ಷಣ ಬೇಕಾಗಿದ್ದಾರೆ
ಆಫೀಸ್ ಸ್ಟಾಫ್, ಕಂಪ್ಯೂಟರ್ ಜ್ಞಾನವುಳ್ಳ ಮಹಿಳೆ ಬೇಕಾಗಿದ್ದಾರೆ. ಕೊಳ್ಳೇಗಾಲ ಮತ್ತು ಮೈಸೂರಿಗೆ ಹಾಗೂ ಮಾರಾಟ ಪ್ರತಿನಿಧಿಗಳು (ಸೇಲ್ಸ್‌ಮೆನ್) ಬೇಕಾಗಿದ್ದಾರೆ. ಕೊಳ್ಳೇಗಾಲ, ಟಿ.ನರಸೀಪುರ, ಮೈಸೂರು ಭಾಗಗಳಿಗೆ ಉತ್ತಮ ಸಂಬಳ ಮತ್ತು ಇನ್ಸೆಂಟೀವ್ ನೊಂದಿಗೆ
9739780704,7676582019

ಸೈಟ್ ಮಾರಾಟಕ್ಕಿದೆ
ಸೈಟ್ ನಂ.273, 20x30 ಉತ್ತರ ದಿಕ್ಕಿನಲ್ಲಿರುವ ಕೆಸರೆ 2ನೇ ಹಂತ, ಎನ್.ಆರ್.ಮೊಹಲ್ಲಾ
9742365686
9535452928

ಸೈಟ್ ಮಾರಾಟಕ್ಕಿದೆ
ಟಿ.ನರಸೀಪುರ ಮೇನ್ ರೋಡ್ ವರಕೂಡು ಗೇಟ್ ಹತ್ತಿರ ಎಸ್‌ಬಿಎಂ ಎನ್‌ಕ್ಲೈವ್ (ಹೊನ್ನಸಿರಿ ಗಾರ್ಡನ್) ಪೂರ್ವ ದಿಕ್ಕು 30x40, Sq.ft. - 1450/- ಬೇಕಾಗಿದೆ. RTC ಇರುವ 4–6 ಗುಂಟೆ ಜಾಗ ಬೇಕಾಗಿದೆ. ಮೆಲ್ಲಹಳ್ಳಿ ಸರ್ಕಲ್ ಸುತ್ತ ಮುತ್ತ, (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ready for registration
7676077678

S.K.CONSTRUCTION
ಕನಸು ನಿಮ್ಮದು ನನಸು ನಮ್ಮದು ಹೊಸ ಮನೆ ಕಟ್ಟಬೇಕೆ ಚಿಂತೆ ಬೇಡ, Loan ಮಾಡಿಸಿ ಪ್ರಾರಂಭ 25% ನಾವೇ ಹಾಕಿ 3D Plan ಸಹಿತ ಉತ್ತಮ ಗುಣಮಟ್ಟದ ಮನೆ ಮಾಡಿಕೊಡುತ್ತೇವೆ.
9620528490

ಕ್ವಿಕ್ ಮ್ಯಾರೇಜಸ್
ಎಲ್ಲಾ ಜಾತಿಯ ವಧು–ವರರಿಗಾಗಿ & ವಿಧುರ–ವಿಚ್ಛೇದಿತ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
9343175000

ಬೇಕಾಗಿದ್ದಾರೆ
1. ಬ್ಯೂಟಿಷಿಯನ್
2. ಫ್ಯಾಷನ್ ಡಿಸೈನಿಂಗ್ ಅನುಭವ ಉಳ್ಳ ಮಹಿಳೆ, ಕುವೆಂಪುನಗರ
9880402729

ಮನೆ ಮಾರಾಟಕ್ಕಿದೆ
ಮೈಸೂರಿನ ವಿವೇಕಾನಂದನಗರ (ಸರ್ಕಲ್) ಬಸ್ ನಿಲ್ದಾಣದ ಬಳಿ (ಡಿಪೋ) 30x40 ಅಳತೆಯ ಮನೆ ಮಾರಾಟಕ್ಕಿದೆ
8310198005

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು


ದೀನ ದಲಿತರ, ಹಿಂದುಳಿದ ವರ್ಗಗಳ, ಅಲ್ಪಸಂಖ್ಯಾತರ, ಅಸಂಘಟಿತ ಸಮಾಜಗಳ
ಆಶಾಕಿರಣ, ಭಾಗ್ಯವಿಧಾತ, ಅಭಿವೃದ್ಧಿ ಹರಿಕಾರ, 2ನೇ ಬಾರಿ ಮುಖ್ಯಮಂತ್ರಿಗಳಾದ
ಶ್ರೀ ಸಿದ್ಧರಾಮಯ್ಯ
ಅವರಿಗೆ
76ನೇ ವರ್ಷದ
ಜನ್ಮದಿನದ ಶುಭಾಶಯಗಳು
ಪ್ರಕಟಣೆ : ರಾಜ್ಯ ಆದಿ ಜಾಂಬವ ಸಂಘ (ರಿ)
ಮತ್ತು ಡಾ|| ಡಿ. ತಿಮ್ಮಯ್ಯ ಅಭಿಮಾನಿಗಳ ಬಳಗ


ಮಾನ್ಯ ಮುಖ್ಯಮಂತ್ರಿಗಳಾದ ಸನ್ಮಾನ್ಯ
ಶ್ರೀ ಸಿದ್ದರಾಮಯ್ಯರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ರಾಕೇಶ್ ಪಾಪಣ್ಣ
ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯರು
ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ
ಪ್ರಕಟಣೆ : ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು

ಮೈಸೂರು ಮಿತ್ರ

ಎಕ್ಸ್‌ಟ್ರಾ ಇನ್ನಿಂಗ್ಸ್

ಶನಿವಾರ 12 ಆಗಸ್ಟ್ 2023



ಸಕ್ಕರೆ ಗ್ರಾಮದಲ್ಲಿ ಹೋಬಳಿ ಮಟ್ಟದ ಕ್ರೀಡಾಕೂಟ



ಚುಂಚನಕಟ್ಟೆ, ಆ. 11– ಸಾಲಿಗ್ರಾಮ ತಾಲೂಕಿನ ಸಕ್ಕರೆ ಗ್ರಾಮದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯಲ್ಲಿ ಚುಂಚನಕಟ್ಟೆ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು. ಕ್ರೀಡಾಕೂಟವನ್ನು ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹಾಡ್ಯ ಮಹದೇವಸ್ವಾಮಿ ಉದ್ಘಾಟಿಸಿದರು. ಕ್ರೀಡಾಕೂಟದ ಅಧ್ಯಕ್ಷತೆಯನ್ನು ಶಾಲೆಯ ಪ್ರಾಂಶುಪಾಲ ಟಿ. ಸುರೇಶ್ ವಹಿಸಿದ್ದರು. ಕಾರ್ಯಕ್ರಮದಲ್ಲಿ ತಾಲೂಕು ದೈಹಿಕ ಶಿಕ್ಷಣ ಸಂಯೋಜಕ ಕುಮಾರಸ್ವಾಮಿ, ಪ್ರಾಥಮಿಕ ಶಾಲಾ ಸಂಘದ ಅಧ್ಯಕ್ಷ ನಾಗರಾಜ್, ಉಪಾಧ್ಯಕ್ಷ ಪುರುಷೋತ್ತಮ್, ಮಾಯಿಗೌಡನಹಳ್ಳಿ ಗ್ರಾಪಂ ಅಧ್ಯಕ್ಷರು, ದೈಹಿಕ ಶಿಕ್ಷಕರು, ಸಕ್ಕರೆ ಗ್ರಾಪಂ ಸದಸ್ಯ ಗೌಡಯ್ಯ, ಅಂಬೇಡ್ಕರ್ ವಸತಿ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು. ಕ್ರೀಡಾಕೂಟದಲ್ಲಿ 25ಕ್ಕೂ ಹೆಚ್ಚು ಶಾಲೆಯ ಸುಮಾರು 600ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ವೇಳೆ ಪ್ರಾಂಶುಪಾಲ ಟಿ. ಸುರೇಶ್ ಮಾತನಾಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಕ್ರೀಡೆ ಪ್ರಮುಖ ಪಾತ್ರ ವಹಿಸುತ್ತದೆ. ಅಲ್ಲದೆ ಮಕ್ಕಳ ದೈಹಿಕ, ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದರು.

ರಾಷ್ಟ್ರಧ್ವಜವನ್ನು ಅತ್ಯಂತ ಹೆಮ್ಮೆ, ಗೌರವದಿಂದ ಕಾಣಬೇಕು

ಹಿರಿಯ ಸಮಾಜ ಸೇವಕರಾದ ಕೆ.ರಘುರಾಮ್ ವಾಜಪೇಯಿ ಸಲಹೆ



ಮೈಸೂರು, ಆ.11–ರಾಷ್ಟ್ರಧ್ವಜವನ್ನು ಅತ್ಯಂತ ಹೆಮ್ಮೆ ಹಾಗೂ ಗೌರವದಿಂದ ಕಾಣ ಬೇಕು. ಧ್ವಜದ ಬಗೆಗಿನ ನೀತಿ ಸಂಹಿತೆಗಳನ್ನು ಅರಿತು ಧ್ವಜಾರೋಹಣ ಮತ್ತು ಧ್ವಜಾವರೋಹಣ ಹೇಗೆ ಮಾಡಬೇಕು ಎಂಬ ಸಮಗ್ರ ಮಾಹಿತಿಯನ್ನು ಪಡೆಯಬೇಕು ಎಂದು ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ ಹೇಳಿದರು.

ಕನಕಗಿರಿಯಲ್ಲಿರುವ ಸರ್ಕಾರಿ ಶಾರದಾ ವಿಲಾಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಚಾರ ವಿನಿಮಯ ವೇದಿಕೆಯ ವತಿಯಿಂದ ಸ್ವಾತಂತ್ರ್ಯೋತ್ಸವ ಅಂಗವಾಗಿ ಶಾಲಾ ಮಕ್ಕಳಿಗೆ ರಾಷ್ಟ್ರಧ್ವಜ ಹಾಗೂ ರಾಷ್ಟ್ರಗೀತೆಯ ಬಗ್ಗೆ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರದ ಉನ್ನತಿಯ ಪ್ರತೀಕವಾದ ರಾಷ್ಟ್ರಧ್ವಜ, ರಾಷ್ಟ್ರಗೀತೆ ಹಾಗೂ ರಾಷ್ಟ್ರ ಲಾಂಛನಗಳನ್ನು ಗೌರವಿಸುವುದು ಜವಾಬ್ದಾರಿಯುತ ನಾಗರಿಕನ ಕರ್ತವ್ಯವಾಗಿದೆ ಎಂದರು.

ಎಲ್ಲರೂ ರಾಷ್ಟ್ರಧ್ವಜದ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು. ರಾಷ್ಟ್ರಧ್ವಜ, ರಾಷ್ಟ್ರಗೀತೆ ಮತ್ತು ರಾಷ್ಟ್ರ ಲಾಂಛನಗಳ ಸಚಿತ್ರ ಸಮಗ್ರ ಮಾಹಿತಿ ನೀಡಿ, ರಾಷ್ಟ್ರಧ್ವಜದ ಗಂಟು, ಆರೋಹಣ, ಅವರೋಹಣ ಕ್ರಮ ಪ್ರಾತ್ಯಕ್ಷಿಕೆ ನೀಡಿದರು.

ನಗರಪಾಲಿಕ ಸದಸ್ಯ ಮಾ.ವಿ. ರಾಮಪ್ರಸಾದ್ ಮಾತನಾಡಿ, ಪ್ಲಾಸ್ಟಿಕ್ ಧ್ವಜ ಬೇಡ. ದೇಶಾದ್ಯಂತ ಪ್ಲಾಸ್ಟಿಕ್ ಮತ್ತು ಕಾಗದದಲ್ಲಿ ತಯಾರಿಸಿದ್ದ ತ್ರಿವರ್ಣ ಧ್ವಜದ ಬಳಕೆ ಮತ್ತು ಮಾರಾಟ ಮಾಡದಂತೆ ಕೇಂದ್ರ ಗೃಹ ಸಚಿವಾಲಯ ನಿಷೇಧ ವಿಧಿಸಿದೆಯಾದರೂ ಪ್ಲಾಸ್ಟಿಕ್ ಮತ್ತು ಕಾಗದದ ರಾಷ್ಟ್ರಧ್ವಜಗಳ ಬಳಕೆ ಮತ್ತು ಮಾರಾಟ ಇನ್ನು ನಿಲ್ಲುವಂತೆ ಕಾಣುತ್ತಿಲ್ಲ. ಗಣರಾಜ್ಯೋತ್ಸವ ಹಾಗೂ ಸ್ವಾತಂತ್ರ್ಯ ದಿನದಂದು ದೇಶಾದ್ಯಂತ ಸರ್ಕಾರಿ ಶಾಲಾ ಕಾಲೇಜು, ಸಂಘ ಸಂಸ್ಥೆಗಳಲ್ಲಿ ಶುದ್ಧ ಖಾದಿಯಿಂದ ತಯಾರಿಸಿದ ಧ್ವಜಗಳನ್ನು ಹಾರಿಸುತ್ತಾರೆ. ಆದರೆ ಶಾಲಾ ಮಕ್ಕಳ ಕೈಯಲ್ಲಿ ಹೆಚ್ಚಾಗಿ ಕಾಗದ ಅಥವಾ ಪ್ಲಾಸ್ಟಿಕ್‌ನಿಂದ ತಯಾರಿಸಿದ ಧ್ವಜಗಳು ಕಂಡು ಬರುತ್ತಿವೆ. ಮಾರುಕಟ್ಟೆಯಲ್ಲಿ ಇವುಗಳ ಮಾರಾಟವೇ ಅಧಿಕವಾಗಿದೆ. ಕಡಿಮೆ ಬೆಲೆಗೆ ಸಿಗುವ ಈ ಪ್ಲಾಸ್ಟಿಕ್ ಧ್ವಜಗಳನ್ನು ಮಕ್ಕಳು ಖರೀದಿಸಿ ಕಾರ್ಯಕ್ರಮ ಮುಗಿದ ನಂತರ ಶಾಲಾ ಆವರಣದಲ್ಲಿ ಅಥವಾ ರಸ್ತೆ ಚರಂಡಿ ಪಕ್ಕದಲ್ಲಿ ಎಸೆದು ಬಿಡುತ್ತಾರೆ. ಈ ಧ್ವಜಗಳು ತ್ಯಾಜ್ಯದಲ್ಲಿ ಸೇರಿ ತಿಪ್ಪೆಗುಂಡಿಯಲ್ಲಿ ಛಿದ್ರ ಛಿದ್ರವಾಗಿ ಬಿದ್ದಿರುತ್ತವೆ. ಇಂತಹ ನಡವಳಿಕೆಯಿಂದಾಗಿಯೇ ನಾವು ರಾಷ್ಟ್ರಧ್ವಜಕ್ಕೆ ಅಗೌರವ ತೋರಿದಂತಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಭಾರತೀಯರು ಕೂಡ ಈ ಸಮಸ್ಯೆಯ ಬಗ್ಗೆ ಗಂಭೀರ ಚಿಂತನೆ ಮಾಡಬೇಕಾಗಿದೆ. ಸ್ವಾತಂತ್ರ್ಯ ದಿನ ಆಚರಿಸಲು ಕೆಲವೇ ದಿನಗಳು ಬಾಕಿ ಉಳಿದಿವೆ. ಈ ಸಂದರ್ಭದಲ್ಲಿ ಯಾರೂ ಪ್ಲಾಸ್ಟಿಕ್ ಹಾಗೂ ಕಾಗದದ ಧ್ವಜಗಳು ಬಳಸದಂತೆ ಹಾಗೂ ಮಾರಾಟ ಮಾಡದಂತೆ ರಾಷ್ಟ್ರಧ್ವಜದ ಮಹತ್ವದ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಇಲಾಖೆ, ಜನರಲ್ಲಿ ಜಾಗೃತಿ ಮೂಡಿಸಬೇಕು. ವಿಚಾರ ವಿನಿಮಯ ವೇದಿಕೆಯ ಅಧ್ಯಕ್ಷ ಪುರುಷೋತ್ತಮ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಆರ್.ನಾರಾಯಣ, ಶಾಲೆಯ ಮುಖ್ಯ ಶಿಕ್ಷಕರಾದ ಉಷಾ ಮತ್ತು ಜಯಲಕ್ಷ್ಮಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಮನುಷ್ಯನ ಜೀವನವು ಪಕ್ಷಿಯ ಹಾರಾಟವಿದ್ದಂತೆ



ಮೈಸೂರು, ಆ.11(ಎಸ್‌ಪಿಎನ್)–ಮನುಷ್ಯನ ಜೀವನವು ಒಂದು ಪಕ್ಷಿಯ ಹಾರಾಟವಿದ್ದಂತೆ ಎಂದು ಉಡುಪಿ ಪೇಜಾವರ ಅಧೋಕ್ಷಜ ತೀರ್ಥ ಪೀಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಅಭಿಪ್ರಾಯಪಟ್ಟರು. ಮೈಸೂರು ಹೊರವಲಯದಲ್ಲಿರುವ ಪೂರ್ಣ ಚೇತನ ಪಬ್ಲಿಕ್ ಶಾಲೆಗೆ ಗುರು ಪೂರ್ಣಿಮಾ ಅಂಗವಾಗಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಭೇಟಿ ನೀಡಿ, ಆಶೀರ್ವಚನ ನೀಡಿದರು. ಒಂದು ಹಕ್ಕಿಗೆ ಆಗಸದಲ್ಲಿ ಹಾರಾಡಲು ಎರಡು ರೆಕ್ಕೆಗಳು ಅವಶ್ಯಕ. ಅದೇ ರೀತಿ ಮನುಷ್ಯ ಜೀವನದಲ್ಲಿ ಏನಾದರೂ ಸಾಧಿಸಬೇಕಾದರೆ ವೈಯಕ್ತಿಕ ಪ್ರಯತ್ನ ಮತ್ತು ದೇವರ ಆಶೀರ್ವಾದ ಬೇಕು ಎಂದು ತಿಳಿಸಿದರು.

ಇದಕ್ಕೂ ಮುನ್ನ ವಿದ್ಯಾರ್ಥಿಗಳಾದ ಅಚಿಂತ್ಯ ಮತ್ತು ಸಮನ್ವಿತಾ ನೇತೃತ್ವ ತಂಡ ಪೇಜಾವರ ಶ್ರೀಗಳಿಗೆ ಪೂರ್ಣಕುಂಭ ಸ್ವಾಗತ ನೀಡಿದರು. ನಂತರ ವಿದ್ಯಾರ್ಥಿಗಳಾದ ಮಹೇಶ್ ಕುಮಾರ್, ಹಿತಾಕ್ಷ್ ರವಿ, ತೋಶನ್ ಜಿ.ರಾವ್, ಯುಗನ್ ಮತ್ತು ಲಿವಿನ್ ಅವರು ವಿಷ್ಣು ಸಹಸ್ರನಾಮ ಪಠಣ ಮಾಡಿದರು. ಮೋಕ್ಷದಾ, ಶಾಂಭವಿ, ತೇಜಸ್ ವಿದ್ಯಾರ್ಥಿಗಳು ಭಗವದ್ಗೀತೆ ಶ್ಲೋಕಗಳನ್ನು ಪಠಿಸಿದರು. ಪ್ರಾಂಶುಪಾಲರಾದ ಲಾವಣ್ಯ ಹಾಗೂ ಇತರೆ ಶಿಕ್ಷಕರು ಉಪಸ್ಥಿತರಿದ್ದರು.

ಚಿತ್ರಕಲೆಯಲ್ಲಿ ಅದ್ಭುತ ಚಿಂತನಾ ಶಕ್ತಿಯುಂಟು

ಚಿತ್ರಕಲಾ ಸ್ಪರ್ಧೆಯಲ್ಲಿ ಸಾಹಿತಿ ಬನ್ನೂರು ರಾಜು ಅಭಿಮತ



ಮೈಸೂರು,ಆ.11–ಸಾವಿರ ಸಾವಿರ ಪದಗಳಲ್ಲಿ ಹೇಳುವಂತಾದ್ದನ್ನು ಕೇವಲ ಒಂದು ಛಾಯಾಚಿತ್ರ ಹೇಳಬಲ್ಲದು. ಹಾಗೆಯೇ ಲಕ್ಷ ಲಕ್ಷ ಅಕ್ಷರಗಳಲ್ಲಿ ತಿಳಿಸುವಂತಾದ್ದನ್ನು ಒಂದು ಗೆರೆ ಮಾತ್ರದಿಂದ ಅಭಿವ್ಯಕ್ತಿಸುವ ಅದ್ಭುತ ಶಕ್ತಿ ಚಿತ್ರಕಲೆಗುಂಟು ಎಂದು ಸಾಹಿತಿ ಬನ್ನೂರು ಕೆ.ರಾಜು ಅಭಿಪ್ರಾಯಪಟ್ಟರು.

ನಗರದ ಹೆಬ್ಬಾಳಿನ ಶ್ರೀ ಭೈರವೇಶ್ವರ ನಗರದಲ್ಲಿರುವ ಅಣ್ಣಯ್ಯಪ್ಪ ಮೆಮೋರಿಯಲ್ ಎಜುಕೇಶನ್ ಸೊಸೈಟಿಯ ರಜತ ವರ್ಷದ ಅಂಗವಾಗಿ ಶ್ರೀ ಭೈರವೇಶ್ವರ ಪ್ರಾಥಮಿಕ ಮತ್ತು ಪ್ರೌಢಶಾಲೆ ಹಾಗೂ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಬಹು ದೊಡ್ಡ ಮಟ್ಟದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದ ಅಂತರ ಶಾಲಾ ಕಾಲೇಜು ವಿದ್ಯಾರ್ಥಿಗಳ ಚಿತ್ರಕಲಾ ಸ್ಪರ್ಧೆಯನ್ನು ಜ್ಯೋತಿ ಬೆಳಗುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಚಿತ್ರಕಲೆ ಎಂಬುದು ಪ್ರತಿಯೊಬ್ಬರಿಗೂ ಆಸಕ್ತಿದಾಯಕವಾದ ಅತ್ಯಂತ ಮಹತ್ವಪೂರ್ಣ ವಿಷಯವಾಗಿದ್ದು ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಬಲ್ಲ ಅದ್ಭುತ ಚಿಂತನಾ ಶಕ್ತಿ ಚಿತ್ರಕಲೆಯಲ್ಲಿ ಉಂಟು ಎಂದರು.

ಮೈಸೂರು ಆರ್ಟ್ ಗ್ಯಾಲರಿಯ ಸಂಸ್ಥಾಪಕರೂ ಆದ ಹೆಸರಾಂತ ಚಿತ್ರ ಕಲಾವಿದ ಎಲ್.ಶಿವಲಿಂಗಪ್ಪನವರು ವೇದಿಕೆಯ ಮೇಲೆ ಸ್ಥಳದಲ್ಲೇ ವಿದ್ಯಾ ಸಂಸ್ಥೆಯ ಹೆಸರಿನೊಡನೆ 25ರ ಅಂಕಿಯನ್ನು ಸಮೀಕರಿಸಿ ಸಾಂಕೇತಿಕವಾಗಿ ಬೆಳ್ಳಿ ಪಥದ ನಡಿಗೆಯ ನವಿಲಿನ ಚಿತ್ರವೊಂದನ್ನು ಬರೆದು ಶುಭ ಹಾರೈಸಿದರು. ನಂತರ ಮಾತನಾಡಿದ ಅವರು, ಚಿತ್ರಕಲೆ ಚಿತ್ತಾಕರ್ಷಕವಾದುದು. ಅಷ್ಟೇ ಅಲ್ಲ, ಆಸಕ್ತರಿಗೆಲ್ಲ ಸುಲಭವಾಗಿ ಸಿದ್ಧಿಸುವಂತಹದ್ದು. ಹಾಗಾಗಿ ವಿದ್ಯಾರ್ಥಿಗಳು ಇದರತ್ತ ಹೆಚ್ಚೆಚ್ಚು ಆಸಕ್ತಿ ತಾಳಬೇಕೆಂದು ಚಿತ್ರಕಲೆಯ ಬಗ್ಗೆ ಸವಿವರವಾಗಿ ತಿಳಿಸಿಕೊಟ್ಟರು.

ಖ್ಯಾತ ಚಿತ್ರ ಕಲಾವಿದೆ ಡಾ.ಜಮುನಾರಾಣಿ ಮಿರ್ಲೆ ಮಾತನಾಡಿ, ಪೊಲೀಸ್, ಇಂಜಿನಿಯರ್, ವೈದ್ಯ, ನೃತ್ಯ, ಸಾಹಿತ್ಯ, ಜನಪದ ಸೇರಿದಂತೆ ಪ್ರತಿಯೊಂದು ರಂಗದಲ್ಲೂ ಚಿತ್ರಕಲೆ ಎಂಬುದು ಸೇರಿ ಹೋಗಿದೆ. ಎಲ್ಲಕ್ಕೂ ಪೂರಕವಾಗಿ ಚಿತ್ರಕಲೆ ಬೇಕೇ ಬೇಕು. ಇದೊಂದು ಮಹತ್ವಪೂರ್ಣವಾದ ಸರ್ವ ವಿಷಯೋಪಯೋಗಿ ಕಲೆ ಎಂದರು.

ಇದೇ ಸಂದರ್ಭದಲ್ಲಿ ಸಾಹಿತಿ ಬನ್ನೂರು ಕೆ.ರಾಜು ಮತ್ತು ಚಿತ್ರ ಕಲಾವಿದರಾದ ಎಲ್.ಶಿವಲಿಂಗಪ್ಪ ಹಾಗೂ ಡಾ.ಜಮುನಾರಾಣಿ ಮಿರ್ಲೆ ಅವರನ್ನು ಗೌರವಿಸಲಾಯಿತು. ಶ್ರೀ ಅಣ್ಣಯ್ಯಪ್ಪ ಭೈರವೇಶ್ವರ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಸಿದ್ದೇಗೌಡ ಅಧ್ಯಕ್ಷತೆ ವಹಿಸಿದ್ದರು.

ಪ್ರಾಂಶುಪಾಲರು ಹಾಗೂ ನಿರ್ದೇಶಕರಾದ ಎಸ್.ಸೌಮ್ಯ, ಉಪಪ್ರಾಂಶುಪಾಲ ಪುರುಷೋತ್ತಮ್, ಮುಖ್ಯಶಿಕ್ಷಕಿ ಕಾಮಾಕ್ಷಿ, ಆಡಳಿತಾಧಿಕಾರಿ ಬಿ.ಆರ್.ಪಂಚಾಕ್ಷರಿ, ಚಿತ್ರಕಲಾ ಶಿಕ್ಷಕ ಮನೋಹರ್ ಇನ್ನಿತರರು ಉಪಸ್ಥಿತರಿದ್ದರು. ಇದೊಂದು ಮೆಘಾ ಚಿತ್ರಕಲಾ ಸ್ಪರ್ಧೆಯಾಗಿದ್ದು ನಾನೂರಕ್ಕೂ ಹೆಚ್ಚು ವಿದ್ಯಾರ್ಥಿಗಳು ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಪರಿಹಾರಕ್ಕೆ ಒತ್ತಾಯ

ಮೈಸೂರು, ಆ.11–ಮೈಸೂರು–ಬೆಂಗಳೂರು ರಸ್ತೆಯಲ್ಲಿದ್ದ ಇತಿಹಾಸ ಪ್ರಸಿದ್ಧ ಶ್ರೀ ಕೃಷ್ಣರಾಜೇಂದ್ರ ಮಿಲ್ 6.5.1984 ರಲ್ಲಿ ಮುಚ್ಚಲ್ಪಟ್ಟಿತು. ಈ ಸಂಸ್ಥೆಯಲ್ಲಿ ಸುಮಾರು 2800 ಕಾರ್ಮಿಕರು ಕೆಲಸ ಮಾಡುತ್ತಿದ್ದು, ಈ ಕಾರ್ಮಿಕರಿಗೆ ಇಂದಿಗೂ ಯಾವುದೇ ಪರಿಹಾರದ ಹಣ ಸಂದಾಯವಾಗಿಲ್ಲ ಎಂದು ಮೈಸೂರು ಡಿವಿಷನ್ ಜನರಲ್ ಎಂಪ್ಲಾಯೀಸ್ ಅಸೋಸಿಯೇಷನ್ ಆರೋಪಿಸಿದೆ.

ಈ ಸಂಬಂಧ ಹೇಳಿಕೆ ನೀಡಿರುವ ಅಸೋಸಿಯೇಷನ್ ಉಪಾಧ್ಯಕ್ಷ ಬಿ. ಮರಿಸ್ವಾಮಿ, 2800 ಕಾರ್ಮಿಕರ ಪೈಕಿ ಈಗಾಗಲೇ 1000ಕ್ಕೂ ಹೆಚ್ಚು ಕಾರ್ಮಿಕರು ನಿಧನ ಹೊಂದಿದ್ದಾರೆ. 40 ವರ್ಷವಾಗಿದ್ದರೂ ಇಲ್ಲಿನ ಕಾರ್ಮಿಕರು ಯಾವುದೇ ಪರಿಹಾರದ ಹಣ ಬಂದಿಲ್ಲ. ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿಯೂ ವಿಳಂಬ ಆಗುತ್ತಿದೆ. ಆದ್ದರಿಂದ ಕರ್ನಾಟಕ ಸರ್ಕಾರ ಕೂಡಲೇ ಕಾನೂನು ಕ್ರಮ ತೆಗೆದುಕೊಂಡು ಕಾರ್ಮಿಕರಿಗೆ ಪರಿಹಾರದ ಹಣ ಕೊಡಿಸುವಂತೆ ಒತ್ತಾಯಿಸಿದ್ದಾರೆ. ತಪ್ಪಿದಲ್ಲಿ ಸರ್ಕಾರ ಮಧ್ಯೆ ಪ್ರವೇಶಿಸಿ ಮುಚ್ಚಿರುವ ಶ್ರೀ ಕೃಷ್ಣರಾಜೇಂದ್ರ ಮಿಲ್ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು 2800 ಕಾರ್ಮಿಕರಿಗೂ ನಿವೇಶನ ಮಾಡಿ, ವಿತರಿಸುವಂತೆ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಡಾ.ಅಂಥೋಣಿ ಪಾಲ್‌ರಾಜ್ ಮದರ್ ತೆರೇಸಾ ಪ್ರಶಸ್ತಿ



ಮೈಸೂರು,ಆ.11–ನವದೆಹಲಿಯ ಪ್ರತಿಷ್ಠಿತ ಇಂಟರ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಅಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆ ನೀಡುವ 2023ನೇ ಸಾಲಿನ ಮದರ್ ತೆರೇಸಾ ಇಂಟರ್ ನ್ಯಾಷನಲ್ ಅವಾರ್ಡ್‌ಗೆ ಮೈಸೂರಿನ ಶ್ರೀ ಛಾಯಾದೇವಿ ಬಿ.ಎಡ್ ಕಾಲೇಜಿನ ಪ್ರಾಂಶುಪಾಲರಾದ ಡಾಅಂಥೋಣಿ ಪಾಲ್‌ರಾಜ್ ಅವರನ್ನು ಆಯ್ಕೆ ಮಾಡಲಾಗಿದೆ. ಆ.19ರಂದು ನವದೆಹಲಿಯಲ್ಲಿ ಪ್ರಶಸ್ತಿ ನೀಡಿ, ಗೌರವಿಸಲಾಗುವುದು.

ವಚನಸಾಹಿತ್ಯ ರಸಪ್ರಶ್ನೆ: ಮೀನಾ ನಿರಂಜನ್‌ಗೆ ಬಹುಮಾನ



ಮೈಸೂರು, ಆ.11– ಶರಣು ವಿಶ್ವವಚನ ಫೌಂಡೇಷನ್ ವತಿಯಿಂದ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅಂತರ್ಜಾಲದ ಮೂಲಕ ನಡೆದ ಥಟ್ ಅಂತ ಉತ್ತರಿಸಿ 62ನೇ ವಚನ ಸಾಹಿತ್ಯ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮೈಸೂರಿನ ಮೀನಾ ನಿರಂಜನ್ ಅವರು ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವುದರ ಮೂಲಕ ಬಹುಮಾನಕ್ಕೆ ಭಾಜನರಾಗಿದ್ದಾರೆ ಎಂದು ಶರಣು ವಿಶ್ವ ವಚನ ಫೌಂಡೇಷನ್ ಸಂಸ್ಥಾಪಕಿ ರೂಪ ಕುಮಾರಸ್ವಾಮಿ ತಿಳಿಸಿದ್ದಾರೆ.

ಸಾಧುಗಳಿಗೆ ಸರ್ಕಾರ ರಕ್ಷಣೆ ನೀಡಲಿ: ಇಳೈ ಆಳ್ವಾರ್ ಸ್ವಾಮೀಜಿ



ಮೈಸೂರು, ಆ.11–ಜೈನಮುನಿ ಕಾಮಕುಮಾರ ನಂದಿ ಸ್ವಾಮೀಜಿ ಮಹಾರಾಜರ ಹತ್ಯೆ ಇಡೀ ಸಮಾಜಕ್ಕೆ ಆಘಾತ ಉಂಟು ಮಾಡಿದೆ. ಅಹಿಂಸಾ ಪರಮೋ ಧರ್ಮ ಎಂದು ಬದುಕುತ್ತಿರುವ ಜೈನ ಮುನಿಗಳು ಹಾಗೂ ಸಾಧುಗಳಿಗೆ ಸರ್ಕಾರ ರಕ್ಷಣೆ ನೀಡಬೇಕು ಎಂದು ವೆಂಗಿಪುರ ಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ ಸರ್ಕಾರಕ್ಕೆ ಆಗ್ರಹಿಸಿದರು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯದಲ್ಲಿ ಬೆಳಗಾವಿಯಲ್ಲಿ ಕಿಡಿಗೇಡಿಗಳಿಂದ ಕ್ರೂರ ಹತ್ಯೆಗೊಳಗಾದ ಜೈನಮುನಿ ಕಾಮಕುಮಾರ ನಂದಿ ಸ್ವಾಮೀಜಿ ಮಹಾರಾಜ ಶ್ರೀಗಳಿಗೆ ಅಪೂರ್ವ ಸ್ನೇಹ ಬಳಗದ ವತಿಯಿಂದ ಸಂತಾಪ ಸಭೆಯಲ್ಲಿ ಶೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಅರ್ಪಿಸಿ ಮಾತನಾಡಿದ ಅವರು ಮುನಿಗಳ ಹತ್ಯೆ ಮಾಡಿದವರಿಗೆ ಸರ್ಕಾರ ಕಾನೂನಾತ್ಮಕವಾಗಿ ಕಠಿಣ ಶಿಕ್ಷೆ ವಿಧಿಸಬೇಕು. ಇಂತಹ ಕೃತ್ಯಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಬೇಕು ಎಂದರು.

ನಗರಪಾಲಿಕ ಸದಸ್ಯರಾದ ಮಾವಿ ರಾಮ್ ಪ್ರಸಾದ್ ಮಾತನಾಡಿ, ಜೈನ ಸಮಾಜ ಶಾಂತಿ ಪ್ರಿಯ ಸಮಾಜ. ಅಹಿಂಸಾ ಮಾರ್ಗ ಸಮಾಜದ ಮೂಲಮಂತ್ರ. ಆದರೆ ಮುನಿಗಳನ್ನು ಕರೆಂಟ್ ಶಾಕ್ ನೀಡಿ, ಕೊಲೆ ಮಾಡಿ, ಮೃತ ದೇಹವನ್ನು ಬೋರವೆಲ್‌ನಲ್ಲಿ ತುಂಡರಿಸಿ ತುಂಬಿದ್ದಾರೆ. ಅತ್ಯಂತ ಅಮಾನೀಯ ಘಟನೆ. ಸದಾ ಸಮಾಜದ ಒಳಿತಿಗೆ ಶ್ರಮಿಸುವ ಜೈನ ಸಮಾಜದ ಮುನಿಗಳ ಹತ್ಯೆ ಆಗಿರುವುದು ಖಂಡನೀಯ. ರಾಜ್ಯ ಸರ್ಕಾರ ಮಠಾಧೀಶರಿಗೆ ಮುನಿಗಳಿಗೆ ಭದ್ರತೆ ನೀಡಬೇಕು ಎಂದರು.

ಅಪೂರ್ವ ಸುರೇಶ್, ಒಕ್ಕಲಿಗ ಸಂಘದ ಮಾಜಿ ನಿರ್ದೇಶಕರಾದ ಮೈ.ಲಾ.ವಿಜಯ್ ಕುಮಾರ್, ಜೈನ ಬ್ರಾಹ್ಮಣ ವಿದ್ಯಾರ್ಥಿ ನಿಲಯದ ಕಾರ್ಯದರ್ಶಿ ಶಮಾನಂದ್ ಸಾಗರ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆಯ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಂಘಟನಾ ಕಾರ್ಯದರ್ಶಿ ಅಜಯ್‌ಶಾಸ್ತ್ರಿ ಉದ್ಯಮಿ ಜಯರಾಮ್, ಧರ್ಮರಾಜ್, ನಾಗೇಶ್, ಸಂದೀಪ್ ಚಂದ್ರಶೇಖರ್, ಎಸ್.ಎನ್.ರಾಜೇಶ್, ಚಿನ್ನ ಬೆಳ್ಳಿ ವ್ಯಾಪಾರ ನೌಕರರ ಸಂಘದ ಅಧ್ಯಕ್ಷರಾದ ಸುರೇಶ್ ಗೋಲ್ಡ್, ಬೈರತಿ ಲಿಂಗರಾಜು, ಸುಚೇಂದ್ರ, ಧರ್ಮೇಂದ್ರ, ಬಸವರಾಜು, ರಾಮಚಂದ್ರ ಇನ್ನಿತರರು ಉಪಸ್ಥಿತರಿದ್ದರು.

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಕವಿಗೋಷ್ಠಿ



ಮೈಸೂರು, ಆ. 11–ಉತ್ತಿಷ್ಠ ಭಾರತ ಪ್ರತಿಷ್ಠಾನ, ಗ್ರೀನ್ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆಯ ವತಿಯಿಂದ ನಿಮಿಷಾಂಬ ನಗರ ಹಿರಿಯರ ಹಗಲು ಯೋಗ ಕ್ಷೇಮ ಕೇಂದ್ರದಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಕವಿಗೋಷ್ಠಿಯಲ್ಲಿ ಸಮಾಜ ಸೇವಕ ಎನ್. ಶ್ರೀಧರ್ ದೀಕ್ಷಿತ್ ಅವ ರನ್ನು ಸನ್ಮಾನಿಸಲಾಯಿತು.

ಹಿರಿಯ ಕವಯತ್ರಿ ಎ.ಪುಷ್ಪಾ ಅಯ್ಯಂಗಾರ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕವಯತ್ರಿ ಡಾ.ಕೆ.ಲೀಲಾಪ್ರಕಾಶ್ ಇತರರು ಉಪಸ್ಥಿತರಿದ್ದರು. ಕೆ.ವಿ.ವಾಸು, ಪ್ರೊ.ಆರ್.ಎ. ಕುಮಾರ್, ಜಿ.ಕೆ.ಕುಲಕರ್ಣಿ, ದಾಕ್ಷಾಯಣಿ, ನಾಗಮ್ಮ, ರಾಜಗೋಪಾಲಚಾರಿ, ಎನ್.ಕೆ.ಚನ್ನಪ್ಪ, ಡಾ.ಕೆ.ಲೀಲಾಪ್ರಕಾಶ್, ಅಲಮೇಲಮ್ಮ ಕವನ ವಾಚಿಸಿದರು. ಸ್ವಾತಂತ್ರ್ಯೋತ್ಸವ, ಮಧುಮೇಹ, ದೇಶಪ್ರೇಮ, ಶರಶಯ್ಯೆಯಲ್ಲಿ ಭೀಷ್ಮ. ಪುನೀತ್‌ರಾಜ್‌ಕುಮಾರ್ ಕುರಿತು ಕವನಗಳಿದ್ದವು.

ಕರ್ನಾಟಕ ರಾಷ್ಟ್ರ ಸಮಿತಿಯ ಜಿಲ್ಲಾ ಸಮಿತಿ ನೇಮಕ



ಮೈಸೂರು, ಆ.11(ಜಿಎ)–ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ವತಿಯಿಂದ ಮೈಸೂರಿನ ನೂತನ ಜಿಲ್ಲಾ ಸಮಿತಿ ನೇಮಕ ಮಾಡಲಾಗಿದೆ ಎಂದು ರಾಜ್ಯ ಕಾರ್ಯದರ್ಶಿ ಕೆ.ಎಸ್.ಸೋಮಶೇಖರ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಉಸ್ತುವಾರಿ ಸಲಹೆ ಮೇರೆಗೆ ರಾಜ್ಯ ಕಾರ್ಯಕಾರಿ ಸಮಿತಿಯು ಮೈಸೂರು ಜಿಲ್ಲಾ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದ್ದು, ಜಿಲ್ಲಾ ಸಮಿತಿಯ ಕಾಲಾವಧಿ 3 ವರ್ಷ ಅಥವಾ ರಾಜ್ಯ ಕಾರ್ಯಕಾರಿ ಸಮಿತಿಯ ವಿಶ್ವಾಸ ಇರುವ ತನಕ ಆಗಿರುತ್ತದೆ ಎಂದರು.

ಮೈಸೂರಿನ ನೂತನ ಸಮಿತಿಯಲ್ಲಿ ಜಿಲ್ಲಾಧ್ಯಕ್ಷರಾಗಿ ಸುಂದರ್ ಪ್ರೇಮ್ ಕುಮಾರ್, ಉಪಾಧ್ಯಕ್ಷ ಡಿ.ಪಿ.ಕೆ.ಪರಮೇಶ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಪ್ರವೀಣ್, ಕಾರ್ಯದರ್ಶಿಗಳಾಗಿ ಶ್ರೀವಾರಿ ನಾಗರಾಜ್, ಶ್ರೀಲೋಲ ಅಯ್ಯಂಗಾರ್, ಎನ್.ರಾಜೇಂದ್ರ ಮತ್ತು ಆರ್.ನಾಗರಾಜ್ ಮತ್ತು ಜಂಟಿ ಕಾರ್ಯದರ್ಶಿಗಳಾಗಿ ಎಸ್.ನಾಗೇಂದ್ರ ಮತ್ತು ಸ್ಯಾಮುಯೆಲ್ ಸದಾನಂದ ಅವರನ್ನು ನೇಮಕ ಮಾಡಲಾಗಿದ್ದು, ಸಿ.ಕುಮಾರ್, ಎಚ್.ರಾಜೇಗೌಡ ಮತ್ತು ಜಗದೀಶ್ ಹೊರಳವಾಡಿ ಅವರನ್ನು ಸಂಘಟನಾ ಕಾರ್ಯದರ್ಶಿಗಳಾಗಿ ನೇಮಕ ಮಾಡಲಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಂಘಟನಾ ಕಾರ್ಯದರ್ಶಿ ರವಿಕುಮಾರ್, ಜಿಲ್ಲಾಧ್ಯಕ್ಷ ಸುಂದರ್ ಪ್ರೇಮ್‌ಕುಮಾರ್, ಉಪಾಧ್ಯಕ್ಷ ಡಿ.ಪಿ.ಕೆ.ಪರಮೇಶ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಪ್ರವೀಣ್, ಜಂಟಿ ಕಾರ್ಯದರ್ಶಿ ಎಸ್.ನಾಗೇಂದ್ರ ಮತ್ತು ಸಂಘಟನಾ ಕಾರ್ಯದರ್ಶಿ ಎಚ್.ರಾಜೇಗೌಡ ಉಪಸ್ಥಿತರಿದ್ದರು.

ಪ್ರತಿಭಾ ಪುರಸ್ಕಾರ

ಮೈಸೂರು, ಆ.11–ಮೈಸೂರಿನ ಆರಾಧ್ಯ ಮಹಾಸಭಾ ವತಿಯಿಂದ ಆ. 27ರಂದು ಬೆಳಗ್ಗೆ 11 ಗಂಟೆಗೆ ಆರಾಧ್ಯ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಂಡಿದೆ.

2022–23ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಶೇ. 85ಕ್ಕಿಂತ ಹೆಚ್ಚು ಅಂಕ ಗಳಿಸಿದವರು ಅರ್ಹರಾಗಿರುತ್ತಾರೆ. ಆರಾಧ್ಯ ಜನಾಂಗದ ವಿದ್ಯಾರ್ಥಿಗಳು ತಮ್ಮ ಅಂಕಪಟ್ಟಿ, ಆಧಾರ್ ಕಾರ್ಡಿನ ನಕಲು ಪ್ರತಿಯೊಂದಿಗೆ ಅರ್ಜಿಯನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಆರಾಧ್ಯ ಮಹಾಸಭೆ, ಜೆಎಲ್‌ಬಿ ರಸ್ತೆ, ಚಾಮುಂಡಿಪುರಂ ಇಲ್ಲಿಗೆ ತಲುಪಿಸಲು ಕೋರಲಾಗಿದೆ. ಆ. 15 ಅಂತಿಮ ದಿನಾಂಕವಾಗಿರುತ್ತದೆ. ನಂತರ ಬಂದ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ ಎಂದು ಆರಾಧ್ಯ ಮಹಾಸಭಾದ ಅಧ್ಯಕ್ಷ ಪಿ. ನಾಗಭೂಷಣ ಆರಾಧ್ಯರು ತಿಳಿಸಿದ್ದಾರೆ.



ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ 'ನನ್ನ ಹೆಸರು ಕಿಶೋರ ಚಿತ್ರ' ವೀಕ್ಷಣೆ ಹಾಗೂ ಸಂವಾದ ಕಾರ್ಯಕ್ರಮದಲ್ಲಿ ಶಾಸಕ ಶ್ರೀವತ್ಸ ಅವರನ್ನು ಪುಷ್ಪಗುಚ್ಛ ನೀಡಿ ಸ್ವಾಗತಿಸಲಾಯಿತು. ಕಾಲೇಜಿನ ಪ್ರಾಂಶುಪಾಲ ಸಿ.ಕೆ.ಅಶೋಕ್‌ಕುಮಾರ್, ಉಪನ್ಯಾಸಕರಾದ ರಾಜೇಂದ್ರ ಪ್ರಸಾದ್ ಹೊನ್ನಲಗೆರೆ, ಹೆಚ್.ಆರ್.ಪರಮೇಶ್, ಬಾಲಸುಬ್ರಮಣ್ಯಂ, ಮುಶೀರ್, ಸೋಮಶೇಖರ್ ಹಾಗೂ ಇತರರನ್ನು ಕಾಣಬಹುದು.

ಬಿಎಲ್‌ಓ ಕಾರ್ಯದಿಂದ ಬಿಡುಗಡೆಗೊಳಿಸುವಂತೆ ಶಿಕ್ಷಕರ ಬೇಡಿಕೆ



ಮೈಸೂರು, ಆ.11(ಎಸ್‌ಪಿಎನ್)–ಪಿಎಸ್‌ಟಿ ಶಿಕ್ಷಕರಿಗೆ (ಪ್ರಾಥಮಿಕ ಶಾಲಾ ಶಿಕ್ಷಕರು) ತಾರತಮ್ಯ ಹಾಗೂ ಬಿಎಲ್‌ಓ ಕಾರ್ಯದಿಂದ ಬಿಡುಗಡೆಗೊಳಿಸುವ ಬೇಡಿಕೆಯೂ ಸೇರಿದಂತೆ ಇತರೆ ಸಮಸ್ಯೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮೈಸೂರು ಜಿಲ್ಲಾ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಪದಾಧಿಕಾರಿಗಳು, ರಾಜ್ಯ ಚುನಾವಣಾ ಆಯೋಗಕ್ಕೆ ಹಾಗೂ ಜಿಪಂ ಸಿಇಓ, ಡಿಡಿಪಿಐ ಮೂಲಕ ರಾಜ್ಯ ಸರ್ಕಾರಕ್ಕೆ ಪ್ರತ್ಯೇಕ ಮನವಿ ಪತ್ರ ಸಲ್ಲಿಸಿದ್ದಾರೆ.

ಈ ಬಾರಿ ವರ್ಗಾವಣೆಯಲ್ಲಿ 1–7ನೇ ನೇಮಕಾತಿ ಆದೇಶ ಪಡೆದಿದ್ದ ಪ್ರಾಥಮಿಕ ಶಾಲಾ ಶಿಕ್ಷಕರನ್ನು ಹಿಂಬಡ್ತಿಗೊಳಿಸಿ (1–5ನೇ ತರಗತಿಗೆ) ವರ್ಗಾವಣೆ ಮಾಡಿದ್ದು, ಇದರಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 200 ರಿಂದ 300 ಶಿಕ್ಷಕರು ಹೆಚ್ಚುವರಿಯಾಗಿದ್ದಾರೆ. ರಾಜ್ಯಾದ್ಯಂತ ಪಿಎಸ್‌ಟಿ ಶಿಕ್ಷಕರನ್ನು ಕತ್ತಲಲ್ಲಿಟ್ಟು ವರ್ಗಾವಣೆ ನೀತಿ ರೂಪಿಸಿರುವ ರಾಜ್ಯ ಸರ್ಕಾರದ ಧೋರಣೆಯನ್ನು ಬಲವಾಗಿ ಖಂಡಿಸಿದ್ದು, ಹಿಂಬಡ್ತಿಗೊಳಿಸಿರುವ ರಾಜ್ಯ ಸರ್ಕಾರ, ಮತ್ತೆ ಅಧಿಕಾರಿಗಳ ಮೂಲಕ 6 ಮತ್ತು 7ನೇ ತರಗತಿಗಳಿಗೆ ಬೋಧನೆಗಳಲ್ಲಿ ತೊಡಗಿಸಿಕೊಳ್ಳುವಂತೆ ಒತ್ತಡ ಹಾಕುತ್ತಿರುವುದಕ್ಕೆ ತೀವ್ರ ಆಕ್ರೋಶ ಹೊರಹಾಕುತ್ತಿದ್ದಾರೆ.

ಬಿಎಲ್‌ಓ ಕೆಲಸದಿಂದ ಮುಕ್ತಿಗೊಳಿಸಿ: ಸುಪ್ರೀಂ ಕೋರ್ಟ್ ಆದೇಶದಂತೆ ಬಿಎಲ್‌ಓಗಳಾಗಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರನ್ನು ಈ ಕೂಡಲೇ ಕೆಲಸದಿಂದ ಮುಕ್ತಿಗೊಳಿಸಿ, ಬೋಧನೆಗೆ ಹೆಚ್ಚಿನ ಕಾಲಾವಕಾಶ ಮಾಡಿಕೊಡಬೇಕು. ಪಿಎಸ್‌ಟಿ ಶಿಕ್ಷಕರಿಗೆ 1–5ನೇ ತರಗತಿಗೆ ಹಿಂಬಡ್ತಿಗೊಳಿಸಿರುವುದನ್ನು ವರ್ಗಾವಣೆಯಲ್ಲಿ ಪರಿಗಣಿಸಿರುವುದರಿಂದ ಅಂತಹ ಶಿಕ್ಷಕರನ್ನು 1–5ನೇ ತರಗತಿಗೆ ಮಾತ್ರ ಪಾಠ–ಪ್ರವಚನ ಕೈಗೊಳ್ಳಲು ಸರ್ಕಾರ ಆದೇಶಿಸಬೇಕೆಂದು ಒತ್ತಾಯಿಸಿದ್ದಾರೆ.

1395 ಶಿಕ್ಷಕರ ಕೊರತೆ: ಮೈಸೂರು ಜಿಲ್ಲೆಯೊಂದರಲ್ಲೇ ಪ್ರತಿ ತಿಂಗಳು 40 ರಿಂದ 50 ಶಿಕ್ಷಕರು ನಿವೃತ್ತಿಯಾಗುತ್ತಿದ್ದು, ಶಿಕ್ಷಕರ ನಿವೃತ್ತಿಯಿಂದಾಗಿ ಹಾಲಿ 1,395ಕ್ಕೂ ಹೆಚ್ಚು ಶಿಕ್ಷಕರ ಕೊರತೆಯಿದ್ದು, ಹೆಚ್.ಡಿ.ಕೋಟೆ 400, ನಂಜನಗೂಡು 280, ಪಿರಿಯಾಪಟ್ಟಣ 170, ಹುಣಸೂರು 120, ತಿ.ನರಸೀಪುರ 120, ಕೆ.ಆರ್.ನಗರ 100, ಮೈಸೂರು ತಾಲೂಕು 110, ಮೈಸೂರು ದಕ್ಷಿಣ 45, ಮೈಸೂರು ಉತ್ತರ 50 ಶಿಕ್ಷಕರ ಹುದ್ದೆಗಳು ಖಾಲಿಯಿದ್ದು, ರಾಜ್ಯಾದ್ಯಂತ ಪ್ರಾಥಮಿಕ ಶಾಲೆಗಳಲ್ಲಿ 45 ಸಾವಿರಕ್ಕೂ ಹೆಚ್ಚು ಶಿಕ್ಷಕರ ಕೊರತೆಯಿದ್ದು, ಈ ಕೊರತೆಯನ್ನು ನೀಗಿಸುವಲ್ಲಿ ಆಡಳಿತರೂಢ ಸರ್ಕಾರ ವಿಫಲವಾಗಿದೆ ಎಂದು ಆರೋಪಿಸಿದರು. ಶಿಕ್ಷಕರ ನೇಮಕಾತಿ, ವರ್ಗಾವಣೆ ನೀತಿಗೆ ತಿದ್ದುಪಡಿ ತಂದು ಸರ್ಕಾರಿ ಪ್ರಾಥಮಿಕ ಶಾಲಾ ಸೇವಾ ನಿರತ ಪದವೀಧರ ಶಿಕ್ಷಕರನ್ನು ಜಿಪಿಟಿ ಹುದ್ದೆಗಳಿಗೆ ಜೇಷ್ಠತೆಯೊಂದಿಗೆ ಬಡ್ತಿ ನೀಡಬೇಕು. ಬಿಎಲ್‌ಓ ಕೆಲಸಗಳಿಂದ ಶಿಕ್ಷಕರನ್ನು ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿ ಸರ್ಕಾರಕ್ಕೆ ಮನವಿ ಮಾಡಲಾಗಿದೆ.

ಸಾರಿಗೆ ಸಚಿವ ಸ್ಥಾನ ತೊರೆದು ಸಾರಿಗೆ ಬಸ್ಸಲ್ಲೇ ಮೈಸೂರಿಗೆ ಬಂದರು...

ಸಿದ್ದರಾಮಯ್ಯರೊಂದಿಗೆ ಬಹಳ ವರ್ಷಗಳ ಒಡನಾಟ ಹೊಂದಿದವರು ಸಿದ್ದರಾಮಯ್ಯನವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅತ್ಯಂತ ವಿಶ್ವಾಸಪೂರಕ ಹಾಗೂ ಅಭಿಮಾನದಿಂದ ಗುಣಗಾನದೊಂದಿಗೆ ಅವರ ಸಾಧನೆಗೆ ಹೆಮ್ಮೆಪಟ್ಟಿದ್ದಾರೆ.



— ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ —



ಸಿದ್ದರಾಮಯ್ಯನವರು ಸಾರಿಗೆ ಸಚಿವರಾಗಿದ್ದಾಗ ಕೆಲವೊಂದು ರಾಜಕೀಯ ಬದಲಾವಣೆಯಿಂದ ಸಚಿವ ಸ್ಥಾನ ತೊರೆಯಬೇಕಾಯಿತು. ಬಳಿಕ ಅವರು ಕೆಎಸ್‌ಆರ್‌ಟಿಸಿ ಬಸ್‌ನಲ್ಲೇ ಮೈಸೂರಿಗೆ ಆಗಮಿಸಿದರು.

ನಾವು ಬಾಲ್ಯದಿಂದಲೂ ಸ್ನೇಹಿತರು. ವಿದ್ಯಾಭ್ಯಾಸ ಹಾಗೂ ರಾಜಕೀಯ ಪಯಣದಲ್ಲೂ ನಿರಂತರ ಒಡನಾಟದಲ್ಲಿದ್ದವರು. ಬೇರೆ ಬೇರೆ ಪಕ್ಷದಲ್ಲಿದ್ದಾಗಲೂ ನಮ್ಮ ಬಾಂಧವ್ಯಕ್ಕೆ ಯಾವುದೇ ಧಕ್ಕೆಯಾಗಿಲ್ಲ.

ಸಿದ್ದರಾಮಯ್ಯ ಅವರ ಊರಿನ (ಸಿದ್ದರಾಮನ ಹುಂಡಿ) ಪಕ್ಕದ ಗ್ರಾಮವಾದ ಕುಪ್ಪೇಗಾಲದಲ್ಲಿ ನಮ್ಮ ತಾಯಿ ಮನೆ ಇದೆ. ಕೆಂಪೀರೇಗೌಡರು ನನ್ನ ಸೋದರ ಮಾವ. ನಾನು ಹೈಸ್ಕೂಲ್ ಓದುವಾಗ ಕುಪ್ಪೇಗಾಲದಲ್ಲಿದ್ದೆ. ಕಾಲೇಜು ಓದುವಾಗ ಸಿದ್ದರಾಮಯ್ಯನವರು ಸ್ನೇಹಿತ ವೈ.ಮಹೇಶ್ (ಮಾಜಿ ಎಂಎಲ್‌ಸಿ) ಅವರ ಮನೆಗೆ ಆಗಾಗ ಬರುತ್ತಿದ್ದರು. ನಾನೂ ಅವರೊಟ್ಟಿಗೆ ಕಾಲ ಕಳೆಯುತ್ತಿದ್ದೆ. ಗಂಗೋತ್ರಿಯ ವಿದ್ಯಾರ್ಥಿ ಜೀವನದ ಹೋರಾಟದಲ್ಲೂ ಭಾಗಿಯಾಗುತ್ತಿದ್ದೆವು.

ಬಳಿಕ ಪ್ರೊ.ನಂಜುಂಡಸ್ವಾಮಿ ಅವರೊಂದಿಗೆ ಒಡನಾಟ ಬೆಳೆಯಿತು. ಸಿದ್ದರಾಮಯ್ಯನವರು ತಾಲೂಕು ಬೋರ್ಡ್ ಸದಸ್ಯರಾದರು. ಆ ಸಂದರ್ಭದಲ್ಲಿ ನಾನು ಸೆನೆಟ್‌ಗೆ ಆಯ್ಕೆಯಾದೆ. ರಮಾವಿಲಾಸ ರಸ್ತೆಯಲ್ಲಿ ನಾನು ಮನೆ ಮಾಡಿದ್ದೆ. ಅದರ ಹಿಂಭಾಗ ಬಾಡಿಗೆ ರೂಂನಲ್ಲಿ ಸಿದ್ದರಾಮಯ್ಯ ಇದ್ದರು. ಆಗಲೂ ನಿರಂತರವಾಗಿ ಭೇಟಿಯಾಗುತ್ತಿದ್ದೆವು. ನಂತರ ಲೋಕಸಭೆಗೆ ಸ್ಪರ್ಧಿಸಿ ಸಿದ್ದರಾಮಯ್ಯನವರು ಸೋತರು. 1983ರಲ್ಲಿ ನನ್ನ ಸೋದರ ಮಾವ ಕೆಂಪೀರೇಗೌಡರಿಗೆ ಕಾಂಗ್ರೆಸ್ ಟಿಕೆಟ್ ಸಿಗಲಿಲ್ಲ. ಆಗ ಪಕ್ಷೇತರರಾಗಿ ಸ್ಪರ್ಧಿಸುವಂತೆ ಅವರನ್ನು ಒತ್ತಾಯಿಸಿದರೂ ಒಪ್ಪಲಿಲ್ಲ.

ಈ ವೇಳೆ ಕೆಂಪೀರೇಗೌಡರು ಅವರ ಆಪ್ತ ಸ್ನೇಹಿತರೊಂದಿಗೆ ಮಾತನಾಡಿ, ಸಿದ್ದರಾಮಯ್ಯನವರನ್ನು ಕರೆಸಿ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ತಿಳಿಸಿದರು. ಬಿ ಫಾರಂ ಅನ್ನು ತಮ್ಮಯ್ಯ ಅವರಿಗೆ ನೀಡಿದ್ದರಿಂದ ಸಿದ್ದರಾಮಯ್ಯ ನಿರಾಶರಾದರು. ಬಿ ಫಾರಂ ಇಲ್ಲದೆ ಸ್ಪರ್ಧಿಸುವುದಿಲ್ಲ ಎಂದರು. ಆಗ ಪಕ್ಷೇತರರಾಗಿ ಸ್ಪರ್ಧಿಸುವಂತೆ ಕೆಂಪೀರೇಗೌಡರು ಹೇಳಿ, ಒಪ್ಪಿಸಿದರು. ಆಗ ನನ್ನ ಬಳಿಯೂ ದುಗುಡ ವ್ಯಕ್ತಪಡಿಸಿದ್ದರು. ನಿಮ್ಮ ಮಾವ ಪಕ್ಷೇತರರಾಗಿ ಸ್ಪರ್ಧಿಸಿ ಎಂದಿದ್ದಾರೆ, ಏನು ಮಾಡುವುದೋ ತೋಚುತ್ತಿಲ್ಲ ಎಂದರು. ಆಗ ನಾನು, ಮಾವ ಮಾತು ಕೊಟ್ಟ ಮೇಲೆ ಹಿಂದೆ ಸರಿಯುವುದಿಲ್ಲ ಎಂದಿದ್ದೆ. ಆಗ ತಕ್ಕಡಿ ಗುರುತಿನಡಿ ಸ್ಪರ್ಧಿಸಿ, ಗೆದ್ದರು.

ಇತ್ತೀಚೆಗೆ ಅಂತ್ಯಗೊಂಡ ವಿಧಾನಸಭಾ ಚುನಾವಣೆಯ ವೇಳೆ ಸಿದ್ದರಾಮಯ್ಯನವರು ನನ್ನ ಭೇಟಿಯಾದಾಗ 83ರ ಚುನಾವಣೆಯನ್ನು ನೆನೆದರು. ನೀನೂ ಸುಮ್ಮನಾಗಿಬಿಟ್ಟೆ, ನಿನ್ನ ಮಗನಿಗೆ ರಾಜಕೀಯದ ಬಗ್ಗೆ ಆಸಕ್ತಿ ಇಲ್ಲವಾ? ಎಂದು ಕೇಳಿದರು. ಈಗಿನ ಪರಿಸ್ಥಿತಿಯಲ್ಲಿ ರಾಜಕಾರಣ ಮಾಡೋದು ಕಷ್ಟ. ಹಿಂದೆ ನನ್ನ ವಿರುದ್ಧ ರೆಬೆಲ್ ಅಭ್ಯರ್ಥಿಗಳನ್ನು ನಿಲ್ಲಿಸಿ, ಸೋಲಿಸಿದರು. ಈಗ ಚುನಾವಣೆ ಮಾಡೋಕಾಗುತ್ತಾ ಎಂದಿದ್ದೆ. ಆಗ ಅವರು ಹೌದಯ್ಯಾ, 1983ರ ಚುನಾವಣೆಯಲ್ಲಿ ಜನರು ನೀಡಿದ್ದೆಲ್ಲಾ ಸೇರಿ ಒಟ್ಟು 83 ಸಾವಿರ ರೂ. ಹಣದಲ್ಲಿ ಚುನಾವಣೆ ಮುಗಿಸಿದೆವು. ಈಗ ಅದನ್ನು ಕಲ್ಪಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ ಎಂದು ಹೇಳಿದರು.

ರಾಮಕೃಷ್ಣ ಹೆಗಡೆಯವರು ಸರ್ಕಾರವನ್ನು ವಿಸರ್ಜಿಸುವ ಮುನ್ನ ನಡೆದ ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಹಾಗೂ ನಜೀರ್‌ಸಾಬ್ ಇಬ್ಬರೂ ಸೋತರು. ಬಳಿಕ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕೆಂಪೀರೇಗೌಡರು ಚಾಮರಾಜ ಕ್ಷೇತ್ರದಲ್ಲಿ, ಸಿದ್ದರಾಮಯ್ಯನವರು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದರು. ಸಾರಿಗೆ ಸಚಿವರಾಗಿದ್ದಾಗ ಸರ್ಕಾರದಲ್ಲಿ ಏನೋ ವ್ಯತ್ಯಾಸ ಆಗಿ ಸಚಿವ ಸ್ಥಾನ ತೊರೆಯಬೇಕಾಯಿತು. ಅಂದು ರಾತ್ರಿ ನನಗೆ ಕರೆ ಮಾಡಿ, ನಾಳೆ ಮೈಸೂರಿಗೆ ಬರುತ್ತಿದ್ದೇನೆ ಬಸ್ ಸ್ಟ್ಯಾಂಡ್‌ಗೆ ಬರುತ್ತೀಯಾ ಎಂದರು. ಬೆಂಗಳೂರಿನಿಂದ ಕೆಎಸ್‌ಆರ್‌ಟಿಸಿ ಬಸ್‌ನಲ್ಲೇ ಬಂದರು. ನಿನ್ನೆ ಸಚಿವರಾಗಿದ್ದವರು ಇಂದು ಬಸ್‌ನಲ್ಲಿ ಬಂದಿದ್ದಾರೆ ಎಂದು ಚಾಲಕ ಹಾಗೂ ನಿರ್ವಾಹಕರೂ ಬೇಸರಿಸಿದರು. ಆಗ ಸಿದ್ದರಾಮಯ್ಯನವರು ನಾವು ಮಾಮೂಲಿ ಹೀಗೆಯೇ ಓಡಾಡೋದಲ್ವಾ ಬಿಡು. ಇದರಲ್ಲೇನಿದೆ ಎಂದರು. ಅಲ್ಲಿಂದ ನಾವು ಒಟ್ಟಿಗೆ ಜಲದರ್ಶಿನಿಗೆ ಬಂದೆವು.

ಚುನಾವಣೆಯಾಗಿ 10 ತಿಂಗಳಿಗೆ ಕೆಂಪೀರೇಗೌಡರು ತೀರಿಕೊಂಡರು. ನಾನು ಉಪ ಚುನಾವಣೆಗೆ ಸ್ಪರ್ಧಿಸಲು ಮುಂದಾದೆ. ಸಿದ್ದರಾಮಯ್ಯನವರು ನನಗೆ ತುಂಬಾ ಬೆಂಬಲ ನೀಡಿದರು. ಆದರೆ ಚಿಕ್ಕಬೋರಯ್ಯನವರನ್ನು ನಿಲ್ಲಿಸಲಾಯಿತು. ಸಿದ್ದರಾಮಯ್ಯನವರು ಪಶುಸಂಗೋಪನಾ ಸಚಿವರಾಗಿದ್ದಾಗ ನಾನು ಮೈಮುಲ್ ಅಧ್ಯಕ್ಷನಾಗಿದ್ದೆ. ದೇವೇಗೌಡರು ಪಕ್ಷದಿಂದ ಹೊರಹೋಗಿದ್ದಾಗ ನಾನು ಸ್ಪರ್ಧಿಸಿದೆ. ಆಗ ಶಂಕರ ಲಿಂಗೇಗೌಡರು ರೆಬೆಲ್ ಆಗಿ ನಿಂತರು. ದೇವೇಗೌಡರು ವಾಪಸ್ ಬಂದಾಗಲೂ ನನ್ನ ವಿರುದ್ಧ ಮಾದೇಗೌಡರು ರೆಬೆಲ್ ಆಗಿ ನಿಂತರು. ಜೆ.ಹೆಚ್.ಪಟೇಲ್ ಅವರು ಮುಖ್ಯಮಂತ್ರಿಯಾಗಿದ್ದಾಗ ನನ್ನನ್ನು ಮುಡಾ ಅಧ್ಯಕ್ಷನನ್ನಾಗಿ ಮಾಡಿದರು. ಸಿದ್ದರಾಮಯ್ಯನವರು ಎಲ್ಲಾ ಹಂತದಲ್ಲೂ ಜೊತೆಗಿದ್ದರು. ರಾಜಕೀಯವಾಗಿ ಏನೆಲ್ಲಾ ಬದಲಾವಣೆಗಳಾದರೂ ಬಾಂಧವ್ಯ ಮಾತ್ರ ಹಾಗೆಯೇ ಉಳಿದಿದೆ.

ನಿರೂಪಣೆ: ಎಸ್.ಬಿ.ದೇವರಾಜ

ಸಿದ್ದರಾಮಯ್ಯನವರು ಸಾಮಾಜಿಕ ಕಳಕಳಿಯುಳ್ಳ ನಾಯಕರು

ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ನನ್ನದು ಸುಮಾರು 40 ವರ್ಷಗಳ ಒಡನಾಟ. ಸಮಾಜದ ಎಲ್ಲಾ ವರ್ಗದ ಜನರಿಗೂ ಸಾಮಾಜಿಕ ನ್ಯಾಯ ದೊರಕಬೇಕು ಎನ್ನುವ ಕಳಕಳಿಯುಳ್ಳ ವ್ಯಕ್ತಿತ್ವದ ಧೀಮಂತ ನಾಯಕರು.

1983 ರಿಂದಲೂ ಅವರ ಜೊತೆಗಿದ್ದೇನೆ. ಸಿದ್ದರಾಮಯ್ಯ ಅವರು ವಕೀಲರಾಗಿದ್ದಾಗ ಯಾವುದೇ ಶುಲ್ಕ ತೆಗೆದುಕೊಳ್ಳದೆ ಕಷ್ಟದಲ್ಲಿದ್ದವರಿಗೆ ನ್ಯಾಯ ಕೊಡಿಸುವ ಕೆಲಸ ಮಾಡುತ್ತಿದ್ದರು. ನನ್ನ, ಅವರ ಪರಿಚಯು ಅಲ್ಲಿಂದಲೇ ಶುರುವಾಗಿದ್ದು. ನನ್ನನ್ನು ಗ್ರಾಪಂ ಮತ್ತು ಮಂಡಲ ಪಂಚಾಯತಿ ಸದಸ್ಯ, ತಾಪಂ ಮತ್ತು ಜಿಪಂ ಅಧ್ಯಕ್ಷನನ್ನಾಗಿ ಮಾಡಿದರು. ತನ್ನವರನ್ನು ತನ್ನೊಂದಿಗೆ ಉನ್ನತ ಸ್ಥಾನಕ್ಕೆ ಕರೆದುಕೊಂಡು ಹೋಗುವ ವಿಶೇಷ ನಾಯಕತ್ವದ ಗುಣ ನಮ್ಮ ನಾಯಕರದು. ತಮ್ಮ ಇಡೀ ರಾಜಕೀಯ ಜೀವನದಲ್ಲಿ ಎಂದಿಗೂ ಯಾರನ್ನೂ ನಿನ್ನ ಜಾತಿ ಯಾವುದು ಎಂದು ಕೇಳಿಲ್ಲ. ಎಂದೂ ಮೇಲು-ಕೀಳು, ಜಾತಿ-ಭೇದ ಮಾಡಿದವರಲ್ಲ. ಅದರಲ್ಲೂ ಸಮಾಜದಲ್ಲಿ ತುಳಿತಕ್ಕೆ ಒಳಗಾದವರನ್ನು ಅತೀ ಹೆಚ್ಚು ಕಾಳಜಿಯಿಂದ ಕಾಣುವ ಹಾಗೂ ಎಲ್ಲರೂ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎನ್ನುವ ಸಮಾಜಮುಖಿ ಚಿಂತಕರು.

ಇನ್ನೂ ಕೆಲಸದ ವಿಚಾರದಲ್ಲಿ ಅಭಿವೃದ್ಧಿಯ ಹರಿಕಾರ. ರಾಜ್ಯದಲ್ಲಿ ಅಭಿವೃದ್ಧಿ ಹೊಂದಿದ ವಿಧಾನಸಭಾ ಕ್ಷೇತ್ರಗಳ ಸಾಲಿನಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಪ್ರಮುಖ ಸ್ಥಾನ ಹೊಂದಿರುವುದಕ್ಕೆ ಸಿದ್ದರಾಮಯ್ಯ ಅವರ ಕೊಡುಗೆ ಅಪಾರ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಚುನಾವಣೆಗೆ ನೀನು ಹೋಗಬೇಕು, ಪಕ್ಷ ಸಂಘಟನೆ ಮಾಡು ಎಂದಿದ್ದರು. ಆದರೆ ಅಂತಿಮವಾಗಿ ಬದಲಾದ ಕೆಲ ರಾಜಕೀಯ ಲೆಕ್ಕಾಚಾರಗಳನ್ವಯ ನಿನ್ನ ಮೇಲೆ ನನಗೆ ವಿಶ್ವಾಸವಿದೆ. ಈ ಬಾರಿ ಸ್ಪರ್ಧಿಸುವುದು ಬೇಡ ಎಂದು ಸಮಾದಾನಪಡಿಸಿದ್ದರು. ಅವರ ಮಾತಿನಂತೆ ಚುನಾವಣೆ ಕಣದಿಂದ ಹಿಂದೆ ಸರಿದೆ. ಪಕ್ಷದ ಅಭ್ಯರ್ಥಿ ಗೆಲುವಿಗೆ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಸಿದ್ದರಾಮಯ್ಯ ಅವರನ್ನು ಬಿಟ್ಟು ನಾನು ಎಲ್ಲಿಗೂ ಹೋಗಲಾರೆ. ನಾನು ಮನಸಾರೆ ಇಷ್ಟಪಡುವ ರಾಜಕಾರಣಿ ಸಿದ್ದರಾಮಯ್ಯ ಅವರಿಗೆ ಹೃದಯಪೂರ್ವಕವಾಗಿ ಹುಟ್ಟುಹಬ್ಬದ ಶುಭಾಶಯ ಕೋರುತ್ತೇನೆ.

ನಿರೂಪಣೆ: ಮೋಹನ್ ಕಾಯಕ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಸಿದ್ದರಾಮಯ್ಯರ ಸ್ನೇಹಿತನಾಗಿ ಅವರ ಸಾಧನೆಯ ಹೆಮ್ಮೆ...

ವಿಧಾನಪರಿಷತ್ ಮಾಜಿ ಸದಸ್ಯ ವೈ.ಮಹೇಶ್

ಪ್ರಧಾನಿ ಮೋದಿ ಅವರ ವಿರುದ್ಧ ಸೈದ್ಧಾಂತಿಕವಾಗಿ ಹೋರಾಟ ಮಾಡಬಲ್ಲ ರಾಷ್ಟ್ರೀಯ ನಾಯಕರೆಂದರೆ ಅವರು ಸಿದ್ದರಾಮಯ್ಯನವರು ಮಾತ್ರ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ರಾಜ್ಯಮಟ್ಟದ ನಾಯಕರಷ್ಟೇ ಅಲ್ಲ. ರಾಷ್ಟ್ರೀಯ ಮಟ್ಟದಲ್ಲಿ ಪ್ರಧಾನಿ ಮೋದಿ ಅವರನ್ನು ಸಮರ್ಥವಾಗಿ ಪ್ರಶ್ನಿಸಬಲ್ಲ, ಅವರ ಪ್ರಶ್ನೆಗಳಿಗೆ ಉತ್ತರಿಸಬಲ್ಲ ಹಾಗೂ ಸೈದ್ಧಾಂತಿಕವಾಗಿ ಹೋರಾಡಬಲ್ಲ ನಾಯಕ.

ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಅತ್ಯುತ್ತಮ ಆಡಳಿತ ನಡೆಸುತ್ತಿದ್ದಾರೆ. ರಾಜ್ಯದ ಜನತೆ ತುಂಬಾ ಖುಷಿಯಾಗಿದ್ದಾರೆ. ಚುನಾವಣೆ ಪ್ರಣಾಳಿಕೆಯಲ್ಲಿ ನೀಡಿದ್ದ ಐದು ಗ್ಯಾರಂಟಿಗಳನ್ನು ಹಂತ ಹಂತವಾಗಿ ಜಾರಿಗೊಳಿಸುತ್ತಿದ್ದಾರೆ. ಆರ್ಥಿಕ ಸಚಿವರಾಗಿ 14 ಬಾರಿ ಬಜೆಟ್ ಮಂಡಿಸಿರುವ ಅನುಭವದಿಂದ ಪರಿಸ್ಥಿತಿಯನ್ನು ಸಮರ್ಥವಾಗಿ ನಿಬಾಯಿಸುತ್ತಿದ್ದಾರೆ. ಭಾರೀ ಚೆನ್ನಾಗಿ ಫೈನಾನ್ಸ್, ಲಾ ಸರಿದೂಗಿಸುತ್ತಿದ್ದಾರೆ. ಗ್ಯಾರಂಟಿಗಳ ಅನುಷ್ಠಾನಕ್ಕೆ 53 ಸಾವಿರ ಕೋಟಿ ಹಣ ಹೊಂದಿಸುವುದು ಸುಲಭ ಸಾಧ್ಯವಲ್ಲ. ಹಣಕಾಸು ಸಚಿವರಾಗಿ ಹಾಗೂ ಮುಖ್ಯಮಂತ್ರಿಯಾಗಿ ಅತ್ಯುತ್ತಮ ಕಾರ್ಯನಿರ್ವಹಣೆ ಮಾಡುತ್ತಿದ್ದಾರೆ. ಕೊಟ್ಟ ಮಾತಿನಂತೆ ನಡೆದುಕೊಂಡಿದ್ದಾರೆ.

ನನಗಿಂತ ಸಿದ್ದರಾಮಯ್ಯನವರು ನಾಲ್ಕೈದು ವರ್ಷ ಹಿರಿಯರು. ಅವರದು ಸಿದ್ದರಾಮನ ಹುಂಡಿ, ನಮ್ಮೂರು ಕುಪ್ಪೇಗಾಲ. ಅವರಿಗೆ ನಮ್ಮೂರಿನಲ್ಲಿ ತುಂಬಾ ಜನ ಸ್ನೇಹಿತರಿದ್ದಾರೆ. ನೇರವಾಗಿ 4ನೇ ತರಗತಿಯಿಂದ ವಿದ್ಯಾಭ್ಯಾಸ ಆರಂಭಿಸಿದ ಅವರು ಉತ್ತಮವಾಗಿ ಅಧ್ಯಯನ ಮಾಡಿದರು. ಯುವರಾಜ ಕಾಲೇಜಿನಲ್ಲಿ ಬಿಎಸ್ಸಿ, ನಂತರ ಶಾರದಾ ವಿಲಾಸ ಕಾಲೇಜಿನಲ್ಲಿ ಕಾನೂನು ಪದವಿ ಪೂರೈಸಿದರು. ಕಾಲೇಜು ಹಂತದಲ್ಲಿ ನಾವಿಬ್ಬರೂ ಆಪ್ತ ಗೆಳೆಯರಾದೆವು. ರಜೆ ಇದ್ದಾಗಲೆಲ್ಲಾ ನಮ್ಮೂರಿನಲ್ಲಿ ಅದೂ ನಮ್ಮ ಮನೆಯಲ್ಲೇ ಹೆಚ್ಚಾಗಿ ಉಳಿದುಕೊಳ್ಳುತ್ತಿದ್ದರು. ನಮ್ಮೂರಿನ ಬಗ್ಗೆ ಅವರಿಗೆ ಅಭಿಮಾನ. ಅವರ ಹುಟ್ಟೂರಿಗಿಂತ ಕುಪ್ಪೇಗಾಲದಲ್ಲೇ ಹೆಚ್ಚು ಕಾಲ ಕಳೆಯುತ್ತಿದ್ದರು.



ವೈ.ಮಹೇಶ್ ಕುಟುಂಬ ಸದಸ್ಯರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಸಿದ್ಧ ವಕೀಲರಾಗಿದ್ದ ಚಿಕ್ಕಬೋರಯ್ಯನವರ ಬಳಿ ನಾವಿಬ್ಬರೂ ಜೂನಿಯರ್ ಲಾಯರ್ ಆಗಿ ಪ್ರಾಕ್ಟೀಸ್ ಮಾಡುತ್ತಿದ್ದೆವು. ಕೌಟುಂಬಿಕ ವೈದ್ಯರಾಗಿದ್ದ ನನ್ನ ತಂದೆಯೇ ಸಿದ್ದರಾಮಯ್ಯನವರನ್ನು ಚಿಕ್ಕಬೋರಯ್ಯನವರ ಬಳಿ ಕರೆದುಕೊಂಡು ಹೋಗಿ, ಈತ ನಮ್ಮ ಹುಡುಗ ಮಾರ್ಗದರ್ಶನ ನೀಡಿ ಎಂದು ಸೇರಿಸಿದ್ದರು. 1978ರಲ್ಲಿ ತಾಲೂಕು ಬೋರ್ಡ್ ಚುನಾವಣೆಗೆ ಸಿದ್ದರಾಮಯ್ಯನವರು ಸ್ಪರ್ಧಿಸಿದ್ದರು. ಆಗ ನನ್ನ ಸ್ಕೂಟರ್‌ನಲ್ಲಿ ನಾವಿಬ್ಬರೇ ಊರುಗಳಿಗೆ ತೆರಳಿ ಮತಯಾಚನೆ ಮಾಡುತ್ತಿದ್ದೆವು. 1983ರ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಮೊದಲ ಬಾರಿ ಶಾಸಕರಾದರು.

ಬಿ.ಎಸ್ಸಿ ನಂತರ ಎಂ.ಎಸ್ಸಿ ಮಾಡಿ ಉಪನ್ಯಾಸಕರಾಗಬೇಕೆಂದು ಸಿದ್ದರಾಮಯ್ಯ ಆಸೆಪಟ್ಟಿದ್ದರು. ಆದರೆ ಎಂ.ಎಸ್ಸಿಗೆ ಸೀಟ್ ಸಿಗಲಿಲ್ಲ. ಅದು ಜೀವನದಲ್ಲಿ ದೊಡ್ಡ ತಿರುವು. ಸೀಟ್ ಸಿಗದಿರುವುದು ಅವರಿಗೆ ವರದಾನವಾಯಿತು. ಒಂದು ವೇಳೆ ಸೀಟ್ ಸಿಕ್ಕಿದ್ದರೆ ಎಂ.ಎಸ್ಸಿ ಮಾಡಿ, ಉಪನ್ಯಾಸಕ ರಾಗುತ್ತಿದ್ದರಷ್ಟೇ. ಬಲವಂತವಾಗಿ ಕಾನೂನು ಪದವಿಗೆ ಸೇರಿದ್ದೂ ರಾಜಕೀಯಕ್ಕೆ ಬರಲು ಕಾರಣವಾಯಿತು. ಶಾರದಾವಿಲಾಸ ಕಾನೂನು ಕಾಲೇಜಿನಲ್ಲಿ ಉಪನ್ಯಾಸಕರಾಗಿದ್ದ ಪ್ರೊ. ನಂಜುಂಡಸ್ವಾಮಿ ಅವರ ಪ್ರಭಾವದಿಂದಲೇ ಅವರು ರಾಜಕೀಯಕ್ಕೆ ಬಂದರು. ಬಳಿಕ ರೈತಸಂಘದ ಹೋರಾಟದಲ್ಲೂ ಭಾಗಿಯಾದರು. ಈ ನಡುವೆ ಚಿಕ್ಕಬೋರಯ್ಯನವರು ವಿದ್ಯಾವರ್ಧಕ ಕಾನೂನು ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸಿದ್ದರಾಮಯ್ಯನವರನ್ನು ನೇಮಿಸಿಕೊಂಡರು. ಅವರ ಆಸೆಯಂತೆ ನಾಲ್ಕೈದು ವರ್ಷ ಉಪನ್ಯಾಸಕರಾಗಿಯೂ ಕಾರ್ಯ ನಿರ್ವಹಿಸಲು ಅವಕಾಶ ಸಿಕ್ಕಿತ್ತು.

ನಾವು ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಸಮಾಜವಾದಿ ಡಾ.ರಾಮ ಮನೋಹರ್ ಲೋಹಿಯಾ ಹಾಗೂ ಜಯಪ್ರಕಾಶ್(ಜೆಪಿ) ಅವರಿಂದ ಪ್ರಭಾವಿತರಾಗಿದ್ದೆವು. ವರುಣ ನಾಲೆ ಹೋರಾಟ ಸೇರಿದಂತೆ ರೈತಸಂಘದ ಹಲವು ಹೋರಾಟಗಳಲ್ಲಿ ಭಾಗಿಯಾಗಿದ್ದೆವು. ಸಿಕ್ಕಾಗಲೆಲ್ಲಾ ತುಂಬಾ ಆತ್ಮೀಯವಾಗಿ ಮಾತನಾಡುತ್ತಾರೆ. ಜನರೊಂದಿಗೆ ಉತ್ತಮ ಸಂಪರ್ಕವಿದೆ. ರಾಜಕೀಯಕ್ಕೆ ಬರಬೇಕೆಂಬ ಆಸೆ ಇರದಿದ್ದರೂ ಸಿದ್ದರಾಮಯ್ಯನವರು ಹಂತ ಹಂತವಾಗಿ ಬೆಳೆದು ಬಂದಿದ್ದಾರೆ. ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಸಮರ್ಥ ಆಡಳಿತ ನೀಡುತ್ತಿರುವ ಬಗ್ಗೆ ಸ್ನೇಹಿತನಾಗಿ ನನಗೆ ಬಹಳ ಹೆಮ್ಮೆಯಿದೆ.

ನಿರೂಪಣೆ: ಎಸ್.ಬಿ.ದೇವರಾಜ

ಒಮ್ಮೆ ಪರಿಚಯವಾದರೆ ಮುಗಿಯಿತು; ಸಿದ್ದರಾಮಯ್ಯ ಅತ್ಯಂತ ಸ್ನೇಹಮಯಿ

ನಿವೃತ್ತ ಮಾಹಿತಿ ಆಯುಕ್ತ ಕೆ.ಎಂ.ಚಂದ್ರೇಗೌಡ



ಸಿದ್ದರಾಮಯ್ಯನವರು ಸ್ನೇಹಜೀವಿ. ಒಮ್ಮೆ ಪರಿಚಯವಾದವರನ್ನು ಹಲವು ವರ್ಷಗಳ ನಂತರವೂ ಗುರುತಿಸಿ ಮಾತನಾಡಿಸುತ್ತಾರೆ. ಅವರು ಕಾಲೇಜು ದಿನಗಳಿಂದಲೂ ನನಗೆ ಪರಿಚಯ. ಜೆಪಿ ಚಳವಳಿಯಲ್ಲಿ ಒಟ್ಟಿಗೆ ಭಾಗವಹಿಸಿದ್ದೆವು. ಅವರು ರಾಜಕೀಯ ಕ್ಷೇತ್ರಕ್ಕೆ ಹೋದರು, ನಾನು ಸರ್ಕಾರಿ ಸೇವೆಗೆ ಸೇರಿದೆ. ಆದರೆ ನನ್ನನ್ನು ಅಧಿಕಾರಿಯ ರೀತಿ ಎಂದೂ ಕಂಡಿಲ್ಲ. ಸ್ನೇಹಿತನಾಗಿ ಅತ್ಯಂತ ಆತ್ಮೀಯತೆಯಿಂದ ಮಾತನಾಡಿಸುತ್ತಾರೆ. ಪರಸ್ಪರ ವಿಶ್ವಾಸ ಹಾಗೆಯೇ ಇದೆ. ಗೌರವದಿಂದ ಕಾಣುತ್ತಾರೆ. ಇತ್ತೀಚೆಗೆ ರೇಸ್‌ಕೋರ್ಸ್ ವಿಚಾರವಾಗಿ ಭೇಟಿಯಾದಾಗಲೂ ಆತ್ಮೀಯವಾಗಿ ಕಂಡರು. ತಾಯಿ ಚಾಮುಂಡೇಶ್ವರಿ ಸಿದ್ದರಾಮಯ್ಯನವರಿಗೆ ಆಯುರಾರೋಗ್ಯ-ನೆಮ್ಮದಿ ನೀಡಲಿ. ಇನ್ನಷ್ಟು ಸೇವೆ ಮಾಡುವ ಶಕ್ತಿ ಕರುಣಿಸಲಿ.

ಪ್ರಾಮಾಣಿಕ, ನೇರ ಮಾತಿನ ರಾಜಕೀಯ ಮುತ್ಸದ್ಧಿ...

ಮಾಜಿ ಶಾಸಕ ಎಂ.ಕೆ.ಸೋಮಶೇಖರ್

ನಾನು ವಿದ್ಯಾರ್ಥಿಯಾಗಿದ್ದಂದಿನಿಂದಲೂ ಸಿದ್ದರಾಮಯ್ಯ ಅವರನ್ನು ನೋಡುತ್ತಾ ಬಂದಿದ್ದೇನೆ. ಮೈಸೂರಿನ ಡಿ.ಸುಬ್ಬಯ್ಯ ರಸ್ತೆಯಲ್ಲಿ ರೂಂ ಮಾಡಿಕೊಂಡು ಓದುತ್ತಿದ್ದರು. ಅದೇ ರಸ್ತೆಯಲ್ಲಿ ನಮ್ಮ ಮನೆಯೂ ಇತ್ತು. ಅವರ ಊರಿನ ಹುಡುಗರು (ಸಿದ್ದರಾಮಹುಂಡಿ) ಕೂಡ ನನಗೆ ಪರಿಚಯ ಇದ್ದರು.

ನಂತರ ಅವರು ಎಂಪಿ ಚುನಾವಣೆಗೆ ನಿಂತಾಗ ಅವರ ಪರ ಪ್ರಚಾರ ಮಾಡಿದ್ದೆವು. ಅವರ ಬ್ಯಾನರ್ ಕಟ್ಟುವುದು, ಗೋಡೆ ಬರಹ ಬರೆಯುತ್ತಿದ್ದೆ. 2004ರಲ್ಲಿ ಸಿದ್ದರಾಮಯ್ಯ ಅವರನ್ನು ಜೆಡಿಎಸ್‌ನಿಂದ ಹೊರ ಕಳುಹಿಸಿದಾಗ ಅವರೊಂದಿಗೆ ಎಂಎಲ್‌ಎ ಆಗಿದ್ದ ನಾನು, ಮಂಚನಹಳ್ಳಿ ಮಹದೇವ, ಪಿರಿಯಾಪಟ್ಟಣದ ಕೆ.ವೆಂಕಟೇಶ್, ಸತೀಶ್ ಜಾರಕಿಹೊಳಿ, ಹೆಚ್.ಸಿ.ಮಹದೇವಪ್ಪ, ಕಡೂರು ಕೃಷ್ಣಮೂರ್ತಿ, ಎಂ.ವೈ. ಮೇಟಿ ಸೇರಿ 9 ಜನ ಅವರೊಂದಿಗೆ ಜೆಡಿಎಸ್ ಬಿಟ್ಟು ಬಂದೆವು. ಹಾಗಾಗಿ ನಮಗೂ ರಾಜಕೀಯದಲ್ಲಿ ಒಂದಷ್ಟು ಅವಕಾಶ ದೊರೆಯಿತು.

ಸಿದ್ದರಾಮಯ್ಯ ಅವರಲ್ಲಿನ ವಿಶೇಷ ಗುಣವೆಂದರೆ – ಪ್ರಾಮಾಣಿಕತೆ ಮತ್ತು ನೇರ ಮಾತು. ಪ್ರೀತಿಯಿಂದ ಮಾತ್ರವೇ ಅವರ ಬಳಿ ಯಾವುದಾದರೂ ನ್ಯಾಯಬದ್ಧವಾದ ಕೆಲಸ ಮಾಡಿಸಿಕೊಳ್ಳಬಹುದೇ ಹೊರತು, ಕಾನೂನುಬಾಹಿರ ಕೆಲಸ ಮಾಡಿಸಿಕೊಳ್ಳಲು ಸಾಧ್ಯವೇ ಇಲ್ಲ. ಅವರಲ್ಲಿನ ಪ್ರಾಮಾಣಿಕತೆಯಿಂದಾಗಿಯೇ ಉಪಮುಖ್ಯಮಂತ್ರಿ, ಮುಖ್ಯಮಂತ್ರಿಯಾಗಿ, 14 ಬಾರಿ ಬಜೆಟ್ ಮಂಡಿಸಿದ್ದರೂ ಇಂದಿಗೂ ಅವರಿಗೆ ಸರಿಯಾಗಿ ಒಂದು ಮನೆಯಿಲ್ಲ.



ಮಾಡುವ ಕೆಲಸದಲ್ಲಿ ಸಿದ್ದರಾಮಯ್ಯ ಅವರು ತೋರುವ ನಿಷ್ಠೆಯೇ ಅವರ ನೈತಿಕ ಶಕ್ತಿ. ಹಣದ ಹಿಂದೆ ಎಂದೂ ಹೋದವರಲ್ಲ. ಬಡವರ, ಮಹಿಳೆಯರ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಯಾವುದೇ ಜಾತಿ, ಸಮುದಾಯವೆಂದು ನೋಡದೆ ಎಲ್ಲರಿಗೂ ಸಮಾನ ಅವಕಾಶ ದೊರೆಯಬೇಕು ಎಂದು ಸದಾ ಚಿಂತಿಸುತ್ತಾರೆ. ಮುಖ್ಯಮಂತ್ರಿಯಾದಾಗಿನಿಂದ ಗ್ಯಾರಂಟಿ ಯೋಜನೆಗಳ ಮೂಲಕ ಸರ್ವರಿಗೂ ಶಕ್ತಿ ತುಂಬುವ ಕೆಲಸ ಮಾಡಿದ್ದಾರೆ. ಬಡವರ ವಾರ್ಷಿಕ ಆದಾಯ, ತಲಾ ಆದಾಯ ಹೆಚ್ಚಾಗಬೇಕು ಎಂದು ನಾನಾ ಯೋಜನೆಗಳನ್ನು ಜಾರಿಗೆ ತರುವ ಅರ್ಥಶಾಸ್ತ್ರಜ್ಞ, ಮೊರಾರ್ಜಿ ಸೇರಿದಂತೆ ನಾನಾ ಹೆಸರಿನಲ್ಲಿ ನೂರಾರು ಹಾಸ್ಟೆಲ್‌ಗಳ ಸ್ಥಾಪನೆ, ಬಿಸಿಯೂಟ, ಕ್ಷೀರಭಾಗ್ಯ ಸೇರಿದಂತೆ ಹತ್ತು-ಹಲವು ಚಿಂತನೆಗಳ ಮೂಲಕ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೂ ಅನುಕೂಲ ಮಾಡಿದ್ದಾರೆ.

ಅವರೊಂದಿಗಿನ ನನ್ನ ಸಂಬಂಧ ಮೊದಲಿನಿಂದಲೂ ಉತ್ತಮವಾಗಿದೆ. ನ್ಯಾಯಯುತವಾಗಿದ್ದರಷ್ಟೇ ಅವರಿಂದ ಕೆಲಸವಾಗುತ್ತದೆ. ಇಲ್ಲವಾದರೆ ಮುಖಕ್ಕೆ ಉಗಿದಂತೆ ಬೈಯ್ಯುತ್ತಾರೆ. ಈ ಕೆಲಸ ಆಗಲ್ಲ ಹೋಗ್... ಎನ್ನುತ್ತಾರೆ. ಬೇಜಾರು ಮಾಡಿಕೊಳ್ಳುತ್ತಾರೆ ಎಂದು ಮುಖಸ್ತುತಿಗೆ ಪ್ರಯತ್ನ ಮಾಡುತ್ತೇನೆ ಎಂಬ ಭರವಸೆಯ ಮಾತೇ ಇಲ್ಲ. ಈ ಕೆಲಸ ನ್ಯಾಯಯುತವಾಗಿದ್ದು, ಮಾಡುತ್ತೇನೆ ಅಥವಾ ಮಾಡಿಸಿಕೊಡುತ್ತೇನೆ ಎಂದರೆ ಎಷ್ಟು ತೊಡಕುಗಳು ಎದುರಾದರೂ ಮಾಡಿಯೇ ತೀರುವ ದಿಟ್ಟ ಮನಸ್ಸಿನ ವ್ಯಕ್ತಿ. ಸಾಕಷ್ಟು ಬಾರಿ ಸಿದ್ದರಾಮಯ್ಯ ಅವರಿಂದ ಬೈಸಿಕೊಂಡಿದ್ದೇನೆ. ನಮ್ಮ ಮನೆಯಲ್ಲಿರುವ ಹಿರಿಯರು ಬೈದರೆಂದುಕೊಂಡು ಅವರೊಂದಿಗೆ ಇರಲು ಮುಖ್ಯ ಕಾರಣವೇ ಅವರಲ್ಲಿರುವ ಪ್ರಾಮಾಣಿಕತೆ.

ಸಿದ್ದರಾಮಯ್ಯ ಅವರಿಂದ ಸಾಕಷ್ಟು ಪಾಠ ಕಲಿತಿದ್ದೇನೆ. ಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕು, ಹೇಗೆ ಮಾತನಾಡಬೇಕು. ಹೇಗೆ ವ್ಯವಹರಿಸಬೇಕು. ಎಂಬುದನ್ನು ತಿಳಿದುಕೊಳ್ಳುವ ಜೊತೆಗೆ ನನ್ನ ನಡವಳಿಕೆ, ರೀತಿ-ನೀತಿಗಳನ್ನು ಬದಲಾವಣೆ ಮಾಡಿಕೊಂಡಿಕೊಂಡಿದ್ದೇನೆ. ಅವರ ವಿರುದ್ಧವಾಗಿ ಎಂದಿಗೂ ನಡೆದುಕೊಂಡಿಲ್ಲ. ಹಾಗೆಯೇ ಅವರಿಗೆ ಕೆಟ್ಟ ಹೆಸರನ್ನು ತರುವ ಕೆಲಸವನ್ನೂ ಮಾಡಿಲ್ಲ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಯಾಕೆ ಸೋಲಾಯಿತು ಎಂದು ಕೇಳಿದ್ದರು. ಕೆಲವೊಂದು ರಾಜಕೀಯ ಮೇಲಾಟದಿಂದ ಸೋಲಾಯಿತು ಎಂದು ವಿವರಿಸಿದ್ದೆ. ನಾನು ಚುನಾವಣೆಯಲ್ಲಿ ಗೆಲ್ಲಲಿಲ್ಲ, ಮಂತ್ರಿಯಾಗಲಿಲ್ಲ ಎಂಬ ಯಾವ ಬೇಸರವೂ ಇಲ್ಲ. ಸಿದ್ದರಾಮಯ್ಯ ಅವರಂತಹ ವ್ಯಕ್ತಿ ರಾಜ್ಯದ ಮುಖ್ಯಮಂತ್ರಿಯಾಗಿರುವುದೇ ನಮಗೆ ದೊಡ್ಡ ಸಂಭ್ರಮ. 76ನೇ ವರ್ಷದ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ನೆಚ್ಚಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನಃಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ.

ನಿರೂಪಣೆ: ಮೋಹನ್ ಕಾಯಕ

ರಾಜಕಾರಣದ 'ಸಿದ್ಧ' ಪುರುಷ ಮುಖ್ಯಮಂತ್ರಿ ಸಿದ್ದರಾಮಯ್ಯ–'76'



ಇಂದು (ಆ.12) ಸಿದ್ದರಾಮಯ್ಯನವರಿಗೆ 76ನೇ ಹುಟ್ಟುಹಬ್ಬದ ಸಂಭ್ರಮ. ಅಂದ ಹಾಗೆ ಆ.12 ಎಂಬುದು ನಿಜವಾಗಿಯೂ ಅವರು ಜನಿಸಿದ ದಿನಾಂಕವೇ ಎಂಬುದು ಅವರಿಗೇ ಗೊತ್ತಿಲ್ಲ ಎಂಬುದು ಸೋಜಿಗ. ಸಿದ್ದರಾಮಯ್ಯ ಹುಟ್ಟಿದ ದಿನಾಂಕವಾಗಲೀ, ವರ್ಷವಾಗಲೀ ಅವರಿಗೆ ಅಥವಾ ಅವರ ಕುಟುಂಬದವರಿಗೆ ನಿಖರವಾಗಿ ಗೊತ್ತಿಲ್ಲ. ಎಮ್ಮೆ ಮೇಯಿಸುತ್ತಿದ್ದ ಚುರುಕಾದ ಹುಡುಗನನ್ನು ಶಾಲೆಗೆ ಕರೆತಂದು ನೇರವಾಗಿ 5ನೇ ತರಗತಿಗೆ ಸೇರಿಸಿಕೊಂಡ ಸಿದ್ದರಾಮನಹುಂಡಿ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾದ ಎಸ್.ಎಂ.ರಾಜಪ್ಪ ಅವರು ಸಿದ್ದರಾಮಯ್ಯನವರಿಗೆ 10ನೇ ವರ್ಷದಲ್ಲಿ ನಿಗದಿಪಡಿಸಿದ ಜನನ ದಿನಾಂಕವೇ ಆಗಸ್ಟ್ 12. ಈ ವಿಚಾರವನ್ನು ಸ್ವತಃ ಸಿದ್ದರಾಮಯ್ಯನವರು ಹಲವಾರು ಬಹಿರಂಗ ಸಭೆಗಳಲ್ಲಿ ಮಾತ್ರವಲ್ಲದೇ, ವಿಧಾನಸಭೆಯಲ್ಲೂ ಕೂಡ ಪ್ರಸ್ತಾಪಿಸಿದ್ದಾರೆ.

ಹೋಬಳಿ ಕೇಂದ್ರವಾಗಲೀ, ಗ್ರಾಮ ಪಂಚಾಯ್ತಿ ಕೇಂದ್ರ ಸ್ಥಾನವಾಗಲೀ ಆಗಿರದ ಮೈಸೂರು ತಾಲೂಕಿನ ಪುಟ್ಟ ಗ್ರಾಮ ಸಿದ್ದರಾಮನಹುಂಡಿಯ ಸಿದ್ದರಾಮೇಗೌಡ ಮತ್ತು ಬೋರಮ್ಮ ದಂಪತಿಯ ಪುತ್ರ ಸಿದ್ದರಾಮಯ್ಯ. ಈ ಹಳ್ಳಿಯಲ್ಲಿ ಅಕ್ಷರಸ್ಥರು ಬಹಳ ಕಡಿಮೆ. ಅಲ್ಲಿನ ಜನರಿಗೆ ಮಕ್ಕಳನ್ನು ಶಾಲೆಗೆ ಕಳುಹಿಸಿ ವಿದ್ಯಾವಂತರನ್ನಾಗಿ ಮಾಡಬೇಕು ಎಂಬುದರ ಬಗ್ಗೆ ಅಷ್ಟೇನೂ ಅರಿವಿರಲಿಲ್ಲ. ಮಕ್ಕಳಿಗೂ ಕೂಡ ಶಾಲೆಯ ಬಗ್ಗೆ ಆಕರ್ಷಣೆ ಇರಲಿಲ್ಲ. ಹೀಗಾಗಿ ಸಿದ್ದರಾಮಯ್ಯ ಅವರು ಆರಂಭದ ದಿನಗಳಲ್ಲಿ ಶಾಲೆಗೆ ಹೋಗಲೇ ಇಲ್ಲ.

ಈ ಗ್ರಾಮದಲ್ಲಿ ಒಬ್ಬ ಮಗನನ್ನು ವೀರ ಮಕ್ಕಳ ಕುಣಿತ ಕಲಿಯಲು ಕಳುಹಿಸುವುದು ಪದ್ಧತಿಯಾಗಿ ಬಂದಿತ್ತು. ಸಿದ್ದರಾಮಯ್ಯನವರ ತಂದೆ ಸಿದ್ದರಾಮೇಗೌಡರೂ ಕೂಡ ತಮ್ಮ ಮಗನನ್ನು ವೀರ ಮಕ್ಕಳ ಕುಣಿತ ಕಲಿಯಲು ನಂಜೇಗೌಡ ಎಂಬ ಮಾಸ್ಟರ್ ಬಳಿ ಕಳುಹಿಸಿದ್ದರು. 25 ಹುಡುಗರ ತಂಡದಲ್ಲಿ ಒಬ್ಬರಾಗಿದ್ದ ಸಿದ್ದರಾಮಯ್ಯ, ಮನೆಯಲ್ಲಿ ದ್ದುದ್ದಕ್ಕಿಂತ ಹೊರಗಡೆ ಸುತ್ತಾಡುವುದೇ ಜಾಸ್ತಿ. ಎಮ್ಮೆ ಮೇಯಿಸುತ್ತಾ ವೀರ ಮಕ್ಕಳ ಕುಣಿತದಲ್ಲೂ ಎಲ್ಲರಿಗಿಂತ ಚುರುಕಾಗಿದ್ದ ಸಿದ್ದರಾಮಯ್ಯ, ಮಾಸ್ಟರ್ ನಂಜೇಗೌಡರ ಗಮನವನ್ನು ಸೆಳೆದಿದ್ದರು. ಈ ನಂಜೇಗೌಡರದು ಒಂದು ಹವ್ಯಾಸ. ತನ್ನ ಬಳಿ ವೀರ ಮಕ್ಕಳ ಕುಣಿತ ಕಲಿಯಲು ಬರುವ ಹುಡುಗರಿಗೆ ಮರಳಿನ ಮೇಲೆ ಅಕ್ಷರಾಭ್ಯಾಸ ಮಾಡಿಸುವುದು ನಂಜೇಗೌಡರ ಹವ್ಯಾಸವಾಗಿತ್ತು. ಇವರ ಬಳಿ ಇದ್ದ ಹುಡುಗರ ಪೈಕಿ ಸಿದ್ದರಾಮಯ್ಯ ಅತೀ ಉತ್ಸಾಹದಿಂದ ಅಕ್ಷರ ಕಲಿಯುತ್ತಿದ್ದರು. ಅದನ್ನು ಕಂಡು ನಂಜೇಗೌಡರು ಕಾಗುಣಿತದ ಜೊತೆಗೆ ಮಗ್ಗಿಯನ್ನೂ ಕೂಡ ಕಲಿಸತೊಡಗಿದರು.

ಹಳ್ಳಿಯ ಹದವಾದ ಬದುಕು: ಹೀಗೆ ಎಮ್ಮೆ ಮೇಯಿಸುತ್ತಾ, ವೀರ ಮಕ್ಕಳ ಕುಣಿತ ಕುಣಿಯುತ್ತಾ 10 ವರ್ಷ ಕಳೆದಿದ್ದ ಸಿದ್ದರಾಮಯ್ಯನವರು, ಕಾನೂನು ಪದವೀಧರರಾಗಲು ಕಾರಣೀಭೂತರಾದವರು ಸಿದ್ದರಾಮಯ್ಯನಹುಂಡಿ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾದ ಎಸ್.ಎಂ.ರಾಜಪ್ಪ. ಶಾಲೆಗೆ ಮಕ್ಕಳನ್ನು ಕಳುಹಿಸುವ ಪರಿಪಾಠ ಕಡಿಮೆ ಇದ್ದ ಈ ಹಳ್ಳಿಯ ಮನೆ–ಮನೆಗೂ ತೆರಳುತ್ತಿದ್ದ ರಾಜಪ್ಪನವರು, ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪೋಷಕರ ಮನವೊಲಿಸುತ್ತಿದ್ದರು. ಹೀಗೆ ಸಿದ್ದರಾಮೇಗೌಡರ ಮನವೊಲಿಸಿ ಅವರ ಮಗ ಸಿದ್ದರಾಮಯ್ಯನವರನ್ನು ಶಾಲೆಗೆ ಕರೆತಂದು ಅದಾಗಲೇ ಅಕ್ಷರಾಭ್ಯಾಸ ಮಾಡಿದ್ದ ಸಿದ್ದರಾಮಯ್ಯನವರನ್ನು ನೇರವಾಗಿ 5ನೇ ತರಗತಿಗೆ ಸೇರಿಸಿಕೊಂಡರು. (ಆಗ ಅಕ್ಷರ ಕಲಿತಿರುವ ವಿದ್ಯಾರ್ಥಿಗಳನ್ನು ವಯಸ್ಸಿಗನುಗುಣವಾಗಿ ನೇರವಾಗಿ ಯಾವುದೇ ತರಗತಿಗೆ ಸೇರಿಸಿಕೊಳ್ಳಲು ಅವಕಾಶವಿತ್ತು.).

5ನೇ ತರಗತಿಗೆ ನೇರವಾಗಿ ಪ್ರವೇಶ ಪಡೆದಿದ್ದ ಸಿದ್ದರಾಮಯ್ಯ ಓದಿನಲ್ಲೂ ಮುಂದಿದ್ದು, ತನ್ನ ಗ್ರಾಮದಲ್ಲಿ 5ನೇ ತರಗತಿಯಲ್ಲಿ ಶಾಲೆಯಲ್ಲೇ ಮೊದಲಿಗನಾಗಿ ಮಿಂಚಿ ನಂತರ ಕುಪ್ಪೇಗಾಲ ಗ್ರಾಮದ ಸರ್ಕಾರಿ ಶಾಲೆಯಲ್ಲಿ 8ನೇ ತರಗತಿ ಪೂರೈಸಿದಾಗ ತನ್ನ ಮಗ ಶಿಕ್ಷಣದಲ್ಲಿ ಮೊದಲಿಗನಾಗಿ ಮಿಂಚುತ್ತಿರುವುದನ್ನು ಕಂಡು ಸಿದ್ದರಾಮೇಗೌಡರಿಗೂ ಮಗನನ್ನು ಓದಿಸಬೇಕೆಂಬ ಆಸಕ್ತಿ ಉಂಟಾಯಿತು. ಇದರ ಪರಿಣಾಮ ಸಿದ್ದರಾಮಯ್ಯ ಅವರು ಮೈಸೂರಿನ ವಿದ್ಯಾವರ್ಧಕ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿವರೆಗೆ ವ್ಯಾಸಂಗ ಮಾಡಿ, ನಂತರ ಯುವರಾಜ ಕಾಲೇಜಿನಲ್ಲಿ ಬಿ.ಎಸ್ಸಿ. ಪದವಿ ಪಡೆದರು. ಇವರ ತಂದೆಗೆ ಮಗನನ್ನು ಡಾಕ್ಟರ್ ಮಾಡಬೇಕೆಂಬ ಕನಸಿತ್ತಾದರೂ, ವೈದ್ಯಕೀಯ ಶಿಕ್ಷಣಕ್ಕೆ ಅವಕಾಶ ದೊರೆಯದ ಕಾರಣ ಸಿದ್ದರಾಮಯ್ಯ ಶಾರದಾವಿಲಾಸ ಕಾನೂನು ಕಾಲೇಜಿಗೆ ಸೇರಿಕೊಂಡು ವಕೀಲರಾದರು.

ಅದು ಇಡೀ ದೇಶದಲ್ಲಿ ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಜಯಪ್ರಕಾಶ್ ನಾರಾಯಣ್ ನೇತೃತ್ವದಲ್ಲಿ ಹೋರಾಟ ನಡೆಯುತ್ತಿದ್ದ ಕಾಲವದು. ಜನತಾ ಪಕ್ಷ ಉದಯವಾಗಿತ್ತು. ಪ್ರೊ. ನಂಜುಂಡಸ್ವಾಮಿ ಅವರ ಸ್ನೇಹ ಹೊಂದಿದ್ದ ಸಿದ್ದರಾಮಯ್ಯ, ರಾಮ ಮನೋಹರ್ ಲೋಹಿಯಾ, ಈ.ವೇ.ರಾಮಸ್ವಾಮಿ ಪೆರಿಯರ್, ಜಯಪ್ರಕಾಶ್ ನಾರಾಯಣ್, ಡಾ. ಬಿ.ಆರ್.ಅಂಬೇಡ್ಕರ್ ಅವರ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದರು. ಹಿರಿಯ ವಕೀಲರಾದ ಪಿ.ಎಂ.ಚಿಕ್ಕಬೋರಯ್ಯ ಅವರ ಬಳಿ ಜೂನಿಯರ್ ಆಗಿದ್ದ ಸಿದ್ದರಾಮಯ್ಯ ಬಡ–ಬಗ್ಗರಿಗೆ ಶುಲ್ಕವನ್ನೇ ಪಡೆಯದೇ ನ್ಯಾಯಾಲಯದಲ್ಲಿ ಸಮರ್ಥವಾಗಿ ವಾದ ಮಂಡಿಸುತ್ತಿದ್ದರು. ಒಮ್ಮೆ ವಕೀಲರ ಸಂಘದ ಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿದ್ದರು. 1978ರಲ್ಲಿ ತಾಲೂಕು ಬೋರ್ಡ್ ಚುನಾವಣೆಯಲ್ಲಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಸಿದ್ದರಾಮಯ್ಯ ಗೆಲುವು ಸಾಧಿಸಿದ್ದು, ಅವರ ರಾಜಕೀಯ ಕ್ಷೇತ್ರದ ಮೊದಲ ಮೆಟ್ಟಿಲು ಎನ್ನಬಹುದು. ಆ ಚುನಾವಣೆಯಲ್ಲಿ ಜನತಾ ಪಕ್ಷದ 8 ಮಂದಿ ಗೆಲುವು ಸಾಧಿಸಿದ್ದರೂ, 7 ಸದಸ್ಯರು ಕಾಂಗ್ರೆಸ್ ಸೇರ್ಪಡೆಗೊಂಡು ಸಿದ್ದರಾಮಯ್ಯ ಏಕಾಂಗಿಯಾಗಿ ವಿರೋಧ ಪಕ್ಷದಲ್ಲಿ ಕುಳಿತು ಹೋರಾಟ ನಡೆಸುತ್ತಿದ್ದರು. 1980ರ ವೇಳೆಗೆ ಜನತಾ ಪಕ್ಷ ಛಿದ್ರವಾಗಿತ್ತು. ಜಾರ್ಜ್ ಫರ್ನಾಂಡಿಸ್ ಅವರು ಜನತಾ ಪಕ್ಷದಿಂದ ಸಿಡಿದು ಬಂದು ಲೋಕದಳ ಪಕ್ಷವನ್ನು ಸ್ಥಾಪಿಸಿದ್ದರು. ಆ ಪಕ್ಷದ ಅಭ್ಯರ್ಥಿಯಾಗಿ 1980ರಲ್ಲಿ ನಡೆದ ಲೋಕಸಭಾ ಚುನಾವಣೆಯಲ್ಲಿ ಸಿದ್ದರಾಮಯ್ಯ ಸ್ಪರ್ಧಿಸಿದರಾದರೂ, ಜಯ ಗಳಿಸಲು ಸಾಧ್ಯವಾಗಿಲ್ಲ.

ಸಾಹಸದ ಸಾಧನೆಗಿಳಿದರು...: ಚುನಾವಣೆಯಲ್ಲಿ ಸೋತ ನಂತರ ಸಿದ್ದರಾಮಯ್ಯನವರು ವಿದ್ಯಾವರ್ಧಕ ಲಾ ಕಾಲೇಜಿನಲ್ಲಿ 3 ವರ್ಷ ಕಾಲ ಉಪನ್ಯಾಸಕರಾಗಿ ಕೆಲಸ ಮಾಡುತ್ತಿದ್ದರು. ಆದರೆ ರಾಜಕೀಯ ಆಸಕ್ತಿಯನ್ನಂತೂ ಬಿಟ್ಟಿರಲಿಲ್ಲ. 1983ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಲೋಕದಳ ಪಕ್ಷದಿಂದ ಸ್ಪರ್ಧಿಸಲು ಪ್ರಯತ್ನಿಸಿದರಾದರೂ, ಬಿ–ಫಾರಂ ದೊರೆಯದ ಕಾರಣ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ಜಯ ಗಳಿಸುವ ಮೂಲಕ ಮೊದಲ ಭಾರಿಗೆ ವಿಧಾನಸಭೆ ಪ್ರವೇಶಿಸಿದರು. ಅದು ರಾಜ್ಯದಲ್ಲಿ ಪ್ರಪ್ರಥಮವಾಗಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ಸೇತರ ಸರ್ಕಾರವಾಗಿತ್ತು. ರಾಮಕೃಷ್ಣ ಹೆಗ್ಗಡೆ ಮುಖ್ಯಮಂತ್ರಿಯಾದರು. ಸಿದ್ದರಾಮಯ್ಯ ಅವರು ರಾಮಕೃಷ್ಣ ಹೆಗ್ಗಡೆ ಸರ್ಕಾರಕ್ಕೆ ಬೆಂಬಲ ಸೂಚಿಸಿ ರಾಜ್ಯಪಾಲರಿಗೆ ಪತ್ರವನ್ನು ಕೊಟ್ಟು ಹೆಗ್ಗಡೆ ಬೆಂಬಲಕ್ಕೆ ನಿಂತರು. ಇದರ ಪರಿಣಾಮ ಹೆಗ್ಗಡೆಯವರು ಸಿದ್ದರಾಮಯ್ಯ ಅವರನ್ನು ಕನ್ನಡ ಕಾವಲು ಸಮಿತಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದರು. ಕನ್ನಡ ಅಭಿವೃದ್ಧಿಗಾಗಿ ರಾಜ್ಯಾದ್ಯಂತ ಪ್ರವಾಸ ಮಾಡುತ್ತಿದ್ದ ಸಿದ್ದರಾಮಯ್ಯ, 1984ರಲ್ಲಿ ಚಂದ್ರಪ್ರಭಾ ಅರಸು ಮತ್ತು ಅಜೀಜ್ ಸೇಠ್ ರಾಜೀನಾಮೆ ನೀಡಿದ್ದರಿಂದ ಮೈಸೂರು ಜಿಲ್ಲೆಗೆ ಸಂಪುಟದಲ್ಲಿ ಸ್ಥಾನ ನೀಡಬೇಕಾದ ಸಂದರ್ಭ ಒದಗಿದಾಗ ರಾಮಕೃಷ್ಣ ಹೆಗ್ಗಡೆ ಅವರು ಸಿದ್ದರಾಮಯ್ಯನವರಿಗೆ ಪಶು ಸಂಗೋಪನಾ ಸಚಿವ ಸ್ಥಾನವನ್ನು ನೀಡಿದರು. ಸಿದ್ದರಾಮಯ್ಯ ಮೊದಲ ಚುನಾವಣೆಯಲ್ಲಿ ಅದೂ ಪಕ್ಷೇತರ ಶಾಸಕರಾಗಿ ಆಯ್ಕೆಯಾದರೂ, ಸಚಿವರಾಗುವ ಮೂಲಕ ದಾಖಲೆ ನಿರ್ಮಿಸಿದ್ದರು.

1985ರಲ್ಲಿ ನಡೆದ ವಿಧಾನಸಭೆ ಮಧ್ಯಂತರ ಚುನಾವಣೆಯಲ್ಲಿ ಸಿದ್ದರಾಮಯ್ಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಚಾಮುಂಡೇಶ್ವರಿ ಕ್ಷೇತ್ರದಿಂದ ಪುನರಾಯ್ಕೆಯಾಗಿ ಎಸ್.ಆರ್.ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ಸಾರಿಗೆ ಸಚಿವರಾದರು. ನಂತರ ನಡೆದ 1989ರ ಚುನಾವಣೆಯಲ್ಲಿ ಸೋತರಾದರೂ, 1994ರ ಚುನಾವಣೆಯಲ್ಲಿ ಜನತಾ ದಳದ ಅಭ್ಯರ್ಥಿಯಾಗಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಗೆಲುವು ಸಾಧಿಸಿ, ಹೆಚ್.ಡಿ.ದೇವೇಗೌಡರ ಸಂಪುಟದಲ್ಲಿ ಹಣಕಾಸು ಸಚಿವರಾಗಿ ಅತ್ಯುತ್ತಮ ಬಜೆಟ್ ಮಂಡಿಸುವ ಮೂಲಕ ಗಮನ ಸೆಳೆದರು. ದೇವೇಗೌಡರು ಪ್ರಧಾನಮಂತ್ರಿಯಾಗಿ ದೆಹಲಿಗೆ ಹೋದಾಗ, ಜೆ.ಹೆಚ್.ಪಟೇಲ್ ಮುಖ್ಯಮಂತ್ರಿಯಾದಾಗ 1996ರ ಮೇ 16ರಂದು ಮೊದಲ ಬಾರಿಗೆ ಸಿದ್ದರಾಮಯ್ಯ ಉಪಮುಖ್ಯಮಂತ್ರಿ ಪಟ್ಟ ಅಲಂಕರಿಸಿದರು.

1999ರ ಚುನಾವಣೆಯಲ್ಲಿ ಸೋಲನನುಭವಿಸಿದರೂ, ನಂತರ ನಡೆದ 2004ರ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಜಯ ಗಳಿಸಿ, ರಾಜ್ಯದಲ್ಲಿ ಪ್ರಪ್ರಥಮ ಸಮ್ಮಿಶ್ರ ಸರ್ಕಾರದಲ್ಲಿ ಕಾಂಗ್ರೆಸ್‌ನ ಧರಂಸಿಂಗ್ ಸಂಪುಟದಲ್ಲಿ ಎರಡನೇ ಬಾರಿಗೆ ಉಪ ಮುಖ್ಯಮಂತ್ರಿಯಾದರು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಾರೆ ಎಂಬುದು ಅವರ ಬೆಂಬಲಿಗರ ನಿರೀಕ್ಷೆಯಾಗಿತ್ತು. ಸಿದ್ದರಾಮಯ್ಯ ಅವರ ಆಕಾಂಕ್ಷೆಯೂ ಅದೇ ಆಗಿತ್ತು. ಈ ಮಧ್ಯೆ ಹುಬ್ಬಳ್ಳಿಯಲ್ಲಿ ನಡೆದ ಅಹಿಂದಾ ಸಮಾವೇಶದಲ್ಲಿ ಭಾಗವಹಿಸಿದ ಸಿದ್ದರಾಮಯ್ಯ ಅವರನ್ನು ಜೆಡಿಎಸ್‌ನಿಂದ ಉಚ್ಚಾಟನೆ ಮಾಡಲಾಗಿ, ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಅವರು, ಮೊದಲಿಗೆ ಎಬಿಪಿಜೆಡಿ ಪಕ್ಷವನ್ನು ಕಟ್ಟಿದರಾದರೂ, ನಂತರ 2006ರ ಜುಲೈ 22ರಂದು ಸೋನಿಯಾ ಗಾಂಧಿ ನೇತೃತ್ವದಲ್ಲಿ ಬೆಂಗಳೂರು ಅರಮನೆ ಮೈದಾನದಲ್ಲಿ ನಡೆದ ಬೃಹತ್ ಸಮಾವೇಶದಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾದರು. ಅದೇ ವರ್ಷ ಚಾಮುಂಡೇಶ್ವರಿ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅವರು, ಕೇವಲ 257 ಮತಗಳ ಅಂತರದಲ್ಲಿ ಜೆಡಿಎಸ್‌ನ ಶಿವಬಸಪ್ಪ ವಿರುದ್ಧ ಗೆಲುವು ಸಾಧಿಸಿದ್ದರು.

2008ರ ವೇಳೆಗೆ ಕ್ಷೇತ್ರ ಪುನರ್ವಿಂಗಡಣೆಯಾಗಿ ಹೊಸದಾಗಿ ವರುಣಾ ಕ್ಷೇತ್ರ ಉದಯವಾಯಿತು. ಈ ವೇಳೆ ಸಿದ್ದರಾಮಯ್ಯ ತನ್ನ ಹುಟ್ಟೂರನ್ನೊಳಗೊಂಡಿರುವ ವರುಣಾ ಕ್ಷೇತ್ರದಿಂದ ಸ್ಪರ್ಧಿಸಿ ಗೆಲುವು ಸಾಧಿಸುವ ಮೂಲಕ ಮೊದಲ ಬಾರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾದರು. ಈ ವೇಳೆ ಸದನದಲ್ಲಿ ಸಚಿವ ಜನಾರ್ಧನ ರೆಡ್ಡಿ ಹಾಕಿದ ಸವಾಲಿಗೆ ಕೆರಳಿದ ಸಿದ್ದರಾಮಯ್ಯ, ಬೆಂಗಳೂರಿನಿಂದ ಬಳ್ಳಾರಿಯವರೆಗೆ ಪಾದಯಾತ್ರೆ ಮಾಡುವ ಮೂಲಕ ರಾಜ್ಯದಲ್ಲಿ ಸಂಚಲನವನ್ನುಂಟು ಮಾಡಿದರು. 2013ರಲ್ಲಿ ನಡೆದ ಚುನಾವಣೆಯಲ್ಲಿ ವರುಣಾ ಕ್ಷೇತ್ರದಿಂದ ಪುನರಾಯ್ಕೆಯಾದ ಸಿದ್ದರಾಮಯ್ಯನವರು, ದಿವಂಗತ ಡಿ.ದೇವರಾಜು ಅರಸು ನಂತರ ಮೈಸೂರು ಜಿಲ್ಲೆಯ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಯೊಂದಿಗೆ 2013ರ ಮೇ 3ರಂದು ರಾಜ್ಯದ ಮುಖ್ಯಮಂತ್ರಿಯಾದರು. ಅವರು ಮುಖ್ಯಮಂತ್ರಿಯಾಗಿ ನಡೆಸಿದ ಪ್ರಥಮ ಸಂಪುಟ ಸಭೆಯಲ್ಲೇ ಅನ್ನಭಾಗ್ಯ ಯೋಜನೆ ಜಾರಿ ಮಾಡುವ ಮೂಲಕ ಗಮನ ಸೆಳೆದರು. ಅನ್ನಭಾಗ್ಯ, ಕ್ಷೀರ ಭಾಗ್ಯ ಸೇರಿದಂತೆ ಹಲವಾರು ಭಾಗ್ಯಗಳನ್ನು ಜಾರಿಗೆ ತಂದು 'ಭಾಗ್ಯದ ರಾಮಯ್ಯ' ಎನಿಸಿಕೊಂಡ ಅವರು, ದೇವರಾಜ ಅರಸು ನಂತರ 5 ವರ್ಷ ಮುಖ್ಯಮಂತ್ರಿ ಅವಧಿ ಪೂರೈಸಿದ ಹೆಗ್ಗಳಿಕೆಯನ್ನೂ ಪಡೆದರು.

ಈ ಮಧ್ಯೆ ಅವರು ಮುಖ್ಯಮಂತ್ರಿಯಾಗಿದ್ದಾಗಲೇ ಪುತ್ರ ರಾಕೇಶ್ ಅಕಾಲಿಕ ಮರಣ ಹೊಂದಿದರು. ಈ ಸಂದರ್ಭದಲ್ಲಿ ಸಿದ್ದರಾಮಯ್ಯ ಬಹುತೇಕ ಕುಗ್ಗಿಯೇ ಹೋಗಿದ್ದರು. ಸಿದ್ದರಾಮಯ್ಯನವರು ಸಾರ್ವಜನಿಕವಾಗಿ ಕಣ್ಣೀರು ಸುರಿಸಿದವರೇ ಅಲ್ಲ. ಕ್ಷೇತ್ರ ಪುನರ್ವಿಂಗಡಣೆಯಾಗಿ ವರುಣಾ ಕ್ಷೇತ್ರ ಉದಯವಾದಾಗ ತಾವು ಚಾಮುಂಡೇಶ್ವರಿ ಕ್ಷೇತ್ರವನ್ನು ಬಿಟ್ಟು ವರುಣಾದಲ್ಲಿ ಸ್ಪರ್ಧಿಸುವ ಬಗ್ಗೆ ಘೋಷಣೆ ಮಾಡಿದ ಸಭೆಯಲ್ಲಿ ಭಾವುಕರಾಗಿ ಕಣ್ಣೀರು ಹಾಕಿದ್ದನ್ನು ಬಿಟ್ಟರೆ ನಂತರ ಅವರು ರಾಕೇಶ್ ನಿಧನದ ವೇಳೆ ಕಣ್ಣೀರು ಸುರಿಸಿದ್ದರು.


ಇಂತಹ ಸಂದರ್ಭದಲ್ಲಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿಯವರ ಸಲಹೆ ಮೇರೆಗೆ ಅವರ ಎರಡನೇ ಪುತ್ರ ಡಾ. ಯತೀಂದ್ರ ರಾಜಕೀಯ ಪ್ರವೇಶ ಮಾಡಿದರು. 2018ರ ಚುನಾವಣೆಯಲ್ಲಿ ತಮ್ಮ ವರುಣಾ ಕ್ಷೇತ್ರವನ್ನು ಪುತ್ರ ಯತೀಂದ್ರನಿಗೆ ಬಿಟ್ಟುಕೊಟ್ಟು, ಗೆಲುವು ಕಷ್ಟ ಎಂದು ಗೊತ್ತಿದ್ದರೂ ಕೂಡ ಸಿದ್ದರಾಮಯ್ಯ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸ್ಪರ್ಧಿಸಿದರು. ಜೊತೆಗೆ ಬಾದಾಮಿಯಲ್ಲೂ ಸ್ಪರ್ಧೆಗಿಳಿದರು. ಈ ಚುನಾವಣೆಯಲ್ಲಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಗೆಲುವು ಸಾಧಿಸಿ ವಿಧಾನಸಭೆ ಪ್ರವೇಶಿಸಿದರೆ, ಸಿದ್ದರಾಮಯ್ಯ ಚಾಮುಂಡೇಶ್ವರಿಯಲ್ಲಿ ಜಿ.ಟಿ.ದೇವೇಗೌಡರ ವಿರುದ್ಧ ಪರಾಭವಗೊಂಡು, ಬಾದಾಮಿಯಲ್ಲಿ ಶ್ರೀರಾಮುಲು ವಿರುದ್ಧ ಗೆಲುವು ಸಾಧಿಸಿ ವಿಧಾನಸಭೆ ಪ್ರವೇಶಿಸಿದರು. ಈ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದಲ್ಲಿ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯ, ಸಮ್ಮಿಶ್ರ ಸರ್ಕಾರ ಪತನಗೊಂಡು ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಎರಡನೇ ಬಾರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾದರು.

ಕಾಂಗ್ರೆಸ್ ಅನ್ನು ಮತ್ತೆ ಅಧಿಕಾರಕ್ಕೆ ತರಲೇಬೇಕು ಎಂದು ಪಣ ತೊಟ್ಟು, ರಾಜ್ಯಾದ್ಯಂತ ಸುತ್ತಾಡಿದ ಸಿದ್ದರಾಮಯ್ಯ, 2023ರ ಚುನಾವಣೆಯಲ್ಲಿ ಮತ್ತೆ ವರುಣಾ ಕ್ಷೇತ್ರದಿಂದ ಆಯ್ಕೆಯಾಗಿ ಎರಡನೇ ಬಾರಿಗೆ ಮುಖ್ಯಮಂತ್ರಿ ಪಟ್ಟ ಅಲಂಕರಿಸಿದರು. ಇವರು ಮೊದಲ ಬಾರಿ ಮುಖ್ಯಮಂತ್ರಿಯಾಗಿದ್ದಾಗ ಕರ್ನಾಟಕದ ಜನತೆಗೆ ಭಾಗ್ಯಗಳನ್ನು ಕರುಣಿಸಿದರೆ, ಈ ಬಾರಿ ಮುಖ್ಯಮಂತ್ರಿಯಾಗಿ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ದೇಶದ ಗಮನ ಸೆಳೆದಿದ್ದಾರೆ.









“ ಮೈಸೂರು ಜಿಲ್ಲೆ ಹಾಗೂ ತಾಲೂಕಿನ ಕುಗ್ರಾಮ ಸಿದ್ದರಾಮನಹುಂಡಿಯ ಕೃಷಿಕ ಕುಟುಂಬದಲ್ಲಿ ಜನಿಸಿ, ರಾಜ್ಯ ರಾಜಕೀಯ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದಲ್ಲದೇ, ಎರಡನೇ ಬಾರಿಗೆ ರಾಜ್ಯದ ಮುಖ್ಯಮಂತ್ರಿ ಸ್ಥಾನ ಅಲಂಕರಿಸಿದವರು ಸಿದ್ದರಾಮಯ್ಯ. ಕಾನೂನು ಪದವಿ ಪಡೆದು ವಕೀಲರಾಗಿ, ಕಾನೂನು ಕಾಲೇಜಿನ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದರೂ, ರಾಜಕೀಯ ಕ್ಷೇತ್ರದಲ್ಲಿ ಉತ್ತುಂಗ ಸ್ಥಾನವನ್ನು ಏರಿದ ಸಿದ್ದರಾಮಯ್ಯ, ಮಾತಿನಲ್ಲಿ ಎಲ್ಲಿಯೂ ಇಂಗ್ಲೀಷ್ ವ್ಯಾಮೋಹ ಕಂಡುಬರುವುದಿಲ್ಲ. ಮೈಸೂರಿನ ಹಳ್ಳಿ ಸೊಗಡಿನ ಭಾಷೆಯಿಂದಲೇ ಎಲ್ಲರ ಮನ ಗೆದ್ದವರು. ಸಾರ್ವಜನಿಕ ಭಾಷಣಗಳಲ್ಲಾಗಲೀ, ವಿಧಾನಸಭೆಯಲ್ಲಿ ಚರ್ಚೆ ವೇಳೆಯಲ್ಲಾಗಲೀ ಸಿದ್ದರಾಮಯ್ಯನವರದು ಹಚ್ಚ ಹಳ್ಳಿ ಸೊಗಡಿನ ಭಾಷೆಯೇ ಆಗಿರುತ್ತದೆ. ಮಾತಿನಲ್ಲಿ ಒರಟಾಗಿದ್ದರೂ, ಬಡವರು, ದೀನ–ದಲಿತರ ಬಗ್ಗೆ ಅಭಿಮಾನ ಹೊಂದಿರುವವರು. ತುಳಿತಕ್ಕೊಳಗಾದ ವರ್ಗದ ಅಭಿವೃದ್ಧಿಗಾಗಿಯೇ ತಾವು ಅಧಿಕಾರದಲ್ಲಿದ್ದಾಗ ತಾಯಿ ಹೃದಯದಿಂದ ಅನೇಕ ಯೋಜನೆಗಳನ್ನು ಜಾರಿಗೆ ತಂದು 'ಭಾಗ್ಯದ ರಾಮಯ್ಯ' ಎಂದೂ ಅಕ್ಕರೆಯಿಂದ ಕರೆಸಿಕೊಂಡವರು.













ನಾನು ಕಾಲೇಜು ದಿನಗಳಿಂದಲೂ ಸಿದ್ದರಾಮಯ್ಯನವರ ಸ್ನೇಹಿತನಾಗಿದ್ದೇನೆ. ಅವರು ಸ್ನೇಹ ಜೀವಿಗಳಾಗಿದ್ದು, ಎಂದೂ ಸ್ನೇಹಿತರನ್ನು ಕೈಬಿಟ್ಟವರಲ್ಲ. ದೀನ–ದಲಿತರು ಹಾಗೂ ಬಡವರ ಪರ ಸದಾ ಮಿಡಿಯುತ್ತಿದ್ದ ಸಿದ್ದರಾಮಯ್ಯ ತಮ್ಮ ಸ್ನೇಹಿತರನ್ನೂ ಕೂಡ ಅದೇ ಹಾದಿಯಲ್ಲಿ ಕರೆದೊಯ್ದಿದ್ದು ವಿಶೇಷ. ನನ್ನನ್ನು ಕೊಳ್ಳೇಗಾಲ ಕ್ಷೇತ್ರದಿಂದ ಸ್ಪರ್ಧಿಸುವಂತೆ ಮಾಡಿ ವಿಧಾನಸಭೆಗೆ ಕರೆದೊಯ್ದವರೂ ಅವರೇ. ಮಾತು ಕೊಟ್ಟರೆ ಯಾವುದೇ ಸನ್ನಿವೇಶದಲ್ಲೂ ತಪ್ಪದೇ ತನ್ನ ಮಾತನ್ನು ಉಳಿಸಿಕೊಳ್ಳುತ್ತಾರೆ. ಎಂತಹ ಕಷ್ಟಕರ ಸನ್ನಿವೇಶ ಎದುರಾದರೂ ನುಡಿದಂತೆ ನಡೆಯುತ್ತಾರೆ. ಎಷ್ಟೇ ವಿರೋಧ ಬಂದರೂ ಅಶಕ್ತರ ಪರವಾಗಿಯೇ ನಿಂತು ಹೋರಾಟ ನಡೆಸುತ್ತಾರೆ. ಮಾನವೀಯ ಮೌಲ್ಯಗಳನ್ನು ಹೊಂದಿರುವ ಧೀಮಂತ ನಾಯಕ ಸಿದ್ದರಾಮಯ್ಯ. ಅವರೊಟ್ಟಿಗೆ ರಾಜಕಾರಣಕ್ಕೂ ಮುನ್ನ ಹಾಗೂ ರಾಜಕಾರಣದಲ್ಲಿ ಮುಂದುವರೆಯುತ್ತಿರುವುದು ನನಗೆ ಹೆಮ್ಮೆ ಎನಿಸಿದೆ.



– ಎಸ್.ಜಯಣ್ಣ, ಕೊಳ್ಳೇಗಾಲ ಮಾಜಿ ಶಾಸಕ

ಸಿದ್ದರಾಮಯ್ಯ ಅವರ ಮಾತು ಒರಟು. ಆದರೆ ಮನಸು ಮೃದು. ಅವರದು ಗಟ್ಟಿ ಧ್ವನಿಯಾಗಿದ್ದರೂ ಮನಸ್ಸಂತೂ ಮಗುವಿನಂತೆ. ಯಾವಾಗಲೂ ನೇರ ನಡೆ–ನುಡಿ. ಸದಾ ಬಡವರ ಅಭಿವೃದ್ಧಿ ಬಗ್ಗೆ ಚಿಂತನೆ ಮಾಡುತ್ತಾರೆ. ಬಡವರು, ದೀನ–ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರ ಅಭಿವೃದ್ಧಿಯೇ ಅವರ ಮೂಲಮಂತ್ರ. ಅವರು ಹೇಳಿದ ಕೆಲಸ ಆಗಲೇ ಬೇಕು. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿ ಮೇಲೆ ಕೋಪಗೊಳ್ಳುತ್ತಿದ್ದರು. ತುರ್ತಾಗಿ ಕೆಲಸ ಮಾಡುವಂತೆ ಸೂಚಿಸುತ್ತಿದ್ದರು. ಅವರು ತಮ್ಮನ್ನು ನಂಬಿದವರನ್ನು ಎಂದೂ ಕೈಬಿಡುವುದಿಲ್ಲ. ಪಕ್ಷಕ್ಕೆ ನಿಷ್ಠೆಯಿಂದ ಇರುವವರಿಗೆ ಸ್ಥಾನ–ಮಾನ ಕಲ್ಪಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಅವರ ಪುತ್ರ ರಾಕೇಶ್ ನಿಧನರಾದ ಮರು ದಿನವೇ ಅಧಿಕಾರಿ ಗಳ ಸಭೆ ನಡೆಸುವ ಮೂಲಕ ರಾಜ್ಯದ ಅಭಿವೃದ್ಧಿಗೆ ಆದ್ಯತೆ ನೀಡಿದವರು. ಅವ ರೊಬ್ಬ ಮೃದು ಮನಸ್ಸಿನ ಅಪರೂಪದ ರಾಜಕಾರಣಿ. ಅವರು ಮುಖ್ಯಮಂತ್ರಿ ಯಾಗಿದ್ದಾಗ ಮುಖ್ಯಮಂತ್ರಿ ಸಚಿವಾಲಯದ ಸಿಬ್ಬಂದಿಯಾಗಿ ಕೆಲಸ ಮಾಡಿದ್ದು, ಸಾರ್ಥಕವೆನಿಸಿದೆ. ಅವರ ಮುಂದೆ ಅಧಿಕಾರಿಗಳೇ ಆಗಲೀ, ಯಾರೇ ಆಗಲೀ ಸತ್ಯಾಂಶ ಮರೆಮಾಚಲು ಸಾಧ್ಯವೇ ಇಲ್ಲ. ನಾನು ಈ ಹಿಂದೆ ಏರ್‌ಪೋರ್ಟ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ಅಲ್ಲಿಗೆ ಬರುತ್ತಿದ್ದ ಸಿದ್ದರಾಮಯ್ಯನವರು ವಿಐಪಿ, ವಿವಿಐಪಿ ನಿಯಮಗಳನ್ನು ಪಾಲಿಸದೇ ಸಾಮಾನ್ಯ ಪ್ರಯಾಣಿಕರಂತೆ ಪ್ರಯಾಣ ಮಾಡುತ್ತಿದ್ದರು. ಹಳ್ಳಿ ಸೊಗಡಿನ ಊಟೋಪ ಚಾರವನ್ನು ಇಷ್ಟಪಡುತ್ತಾರೆ. ರಾಗಿ ಮುದ್ದೆ, ಉಪ್ಸಾರು, ಬಸ್ಸಾರು, ಸೊಪ್ಪಿನಸಾರು, ಮೊಳಕೆಹುಳ್ಳಿ ಸಾರು, ಹಲಸಂದೆ ವಡೆ, ಮಜ್ಜಿಗೆ ಸಿದ್ದರಾಮಯ್ಯನವರ ಇಷ್ಟವಾದ ತಿನಿಸುಗಳು.

–ಆರ್.ರಾಜು, ಮುಖ್ಯಮಂತ್ರಿ ಕಚೇರಿಯ ಹಿಂದಿನ ಸಿಬ್ಬಂದಿ.

ಸಿದ್ದರಾಮಯ್ಯ ನಾಡು ಕಂಡ ಅಪರೂಪದ ರಾಜಕಾರಣಿ. ಹಣಕಾಸು ಸಚಿವರಾಗಿದ್ದಾಗ ಅದನ್ನು ಸಮರ್ಥವಾಗಿ ನಿರ್ವಹಿಸಿದ ಕೀರ್ತಿ ಅವರದು. ರಾಜ್ಯದ ಅಭಿವೃದ್ಧಿಯಲ್ಲಿ ಸಿದ್ದರಾಮಯ್ಯ ಅವರ ಪಾತ್ರ ಅಗಾಧವಾದದ್ದು. ನುಡಿದಂತೆ ನಡೆಯುವ ರಾಜಕಾರಣಿ ಎಂದರೆ ತಪ್ಪಾಗಲಾರದು. ಜನರ ಕಲ್ಯಾಣಕ್ಕಾಗಿ ಸದಾ ಕಾಲ ದುಡಿಯುವವರು. ನೇರ ನುಡಿಯ ವ್ಯಕ್ತಿಯಾಗಿರುವ ಅವರು ನಂಬಿದವರನ್ನು ಎಂದೂ ಕೈಬಿಡುವುದಿಲ್ಲ.




–ಎ.ಆರ್.ಕೃಷ್ಣಮೂರ್ತಿ, ಕೊಳ್ಳೇಗಾಲ ಶಾಸಕ.

ಸಿದ್ದರಾಮಯ್ಯ ಓರ್ವ ದಕ್ಷ ಹಾಗೂ ಪ್ರಾಮಾಣಿಕ ಆಡಳಿತಗಾರ. 14 ಬಜೆಟ್ ಮಂಡಿಸಿರುವುದೇ ಇದಕ್ಕೆ ಸಾಕ್ಷಿ. ಅವರ ಆಡಳಿತದಲ್ಲಿ ಜನರಿಗೆ ಅನೇಕ ಅನುಕೂಲಗಳಾಗಿವೆ. ಮುಂದಿನ ದಿನಗಳಲ್ಲೂ ಅನುಕೂಲಗಳಾಗುತ್ತವೆ. ಸಿದ್ದರಾಮಯ್ಯ ಅವರು ಸಾಮಾನ್ಯ ವ್ಯಕ್ತಿಯನ್ನೂ ಕೂಡ ಗಣ್ಯ ವ್ಯಕ್ತಿಯಂತೆ ಕಾಣುವ ವ್ಯಕ್ತಿತ್ವ ಇರುವವರು. ಪಕ್ಷಾತೀತವಾಗಿ ಎಲ್ಲರೂ ಅವರನ್ನು ಒಪ್ಪುತ್ತಾರೆ.




– ಸುರೇಶ್, ಮಂಡ್ಯ ಜಿಲ್ಲೆ ಕುರುಬರ ಸಂಘದ ಅಧ್ಯಕ್ಷ.

ಜನಪರ ಆಡಳಿತಕ್ಕೆ ಮತ್ತೊಂದು ಹೆಸರೇ ಸಿದ್ದರಾಮಯ್ಯ. ಆಡಳಿತಾತ್ಮಕವಾಗಿ ಹಾಗೂ ವೈಯಕ್ತಿಕವಾಗಿ ಪ್ರತಿಯೊಬ್ಬ ವ್ಯಕ್ತಿಯೂ ಅವರನ್ನು ಒಪ್ಪಿಕೊಳ್ಳುತ್ತಾರೆ. ಅವರ ಸೇವೆ ರಾಜ್ಯದ ಜನತೆಗೆ ಅತ್ಯಾವಶ್ಯಕ. ಯುವ ರಾಜಕಾರಣಿಗಳು ಎತ್ತರಕ್ಕೆ ಬೆಳೆಯಲು ಸಿದ್ದರಾಮಯ್ಯನವರ ಮಾರ್ಗದರ್ಶನ ಸಹಕಾರಿಯಾಗುತ್ತದೆ. – ಎನ್.ಚಲುವರಾಯಸ್ವಾಮಿ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ



ಸಮಾಜವಾದಿ ಸಿದ್ಧಾಂತದ ಅಪರೂಪದ ನಾಯಕ ಸಿದ್ದರಾಮಯ್ಯ. ಪ್ರಸ್ತುತ ರಾಜಕಾರಣದಲ್ಲಿ ಹೇಳುವುದೊಂದು, ಮಾಡುವುದೊಂದು ಆಗಿದೆ ಆದರೆ ಸಿದ್ದರಾಮಯ್ಯನವರು ನುಡಿದಂತೆ ನಡೆದ ವ್ಯಕ್ತಿ. ಪ್ರತಿಪಕ್ಷ ನಾಯಕನಾಗಿದ್ದಾಗ ಸಿದ್ದರಾಮಯ್ಯ ಅವರ ವ್ಯಕ್ತಿತ್ವ ಮುಖ್ಯಮಂತ್ರಿಯಾಗಿದ್ದಾಗಲೂ ಬದಲಾಗಲಿಲ್ಲ. ಕಳೆದ 35 ವರ್ಷಗಳಿಂದ ಸಿದ್ದರಾಮಯ್ಯ ಅವರ ಜೊತೆ ಒಡನಾಟ ಹೊಂದಿದ್ದೇನೆ. ನಾನು ಅವರನ್ನು ಕಂಡದ್ದು ಗುಣಾತ್ಮಕ ವ್ಯಕ್ತಿತ್ವದ ಮೌಲ್ಯಾಧಾರಿತ ರಾಜಕಾರಣಿಯಾಗಿ.–ದಡದಪುರ ಶಿವಣ್ಣ ಸಿದ್ದರಾಮಯ್ಯರ ಆಪ್ತ



ಸಿದ್ದರಾಮಯ್ಯ ದೂರದೃಷ್ಟಿಯುಳ್ಳ ಸಮಾಜವಾದಿ ನಾಯಕ. ಸಂವಿಧಾನದ ಆಶೋತ್ತರಗಳಿಗೆ ಅನುಗುಣವಾಗಿ ರಾಜ್ಯವನ್ನು ಮುನ್ನಡೆಸುತ್ತಿರುವ ಧೀಮಂತ ರಾಜಕಾರಣಿ. 14 ಬಜೆಟ್ ಮಂಡಿಸಿರುವ ಅವರು, ರಾಜ್ಯದ ಜನತೆಗಾಗಿ ಅನ್ನಭಾಗ್ಯ ಸೇರಿದಂತೆ ಹಲವು ಭಾಗ್ಯಗಳನ್ನು ಕೊಟ್ಟಿದ್ದರು. ಈಗ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ನುಡಿದಂತೆ ನಡೆಯುತ್ತಿರುವ ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯ.



–ಪಿ.ಎಂ.ನರೇಂದ್ರಸ್ವಾಮಿ, ಮಳವಳ್ಳಿ ಶಾಸಕ



ಸದಾಶಿವ ಆಯೋಗದ ವರದಿ ಜಾರಿಗೊಳಿಸಲು ಆಗ್ರಹ



ಮೈಸೂರು, ಆ.11(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಿವೃತ್ತ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ಕೂಡಲೇ ಜಾರಿಗೊಳಿಸಿ ಪರಿಶಿಷ್ಟ ಸಮುದಾಯಕ್ಕೆ ಒಳ ಮೀಸಲಾತಿ ಕಲ್ಪಿಸಬೇಕೆಂದು ಕರ್ನಾಟಕ ದಲಿತ ಚಳವಳಿ ನವ ನಿರ್ಮಾಣ ವೇದಿಕೆಯು ಹರಿಹರ ಆನಂದಸ್ವಾಮಿ ಮನವಿ ಮಾಡಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬ್ರಿಟಿಷ್ ಸರ್ಕಾರ ಜಾರಿಗೆ ತಂದಿದ್ದ ಕಾಯ್ದೆ ಹಾಗೂ ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ ಅಸ್ಪೃಶ್ಯ ದಲಿತರನ್ನು ಮಾತ್ರ ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿ ಮೀಸಲಾತಿ ನೀಡಲಾಗಿತ್ತು ನಂತರ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳು ರಾಜಕೀಯ ಕಾರಣದಿಂದಾಗಿ ಸ್ಪೃಶ್ಯ ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿ ಅಸ್ಪೃಶ್ಯ ದಲಿತರನ್ನು ವಂಚಿಸುತ್ತಿವೆ. ರಾಜ್ಯದಲ್ಲಿಯೂ ಸ್ಪೃಶ್ಯ ಜಾತಿಗಳಾದ ಭೋವಿ, ಲಂಬಾಣಿ, ಕೊರಮ ಮತ್ತು ಕೊರಚರನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲಾಗಿದೆ. ಇದರಿಂದಾಗಿ ಊರಿಂದಾಚೆ ಎಸೆಯಲ್ಪಟ್ಟ ಅಸ್ಪೃಶ್ಯ ದಲಿತರಿಗೆ ಅನ್ಯಾಯ ಮಾಡಲಾಗಿದೆ. ಈ ಅನ್ಯಾಯದ ವಿರುದ್ಧ ಹೋರಾಟ ಮಾಡಿದ ಫಲವಾಗಿ ಆಯೋಗವೊಂದನ್ನು ರಚಿಸಲಾಗಿತ್ತು. ಆದರೆ ಸ್ಪೃಶ್ಯರಾದ ಭೋವಿ, ಲಂಬಾಣಿ, ಕೊರಮ ಮತ್ತು ಕೊರಚ ಸಮುದಾಯಗಳು ಇದನ್ನು ವಿರೋಧಿಸಿ, ಶಿಫಾರಸನ್ನು ವಾಪಸ್ಸು ಪಡೆಯಲು ಒತ್ತಾಯಿಸಿರುವುದು ಬೇಸರದ ಸಂಗತಿಯಾಗಿದೆ ಎಂದರು.

ಸರ್ಕಾರ ಕೂಡಲೇ ಸದಾಶಿವ ಆಯೋಗದ ವರದಿ ಜಾರಿಗೆ ತರಬೇಕು, ಪರಿಶಿಷ್ಟರೊಳಗೆ ಅಂತರ್ಜಾತಿ ವಿವಾಹ ಕಡ್ಡಾಯಗೊಳಿಸಬೇಕು, ಸ್ಪೃಶ್ಯ ಸಮುದಾಯ ಮತ್ತು ಅಸ್ಪೃಶ್ಯ ಸಮುದಾಯಗಳ ನಡುವೆ ಸ್ಪಷ್ಟ ಗೆರೆ ಹಾಕಬೇಕು. ಅಸ್ಪೃಶ್ಯ ದಲಿತರಿಗಾಗಿ ಪ್ರತ್ಯೇಕ ಸಚಿವಾಲಯ ಸ್ಥಾಪಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ದಲಿತ ಚಳವಳಿ ನವನಿರ್ಮಾಣ ವೇದಿಕೆಯ ಬಂಗವಾದಿ ನಾರಾಯಣಪ್ಪ, ಹೊರಳವಾಡಿ ನಂಜುಂಡ ಸ್ವಾಮಿ, ದರ್ಶನ್ ಹಾಗೂ ಸತೀಶ್ ಇದ್ದರು.

ನಾಳೆ ಅರ್ಚಕರ ಸಮಾವೇಶ



ಮೈಸೂರು,ಆ.11(ಎಂಟಿವೈ)– ಮೈಸೂರು ತಾಲೂಕಿನ ಕಡಕೊಳದ ಶ್ರೀ ಕಾಳಿಬೀರೇಶ್ವರ ಕಲ್ಯಾಣ ಮಂಟಪದಲ್ಲಿ ಆ.13ರಂದು ಮಧ್ಯಾಹ್ನ 12.30ಕ್ಕೆ ಮೈಸೂರು ಜಿಲ್ಲಾ ಮತ್ತು ತಾಲೂಕು ಮುಜರಾಯಿ ದೇವಾಲಯಗಳ ಅರ್ಚಕರು, ಆಗಮಿಕರು ಮತ್ತು ನೌಕರರ ಸಂಘದ ವತಿಯಿಂದ ಬಸವ, ಶಿವಕುಮಾರ ಜಯಂತಿ ಮತ್ತು ಜಿಲ್ಲಾ, ತಾಲೂಕು ಅರ್ಚಕರ ಸಮಾವೇಶ ಆಯೋಜಿಸಲಾಗಿದೆ ಎಂದು ಸಂಘದ ಕಾರ್ಯದರ್ಶಿ ಸುರೇಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ತಾಲೂಕು ಅರ್ಚಕರ ಸಮಾವೇಶದ ಸಾನ್ನಿಧ್ಯವನ್ನು ಮದ್ದೂರಿನ ಕದಂಬ ಜಂಗಮ ಮಠದ ಶ್ರೀ ಷಡಕ್ಷರಬ್ರಹ್ಮ ರೇಣುಕಾ ಶಿವಾಚಾರ್ಯ ಸ್ವಾಮೀಜಿ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಶಾಸಕ ಜಿ.ಟಿ. ದೇವೇಗೌಡ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು. ಜಿಲ್ಲೆಯಲ್ಲಿ ಸುಮಾರು 1300 ಸಿ ಶ್ರೇಣಿಯ ದೇವಾಲಯಗಳಿದ್ದು, ಈ ದೇವಾಲಯಗಳಿಗೆ ಹಿಂದೆ ಇದ್ದ ಜಮೀನನ್ನು ಕಾನೂನು ಮೂಲಕ ಈ ಹಿಂದೆ ಕೈತಪ್ಪುವಂತೆ ಮಾಡಲಾಗಿದೆ. ಈಗ ಈ ದೇವಾಲಯಗಳ ಅರ್ಚಕರು ಶೋಚನೀಯ ಪರಿಸ್ಥಿತಿಯಲ್ಲಿರುವ ಕಾರಣ ಇವರಿಗೆ ವೇತನ ನಿಗದಿ ಮಾಡಬೇಕು. ತಸ್ತೀಕ್ ಹೆಚ್ಚಳ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಿಎಂ ಸಿದ್ದರಾಮಯ್ಯ ಅವರಿಗೆ ಸಲ್ಲಿಸುವುದಾಗಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಮತ್ತು ತಾಲೂಕು ಮುಜರಾಯಿ ದೇವಾಲಯಗಳ ಅರ್ಚಕರು, ಆಗಮಿಕರು ಮತ್ತು ನೌಕರರ ಸಂಘದ ಅಧ್ಯಕ್ಷ ಎಂ. ಮಹದೇವಪ್ಪ ಹರೀಶ್ ಹಾಗೂ ಕುಮಾರ್ ಇದ್ದರು.

ನಾಳೆ ಗುತ್ತಿಗೆದಾರರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಚುನಾವಣೆ



ಮೈಸೂರು,ಆ.11(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಗುತ್ತಿಗೆದಾರರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಗೆ ಆ. 13 ರಂದು ನಡೆಯಲಿರುವ ಚುನಾವಣೆಯಲ್ಲಿ ನಮ್ಮ ಬಣದ 14 ಸದಸ್ಯರನ್ನು ಆಯ್ಕೆ ಮಾಡಬೇಕೆಂದು ಪಾಲಿಕೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಉದಯ್ ಕುಮಾರ್ ಮನವಿ ಮಾಡಿದ್ದಾರೆ.


ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೊಸೈಟಿಯ ಹಾಲಿ ಆಡಳಿತ ಮಂಡಳಿ ಅ ಸದಸ್ಯರ ಹಿತ ಕಾಯಲು ವಿಫಲವಾಗಿದೆ. ನೋಂದಾಯಿತ ಗುತ್ತಿಗೆದಾರರಲ್ಲದವರಿಗೂ ಅಕ್ರಮವಾಗಿ ಸದಸ್ಯತ್ವ ನೀಡಿ ಮತ ಪಡೆಯಲಾಗುತ್ತಿದೆ. ಅರ್ಹ ಗುತ್ತಿಗೆದಾರರಿಗೆ ಮತದಾನದ ಸೌಲಭ್ಯ ನೀಡಿಲ್ಲ. ಹೀಗಾಗಿ ಅಕ್ರಮ ಸರಿಪಡಿಸಲು ತಮ್ಮ ನೇತೃತ್ವದಲ್ಲಿ ಸ್ಪರ್ಧಿಸಿರುವವರಿಗೆ ಮತ ನೀಡಬೇಕು. ಅಲ್ಲದೆ, ಒಂದು ವೇಳೆ ತಮ್ಮ ಗುಂಪು ಜಯ ಗಳಿಸಿದಲ್ಲಿ ಗುತ್ತಿಗೆದಾರರಿಗೆ ಬ್ಯಾಂಕ್ ಗ್ಯಾರಂಟಿ ನೀಡಲು, ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು, ಸಣ್ಣ ಗುತ್ತಿಗೆದಾರರಿಗೆ ಲಕ್ಷ ರೂ.ವರೆಗೆ ಸಾಲ, ಗುತ್ತಿಗೆದಾರರಿಗೆ ಗುಂಪು ವಿಮೆ ಮೊದಲಾದ ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಅಭ್ಯರ್ಥಿಗಳಾದ ಚಂದ್ರಶೇಖರಯ್ಯ, ಕೋಮಲೇಗೌಡ, ದೊಳ್ಳೇಗೌಡ, ಶಿವಣ್ಣೇಗೌಡ, ಶ್ರೀನಿವಾಸ್ ಇದ್ದರು.

ಅಂತಾರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆ

ಎರಡು ಚಿನ್ನದ ಪದಕ ಪಡೆದ ಛಾಯಾಗ್ರಾಹಕ ಎನ್.ಜಿ.ಸುಧೀರ್

ಮೈಸೂರು,ಆ.11 (ಎಂಟಿವೈ)– ಮೈಸೂರಿನ ಛಾಯಾಗ್ರಾಹಕ ಎನ್.ಜಿ.ಸುಧೀರ್ ಅವರು ತೆಗೆದಿರುವ ಶ್ರವಣಬೆಳ ಗೊಳದ ಗೊಮ್ಮಟೇಶ್ವರ ಚಿತ್ರಕ್ಕೆ ಅಂತಾರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಯಲ್ಲಿ ಎರಡು ಚಿನ್ನದ ಪದಕ ಲಭಿಸಿದೆ. ಫೋಟೋಗ್ರಫಿ ಸೊಸೈಟಿ ಆಫ್ ಅಮೆರಿಕ ಸಂಸ್ಥೆಯ ಜೆಎಸ್‌ಪಿ ಅಂಡ್ ಫೋಟೊ ಸೋಲ್ ಹಾಗೂ ಭಾರತದ ವೈಬ್ರೆಂಟ್ ಶೇಡ್ ಸಂಸ್ಥೆ ಆಯೋಜಿಸಿದ್ದ ಸ್ಪರ್ಧೆ ನಾಲ್ಕು ಹಂತಗಳಲ್ಲಿ ಸ್ಪರ್ಧೆ ನಡೆದಿತ್ತು. ಸುಧೀರ್ ಅವರ ಮಹಾಮಸ್ತಕಾಭಿಷೇಕದ ಬಾಹುಬಲಿ ಚಿತ್ರಕ್ಕೆ ಎರಡು ವಿಭಾಗದಲ್ಲಿ ಚಿನ್ನದ ಪದಕ ದೊರೆತಿದೆ.





ಕುಂಚದಲ್ಲಿ ಮೂಡಿದ ಕಾಂಗ್ರೆಸ್ ಸರ್ಕಾರದ ಐದು ಗ್ಯಾರಂಟಿ

ಸಿದ್ದರಾಮಯ್ಯರ ಜನ್ಮದಿನದ ಹಿನ್ನೆಲೆಯಲ್ಲಿ ಚಿತ್ರಕಲಾ ಸ್ಪರ್ಧೆ, ಪ್ರದರ್ಶನ





ಮೈಸೂರು, ಆ.11(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳನ್ನು ವಿದ್ಯಾರ್ಥಿಗಳು ತಮ್ಮ ಕುಂಚದ ಮೂಲಕ ಪ್ರದರ್ಶಿಸಿದರು.

ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ, ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ ಮತ್ತು ಕನ್ನಡ ಸಾಹಿತ್ಯ ಕಲಾಕೂಟದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹುಟ್ಟುಹಬ್ಬದ ಅಂಗವಾಗಿ ನಗರದ ಕಲಾಮಂದಿರದ ಆವರಣದಲ್ಲಿರುವ ಸುಚಿತ್ರ ಕಲಾ ಗ್ಯಾಲರಿಯಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ ಹಾಗೂ ಪ್ರದರ್ಶನದಲ್ಲಿ ಮೈಸೂರಿನ ವಿವಿಧ ಶಾಲೆ ವಿದ್ಯಾರ್ಥಿಗಳು ಭಾಗವಹಿಸಿ, ಐದು ಗ್ಯಾರಂಟಿ ಯೋಜನೆಗಳನ್ನು ಚಿತ್ರ ಕಲೆ ಬಿಡಿಸುವ ಮೂಲಕ ಎಲ್ಲರ ಗಮನ ಸೆಳೆದರು.

ಈ ವೇಳೆ ಕಾರ್ಯಕ್ರಮವನ್ನು ಸಿದ್ದರಾಮಯ್ಯ ಅವರ ಚಿತ್ರ ಬಿಡಿಸುವ ಮೂಲಕ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಶಾಸಕ ಕೆ.ಹರೀಶ್‌ಗೌಡ ಮತ್ತು ಕಾಂಗ್ರೆಸ್ ಮುಖಂಡರು ಚಾಲನೆ ನೀಡಿದರು.

ನಂತರ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಜನರಿಗೆ ಸಂದೇಶ ಸಾರುವ ಚಿತ್ರಗಳನ್ನು ವಿದ್ಯಾರ್ಥಿಗಳು ಬಿಡಿಸಿದ್ದಾರೆ. ಈ ಹಿಂದಿನ ದಿನಗಳಲ್ಲಿ ಕೈಗಾರಿಕೆ, ಕುಡಿಯುವ ನೀರಿನ ಯೋಜನೆ ಮತ್ತು ಜನಪರ ನಾಯಕನ ಬಗ್ಗೆ ಚಿತ್ರ ಬಿಡಿಸುವುದು ವಾಡಿಕೆಯಾಗಿತ್ತು. ಅದರಂತೆ ಇಂದು ಸಿದ್ದರಾಮಯ್ಯ ಅವರ ಚಿತ್ರಗಳನ್ನು ಬಿಡಿಸುತ್ತಿದ್ದಾರೆ. ಅವರಿಗೆ ದೇವರು ಆರೋಗ್ಯ ಕೊಡಲಿ ಎಂದು ಹಾರೈಸಿದರು.

ಪ್ರಗತಿಪರ, ಬಡಪರ ಆಡಳಿತ ನೀಡಿದ ಮತ್ತೊಬ್ಬ ನಾಯಕರಿಲ್ಲ. ಈ ರೀತಿ ಇಡೀ ರಾಷ್ಟ್ರದಲ್ಲೇ ಪ್ರಸಿದ್ಧಿ ಪಡೆದಿರುವ ವ್ಯಕ್ತಿ ಸಿದ್ದರಾಮಯ್ಯ ಅವರು ಮಾತ್ರ ಎಂದರು.

ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಮರಿಗೌಡ ಮಾತನಾಡಿ, ಸಿದ್ದರಾಮಯ್ಯ ಅವರ ಸಾಮಾಜಿಕ ಕಳಕಳಿಯಿಂದ ಮಕ್ಕಳು ದೇಶದ ಸಂಪತ್ತು ಎಂದು ತಿಳಿದ ಅವರು ಮಕ್ಕಳಿಗೆ ಕೌಶಲ್ಯ ಅಭಿವೃದ್ಧಿ ಯೋಜನೆ ನೀಡಿದರು. ಸರ್ಕಾರ ಐದು ಗ್ಯಾರಂಟಿ ಯೋಜನೆಯಿಂದ ಜನರು ಸಮೃದ್ಧಿಯಿಂದ ಬದುಕು ನಡೆಸಬಹುದು. ಅದನ್ನು ಕೆಲವರು ರಾಜ್ಯ ದಿವಾಳಿಯಾಗುತ್ತದೆ ಎಂದು ವಿರೋಧಿಸುತ್ತಾರೆ. ಶೋಷಿತ ಸಮುದಾಯಗಳನ್ನು ಮುನ್ನೆಲೆಗೆ ತರುವ ಉದ್ದೇಶದಿಂದ ಸಿದ್ದರಾಮಯ್ಯ ಅವರು ಈ ಯೋಜನೆ ಜಾರಿ ಮಾಡಿದ್ದಾರೆ. ಇದರಿಂದ ಪರೋಕ್ಷವಾಗಿ ಬಡವರೂ ತೆರಿಗೆ ಪಾವತಿ ಮಾಡುತ್ತಾರೆ ಎಂದು ತಿಳಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಸಿದ್ದರಾಮಯ್ಯ ಅವರು ಬಡಜನರ ಆದಾಯ ಹೆಚ್ಚು ಮಾಡುವಂತಹ ಉದ್ದೇಶದಿಂದ ಐದು ಗ್ಯಾರಂಟಿ ಯೋಜನೆ ಮಾಡಿದ್ದಾರೆ. ಇಡೀ ದೇಶಕ್ಕೆ ಇದು ಮಾದರಿಯಾಗಬೇಕು. ಮಹಿಳಯರ ಸಬಲೀಕರಣಕ್ಕೆ ಈ ಯೋಜನೆ ಹೆಚ್ಚು ಒತ್ತು ನೀಡುತ್ತದೆ. ಇದನ್ನು ಕರ್ನಾಟಕ ಮಾಡಲ್ ಎಂದೇ ಹೇಳಬಹುದು ಎಂದರು.

ಚಿತ್ರಕಲಾ ಸ್ಪರ್ಧೆಯನ್ನು ಮೂರು ಭಾಗಗಳಲ್ಲಿ ನಡೆಸಲಾಯಿತು. ವಿಜೇತರಾದವರಿಗೆ ಪ್ರಥಮ 7 ಸಾವಿರ ರೂ. ದ್ವಿತೀಯ 5 ಸಾವಿರ ರೂ. ತೃತೀಯ 3 ಸಾವಿರ ರೂ. ಮತ್ತು ಪ್ರತಿ ಗುಂಪಿನ ಹತ್ತು ಮಕ್ಕಳಿಗೆ ಸಮಾಧಾನಕರ ಬಹುಮಾನ ನೀಡಲಾಯಿತು. ಗ್ರೂಪ್ ಎ ವಿಭಾಗದಲ್ಲಿ ವೇದಶ್ರೀ ಪ್ರಥಮ, ಕ್ಷಿತಿಸ್ ಪಾಟೀಲ್ ದ್ವಿತಿಯ ಮತ್ತು ತನುಶ್ರೀ ತೃತೀಯ ಬಹುಮಾನ ಪಡೆದುಕೊಂಡರು. ಗ್ರೂಪ್ ಬಿ ವಿಭಾಗದಿಂದ ಆರ್ಕಿಡ್ ಶಾಲೆಯ ಎಸ್.ಟಿ.ಪ್ರತೀಕ್ಷ ಪ್ರಥಮ, ಶ್ರೀ ಸತ್ಯಸಾಯಿ ಬಾಬ ಶಾಲೆಯ ರೋಹಿತ್ ಆರ್ಯ ದ್ವಿತೀಯ ಮತ್ತು ಸೇಂಟ್ ಥಾಮಸ್ ಶಾಲೆಯ ಹಿಂದೂಜಾ ತೃತೀಯ ಬಹುಮಾನ ಪಡೆದುಕೊಂಡರು. ಗ್ರೂಪ್ ಸಿ ವಿಭಾಗದಲ್ಲಿ ಬಸವರಾಜು ಪ್ರಥಮ, ಸಾಕ್ಷಿ ಶೆಟ್ಟಿ ದ್ವಿತೀಯ ಮತ್ತು ಗೋಕುಲ್ ತೃತೀಯ ಬಹುಮಾನ ತಮ್ಮದಾಗಿಸಿಕೊಂಡರು.

ಕಾರ್ಯಕ್ರಮದಲ್ಲಿ ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಕರ್ನಾಟಕ ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಪ್ರೊ. ವೈ.ಎಸ್.ಸಿದ್ದೇಗೌಡ, ಕೊರಿಯರ್ ವೆಂಕಟೇಶ್, ಸಮಾಜ ಸೇವಕ ರಘುರಾಮ್ ವಾಜಪೇಯಿ, ಕಲಾನಿಕೇತನ ಸ್ಕೂಲ್‌ನ ಬಾಬು ರಾವ್, ರಾಜ್ಯ ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟು ವೇದಿಕೆ ಅಧ್ಯಕ್ಷ ಆರ್.ರಂಗಪ್ಪ, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಶಿವಣ್ಣ, ಜನಪದ ಗಾಯಕ ಮಳವಳ್ಳಿ ಮಹದೇವಸ್ವಾಮಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಕದಂಬ ವೇದಿಕೆಯ ರಾಜಶೇಖರ್ ಕದಂಬ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಜಿಲ್ಲಾ ಪೋಲೀಸರಿಂದ 63 ಪ್ರಕರಣ ಪತ್ತೆ

1.7 ಕೆಜಿ ಚಿನ್ನ, 920 ಗ್ರಾಂ ಬೆಳ್ಳಿ ಆಭರಣ ಸೇರಿ 1.34 ಕೋಟಿ ಮೌಲ್ಯದ ವಸ್ತುಗಳು ಮಾಲೀಕರ ವಶಕ್ಕೆ



ಮೈಸೂರು, ಆ. 11(ಆರ್‌ಕೆ)– ಕಳೆದ ಏಳು ತಿಂಗಳಲ್ಲಿ ಮೈಸೂರು ಜಿಲ್ಲಾ ಪೊಲೀಸರು ವಿವಿಧ 63 ಅಪರಾಧ ಪ್ರಕರಣಗಳನ್ನು ಭೇದಿಸಿದ್ದು, 1,34,66,687 ರೂ. ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಮೈಸೂರಿನ ಜ್ಯೋತಿನಗರದಲ್ಲಿರುವ ಡಿಎಆರ್ ಮೈದಾನದಲ್ಲಿ ಏರ್ಪಡಿಸಿದ್ದ ಪ್ರಾಪರ್ಟಿ ಪರೇಡ್‌ನಲ್ಲಿ ದಕ್ಷಿಣ ವಲಯ ಡಿಐಜಿಪಿ ಬೋರಲಿಂಗಯ್ಯ ಅವರು ಜಿಲ್ಲಾ ಪೊಲೀಸರು ವಶಪಡಿಸಿಕೊಂಡಿರುವ ಸ್ವತ್ತುಗಳನ್ನು ಅವುಗಳ ವಾರಸುದಾರರಿಗೆ ಹಸ್ತಾಂತರಿಸಿದರು. 1 ಕೊಲೆ, 2 ದರೋಡೆ, 4 ಸುಲಿಗೆ, 2 ಸರಗಳ್ಳತನ, 38 ಮನೆ ಕಳವು, 15 ವಾಹನ ಕಳ್ಳತನ ಹಾಗೂ 1 ವಂಚನೆ ಪ್ರಕರಣಗಳು ಪತ್ತೆಯಾದಂತಾಗಿವೆ.

63 ಪ್ರಕರಣಗಳಲ್ಲಿ 1 ಕೆಜಿ 770 ಗ್ರಾಂ ಚಿನ್ನಾಭರಣ, 920 ಗ್ರಾಂ ಬೆಳ್ಳಿ (81,02,950 ರೂ. ಮೌಲ್ಯ), 12,62,147 ರೂ. ನಗದು, 36,23,000 ರೂ. ಬೆಲೆಯ 22 ವಾಹನಗಳು, 80,800 ರೂ. ಮೌಲ್ಯದ ಹಾರ್ಡ್‌ವೇರ್–ಎಲೆಕ್ಟ್ರಿಕ್ ವಸ್ತುಗಳು, 3,06,000 ರೂ. ಬೆಲೆಯ 7 ಹಸುಗಳು, 13 ಕುರಿಗಳು, 43 ಪಾರಿವಾಳಗಳು, 1 ಲಕ್ಷ ರೂ. ಬೆಲೆಯ ದೇವರ ಕಂಚಿನ ವಿಗ್ರಹಗಳು, 6,92,000 ರೂ. ಮೌಲ್ಯದ ರೈತ ಉಪಯೋಗಿ ವಸ್ತುಗಳು ಹಾಗೂ 25 ಲಕ್ಷ ರೂ. ಮೌಲ್ಯದ ವಿವಿಧ ಕಂಪನಿಯ 182 ಮೊಬೈಲ್‌ಗಳನ್ನು ಜಿಲ್ಲಾ ಪೊಲೀಸರು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ.

ಕಳೆದ 7 ತಿಂಗಳಿಂದ ಪತ್ತೆ ಮಾಡಿ ವಶಪಡಿಸಿಕೊಂಡಿದ್ದ ವಸ್ತುಗಳನ್ನು ಡಿಎಆರ್ ಮೈದಾನದಲ್ಲಿ ವಾರಸು ದಾರರಿಗೆ ಹಿಂದಿರುಗಿಸಲಾಯಿತು. ಈ ವೇಳೆ ಮಾತನಾಡಿದ ಡಿಐಜಿಪಿ ಬೋರಲಿಂಗಯ್ಯ, ಮೈಸೂರು ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಸಂಭವಿಸಿದ್ದ ದರೋಡೆ, ಸುಲಿಗೆ, ಸರಗಳವು, ಮನೆ ಕಳವು, ವಾಹನ ಕಳ್ಳತನ ಸೇರಿದಂತೆ ಹಲವು ಪ್ರಕರಣಗಳನ್ನು ತನಿಖಾಧಿಕಾರಿಗಳು ಪತ್ತೆ ಮಾಡಿರುವುದಾಗಿ ಅವರು ತಿಳಿಸಿದರು.

ಸಿಇಐಆರ್ (Central Equipment Identity Register) ಪೋರ್ಟಲ್ ಮೂಲಕ ಕಳೆದುಹೋಗಿದ್ದ ಮೊಬೈಲ್ ಫೋನ್‌ಗಳನ್ನು ಪತ್ತೆ ಮಾಡಲಾಗಿದ್ದು, ಸಾರ್ವಜನಿಕರು ಕಳವಾದ ತಕ್ಷಣ ಹತ್ತಿರದ ಪೊಲೀಸ್ ಠಾಣೆ, ಸೆನ್ ಪೊಲೀಸ್ ಠಾಣೆಗೆ ನೇರವಾಗಿ ಅಥವಾ ಆನ್‌ಲೈನ್ ಮೂಲಕವೂ ದೂರು ದಾಖಲಿಸಬಹುದಾಗಿದೆ ಎಂದು ಅವರು ತಿಳಿಸಿದರು.

ತಾವು ದಕ್ಷಿಣ ವಲಯ ಡಿಐಜಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ವ್ಯಾಪ್ತಿಯ ಎಲ್ಲಾ ಜಿಲ್ಲೆಗಳಿಗೂ ಭೇಟಿ ನೀಡಿ ಅಪರಾಧ ಪ್ರಕರಣ, ತನಿಖಾ ಪ್ರಕ್ರಿಯೆ, ಪತ್ತೆ ಪ್ರಗತಿ ಸೇರಿದಂತೆ ಅಪರಾಧ ತಡೆ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡುವ ಬಗ್ಗೆ ಆಯಾ ಜಿಲ್ಲೆಯ ಎಸ್ಪಿಗಳು ಆಸಕ್ತಿ ವಹಿಸಿ ಅಧೀನಾಧಿಕಾರಿಗಳಿಗೆ ಸಲಹೆ ನೀಡಲಾಗಿದೆ ಎಂದು ಬೋರಲಿಂಗಯ್ಯ ತಿಳಿಸಿದ್ದಾರೆ. ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ನಂದಿನಿ, ಎಲ್ಲಾ ಉಪ ವಿಭಾಗಗಳ ಡಿವೈಎಸ್ಪಿಗಳು, ಇನ್ಸ್‌ಪೆಕ್ಟರ್‌ಗಳು ಪ್ರಾಪರ್ಟಿ ಪರೇಡ್‌ನಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಪತ್ರಿಕಾ ಛಾಯಾಗ್ರಾಹಕ ಎಸ್.ಆರ್.ಮಧುಸೂದನ್‌ಗೆ ಪ್ರಶಸ್ತಿ





ಮೈಸೂರು,ಆ.11(ಎಂಟಿವೈ)– ಮೈಸೂರಿನ ಪತ್ರಿಕಾ ಛಾಯಾಗ್ರಾಹಕ ಎಸ್.ಆರ್ ಮಧುಸೂದನ್ ಅವರಿಗೆ ವನ್ಯಜೀವಿ ಸಂರಕ್ಷಣಾ ವಿಭಾಗದ ಅಡಿಯಲ್ಲಿ ಲಿನೆನ್ ಕ್ಲಬ್ ನೇಚರ್ ಇನ್ ಫೋಕಸ್ ಫೆಸ್ಟಿವಲ್ ಹಾಗೂ ಪ್ರಶಸ್ತಿ ಸಂಸ್ಥೆ ವಿಶ್ವ ಹುಲಿ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಸ್ಪರ್ಧೆಯಲ್ಲಿ ಪ್ರಸಿದ್ಧ ವನ್ಯಜೀವಿ ಸಂರಕ್ಷಣಾ ಛಾಯಾಗ್ರಾಹಕ ರಾಮ್ ಕಿ ಸ್ಮರಣಾರ್ಥ ಗೌರವ ಪ್ರಶಸ್ತಿ ಲಭಿಸಿದೆ.

ಪಿರಿಯಾಪಟ್ಟಣದಲ್ಲಿ ಕಾಡಾನೆ ಸೆರೆ ಕಾರ್ಯಾಚರಣೆ ವೇಳೆ 'ಅಂಬಾರಿ ಆನೆ ಅಭಿಮನ್ಯು'ವಿಗೆ ಮುಖಾಮುಖಿಯಾದ ಕಾಡಾನೆ ಚಿತ್ರವನ್ನು ಮಧುಸೂದನ್ ಸೆರೆ ಹಿಡಿದಿದ್ದು, ಆ ಚಿತ್ರಕ್ಕೆ ರಾಮ್ ಕಿ ಸ್ಮರಣಾರ್ಥ ಗೌರವ ಪ್ರಶಸ್ತಿ ದೊರೆತಿದೆ. ಈ ಸ್ಪರ್ಧೆಯಲ್ಲಿ 20 ದೇಶಗಳ 1200 ಮಂದಿ ಛಾಯಾಗ್ರಾಹಕರು ತೆಗೆದ 20 ಸಾವಿರಕ್ಕೂ ಹೆಚ್ಚು ಛಾಯಾಚಿತ್ರವನ್ನು ಪ್ರದರ್ಶಿಸಲಾಗಿತ್ತು. ಅವುಗಳಲ್ಲಿ ಎಸ್.ಆರ್.ಮಧುಸೂದನ್ ಅವರ ಚಿತ್ರಕ್ಕೆ ಗೌರವ ಪ್ರಶಸ್ತಿ ಪ್ರಾಪ್ತಿಯಾಗಿದೆ. ಇತ್ತೀಚೆಗೆ ಬೆಂಗಳೂರಿನ ಜಯಮಹಲ್ ಅರಮನೆ ಆವರಣದಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ವನ್ಯಜೀವಿ ಛಾಯಾಗ್ರಾಹಕ ದಿ. ರಾಮ್ ಕಿ ಸಹೋದರ ಸ್ವಾಮಿನಾಥನ್ ಪ್ರಶಸ್ತಿಯನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ನಟಿ ದಿಯಾ ಮಿರ್ಜಾ ಉಪಸ್ಥಿತರಿದ್ದರು.

ಸುಗಮ ಸಂಗೀತ ತರಬೇತಿ ಶಿಬಿರ

ಮೈಸೂರು, ಆ. 11– ಸಂಚಲನ ಮೈಸೂರು ವತಿಯಿಂದ ಆ. 14 ರಿಂದ 18 ರವರೆಗೆ ಸುಗಮ ಸಂಗೀತ ತರಬೇತಿ ಶಿಬಿರವನ್ನು ಖ್ಯಾತ ಗಾಯಕ ಮತ್ತು ಸಂಗೀತ ನಿರ್ದೇಶಕ ರವಿಮೂರೂರು ಅವರ ಸಾರಥ್ಯದಲ್ಲಿ ಆಯೋಜಿಸಲಾಗಿದೆ. ಶಿಬಿರವು ಬೋಗಾದಿ 2ನೇ ಹಂತ, ನಿರ್ಮಿತಿ ಕೇಂದ್ರದ ಬಸ್ ನಿಲುಗಡೆ ಎದುರು ಇರುವ ಸಂಚಲನ ರಂಗಮನೆಯಲ್ಲಿ ಪ್ರತಿದಿನ 5 ರಿಂದ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ. 9845992523, 9845075762 ಸಂಪರ್ಕಿಸಬಹುದು.

ಕೊರೊನಾ ಸಮಯದಲ್ಲಿ ಜನರು ಹಣಕ್ಕಾಗಿ ಪರದಾಡಿದರೆ, ಉದ್ಯಮಿಗಳು ಖಜಾನೆಗೆ ಹಣ ತುಂಬಿಸಿಕೊಂಡರು

ಚಿಂತಕ ಪ್ರೊ. ರಹಮತ್ ತರೀಕೆರೆ ವಿಷಾದ



ಮೈಸೂರು, ಆ.11(ಬಿಎಲ್‌ಯು)– ಕೋವಿಡ್ ಸಮಯದಲ್ಲಿ ಜನ ಸಾಮಾನ್ಯರು ಹಣಕ್ಕಾಗಿ ತೀವ್ರ ಸಂಕಷ್ಟ ಪಡುತ್ತಿದ್ದರೆ, ಭಾರತದ ಬಿಲಿಯನ್ನರು ಇದೇ ಸಮಯದಲ್ಲಿ ದುಪ್ಪಟ್ಟು ಹಣ ಮಾಡಿ ಖಜಾನೆ ತುಂಬಿಸಿಕೊಂಡರು ಎಂದು ಸಂಸ್ಕೃತಿ ಚಿಂತಕ ಪ್ರೊ. ರಹಮತ್ ತರೀಕೆರೆ ಹೇಳಿದರು.

ಮೈಸೂರಿನ ಮಾನಸ ಗಂಗೋತ್ರಿಯ ಇಎಂಆರ್‌ಸಿ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗಾಂಧಿ ಅಧ್ಯಯನ ಕೇಂದ್ರ ಹಾಗೂ ಸಕಾಲ ಸ್ಪಂದನ ಸಂಸ್ಥೆಯು ಸಂಯುಕ್ತವಾಗಿ ಆಯೋಜಿಸಿದ್ದ ಸ್ವಾತಂತ್ರ್ಯ ಚಳವಳಿಯ ಆಶಯಗಳು ಮತ್ತು ಸಮಕಾಲೀನ ಸವಾಲುಗಳು ಕುರಿತ ವಿಚಾರ ಮಂಥನದಲ್ಲಿ ಮಾತನಾಡಿದ ಅವರು, ದಿಢೀರನೆ ಬಂದೆರಗಿದ ಕೊರೊನಾದಿಂದ ಜನ ಸಾಮಾನ್ಯರು ತೀವ್ರ ಸಂಕಷ್ಟ ಎದುರಿಸಿದರು. ಕೋಟ್ಯಂತರ ಜನರು ಔಷಧಿ ಹಾಗೂ ಸಂಸಾರ ದೂಗಿಸಲು ಹಣಕ್ಕಾಗಿ ಪರದಾಡಿದರು. ಆದರೆ ಕೆಲವು ಉದ್ಯಮಿಗಳು ಇದೇ ಕೋವಿಡ್ ಸಮಯವನ್ನು ಬಳಸಿಕೊಂಡು ಹಣ ಮಾಡಿದರು. ಇದರಿಂದ ಭಾರತದಲ್ಲಿ 50ರಷ್ಟಿದ್ದ ಬಿಲಿಯನಿಯರ್‌ಗಳ ಸಂಖ್ಯೆ 200ಕ್ಕೆ ಹೆಚ್ಚಾಯಿತು ಎಂದರು.

ಭಾರತದಲ್ಲಿ ಸಂವಿಧಾನದ ಮೇಲೆ ಹಲ್ಲೆ ನಡೆಯುತ್ತಿದೆ. ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆ ಎಂದು ಕೆಲವು ಜನ ಪ್ರತಿನಿಧಿಗಳು ನೇರವಾಗಿಯೇ ಹೇಳುತ್ತಿದ್ದಾರೆ. ಈ ಸಮಯದಲ್ಲಿ ನ್ಯಾಯಾಂಗ ಹಾಗೂ ಪತ್ರಿಕಾ ರಂಗ ಕೂಡ ಭಾರತವನ್ನು ಉಳಿಸುವ ಸ್ಥಿತಿಯಲ್ಲಿಲ್ಲ. ಮಹಾತ್ಮ ಗಾಂಧಿ ಅವರ ಪರಿಕಲ್ಪನೆಯ ಹಲವು ಪತ್ರಿಕೆಗಳು ಮಾರಾಟವಾಗಿದೆ. ಇದರಿಂದ ಯಾವ ಬದಲಾವಣೆ ನಿರೀಕ್ಷಿಸಲು ಸಾಧ್ಯ ಎಂದರು. ಇತ್ತೀಚೆಗೆ ದಲಿತರು, ಮಹಿಳೆಯರು ಹಾಗೂ ಮುಸ್ಲಿಮರ ಮೇಲೆ ನಿರಂತರ ಹಲ್ಲೆ ನಡೆಯುತ್ತಿದೆ. ಈ ಮೂಲಕ ಸಾಮಾಜಿಕ ಹಾಗೂ ಧಾರ್ಮಿಕ ಕ್ರೌರ್ಯ ಹೆಚ್ಚಾಗುತ್ತಿದೆ ಎಂದು ಪ್ರೊ.ರಹಮತ್ ತರೀಕೆರೆ ಆತಂಕ ವ್ಯಕ್ತಪಡಿಸಿದರು.

ಭಾರತಕ್ಕೆ ಒಕ್ಕೂಟ ವ್ಯವಸ್ಥೆ ಉಳಿದುಕೊಳ್ಳುವುದು ದೊಡ್ಡ ಸವಾಲಾಗಿದೆ. ಕೇಂದ್ರ ಸರ್ಕಾರ ಹಿಂದಿ ಭಾಷೆ ಸೇರಿದಂತೆ ಹಲವು ವಿಚಾರವನ್ನು ಬಲವಂತವಾಗಿ ರಾಜ್ಯಗಳ ಮೇಲೆ ಹೇರುತ್ತಿದೆ. ಇದರಿಂದ ರಾಜ್ಯಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಎಂದರು. ವಾಟ್ಸಾಪ್ ಸೇರಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಹಲವು ರೀತಿಯ ಆಧಾರ ರಹಿತ ಸಂದೇಶಗಳು ಬಿತ್ತರವಾಗುತ್ತಿದೆ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಇನ್ನು 20 ವರ್ಷದಲ್ಲಿ ಭಾರತದಲ್ಲಿ ಜ್ಞಾನ ವಿರೋಧಿ ಸಮಾಜ ನಿರ್ಮಾಣವಾಗುತ್ತದೆ ಎಂದು ತಿಳಿಸಿದರು.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಬ್ರಿಟಿಷ್ ಆಡಳಿತವನ್ನು ಒಪ್ಪಿಕೊಂಡು ಮೈಸೂರನ್ನು ಮಾದರಿ ಸಂಸ್ಥಾನವಾಗಿ ರೂಪಿಸಿದರು. ಆಧುನಿಕತೆಯನ್ನು ಅಳವಡಿಸಿಕೊಂಡು ಮೈಸೂರು ರಾಜ್ಯವನ್ನು ಅಭಿವೃದ್ಧಿ ಮಾಡಿದರು ಎಂದು ಪ್ರೊ.ರಹಮತ್ ತರೀಕೆರೆ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ವಿ.ಆರ್. ಶೈಲಜ, ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕ ಪ್ರೊ.ಎಸ್. ನರೇಂದ್ರ ಕುಮಾರ್, ಸಕಾಲ ಸ್ಪಂದನ ಅಧ್ಯಕ್ಷ ಪ್ರೊ.ಆರ್. ಎಂ.ಚಿಂತಾಮಣಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಯ್ದೆಗಳು ಜನರ ಪರವಾಗಿರಬೇಕೇ ಹೊರತು ವಿರುದ್ಧವಾಗಿ ಅಲ್ಲ

ಡಾ. ಕಸ್ತೂರಿ ರಂಗನ್ ವರದಿ ಸಾಧಕ-ಬಾಧಕಗಳ ಬಗ್ಗೆ ಚರ್ಚೆಯಲ್ಲಿ ಅಭಿಪ್ರಾಯ



ಮಡಿಕೇರಿ, ಆ.11- ಡಾ.ಕಸ್ತೂರಿ ರಂಗನ್ ವರದಿಯಿಂದ ಗ್ರಾಮೀಣ ಭಾಗದ ಜನರನ್ನು ಒಕ್ಕಲೆಬ್ಬಿಸುವ ತಂತ್ರ ನಡೆಯುತ್ತಿದ್ದು, ಜನರನ್ನು ಅಭಿವೃದ್ಧಿಯೊಂದಿಗೆ ಸಮಾಜದ ಮುಖ್ಯವಾಹಿನಿಗೆ ತರಬೇಕಾದ ಸರ್ಕಾರಗಳು ಜನರ ವಿರುದ್ಧವಾಗಿಯೇ ನಡೆದುಕೊಳ್ಳುತ್ತಿರುವುದು ಸರಿಯಲ್ಲ ಎಂದು ಕರ್ನಾಟಕ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಡಾ.ಕಸ್ತೂರಿ ರಂಗನ್ ವರದಿಯಿಂದ ಉಂಟಾಗುವ ಸಾಧಕ ಬಾಧಕಗಳ ಬಗ್ಗೆ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ರೈತರು, ಕಾರ್ಮಿಕ ಸಂಘಟನೆಗಳ ಪ್ರಮುಖರು, ಸ್ಥಳೀಯರು ಪಾಲ್ಗೊಂಡು ಸುದೀರ್ಘ ಚರ್ಚೆ ನಡೆಸಿದರು.

ಸಿದ್ದಾಪುರದ ಸ್ವರ್ಣಮಾಲಾ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಚಾರಗೋಷ್ಠಿ ಮತ್ತು ಸಂವಾದದಲ್ಲಿ ಕರ್ನಾಟಕ ರಾಜ್ಯ ರೈತಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, ಯಾವುದೇ ಕಾಯ್ದೆಗಳು ಜನರ ಪರವಾಗಿ ಇರಬೇಕಾಗಿಯೇ ಹೊರತು ವಿರುದ್ಧವಾಗಿರಬಾರದು. ಕಸ್ತೂರಿ ರಂಗನ್ ವರದಿ ಜಾರಿ ಮಾಡುವ ಮೂಲಕ ಕಾಡಂಚಿನಲ್ಲಿರುವ ಆದಿವಾಸಿಗಳನ್ನು ಒಕ್ಕಲೆಬ್ಬಿಸಲು ಮುಂದಾಗಿದ್ದು, ಗ್ರಾಮೀಣ ಭಾಗದ ಜನರನ್ನು ಒಕ್ಕಲೆಬ್ಬಿಸುವ ತಂತ್ರಗಾರಿಕೆಯೂ ನಡೆಯುತ್ತಿದೆ ಎಂದು ಆರೋಪಿಸಿದರು.

ಸಂಕಷ್ಟದಲ್ಲಿದ್ದು ಹಿಂದುಳಿದಿರುವ ಜನರನ್ನು ಅಭಿವೃದ್ಧಿಯೊಂದಿಗೆ ಸಮಾಜದ ಮುಖ್ಯವಾಹಿನಿಗೆ ತರಬೇಕಾದ ಸರ್ಕಾರಗಳು ಜನರ ವಿರುದ್ಧವಾಗಿಯೇ ನಡೆದುಕೊಳ್ಳುತ್ತಿರುವುದು ಸರಿಯಲ್ಲ. ಪರಿಸರವನ್ನು ಉಳಿಸಿ ಬೆಳೆಸುವುದರ ಮೂಲಕ ರೈತರಿಗೂ ಪರಿಸರಕ್ಕೂ ಸಂಬಂಧವಿದೆ ಎಂಬುದನ್ನು ಸರಕಾರಗಳು ಅರಿತುಕೊಳ್ಳಬೇಕು. ರೈತರಿಗೆ ತೊಂದರೆ ಆಗುವುದನ್ನು ಸಹಿಸಲು ಸಾಧ್ಯವಿಲ್ಲ, ಈ ಹಿನ್ನೆಲೆಯಲ್ಲಿ ರೈತ ಸಂಘ ಬೀದಿಗಿಳಿದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕೊಡಗು ರೈತ ಸಂಘದ ಅಧ್ಯಕ್ಷ ಕಾಡ್ಯಮಾಡ ಮನು ಸೋಮಯ್ಯ ಮಾತನಾಡಿ, ಕೊಡಗು ಜಿಲ್ಲೆಯ ಗ್ರಾಮೀಣ ಭಾಗದ ರೈತರು, ಕಾರ್ಮಿಕರು, ಬೆಳೆಗಾರರು ಕಾಡು ಪ್ರಾಣಿಗಳ ಹಾವಳಿ ನಡುವೆ ಅತಂತ್ರ ಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದು, ಬೆಳೆ ನಷ್ಟದಿಂದ ಕಂಗಾಲಾಗಿದ್ದಾರೆ. ಕೊಡಗಿನ ರೈತರ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸರ್ಕಾರಗಳು ವಿಫಲವಾಗಿವೆ. ಸಣ್ಣ ಪ್ರಮಾಣದ ಭೂಮಿಗಳನ್ನು ಹೊಂದಿ ಕೃಷಿ ಮಾಡಿ ಜೀವನ ನಡೆಸುವ ರೈತರ ಮೇಲೆ ಅವೈಜ್ಞಾನಿಕ ನೀತಿಗಳನ್ನು ತಂದು 55 ಗ್ರಾಮಗಳನ್ನು ಬಫರ್ ಝೋನ್ ಪಟ್ಟಿಗೆ ಸೇರಿಸಲಾಗಿದೆ. ಇದನ್ನ ಕೈ ಬಿಡಬೇಕೆಂದು ಸಭೆಯಲ್ಲಿ ಒತ್ತಾಯಿಸಲಾಗಿದೆ ಎಂದರಲ್ಲದೇ, ಸಭೆಯಲ್ಲಿ ವರದಿ ಜಾರಿಯಿಂದಾಗುವ ಸಾಧಕ ಬಾಧಕಗಳ ಕುರಿತು ಚರ್ಚಿಸಲಾಗಿದೆ. ಈ ಮಾರಕ ವರದಿ ವಿರುದ್ಧ ಜಿಲ್ಲೆಯ ಜನರನ್ನು ಒಗ್ಗೂಡಿಸಿ ಜನರ ಹಿತದೃಷ್ಟಿಯಿಂದ ಬೃಹತ್ ಹೋರಾಟ ರೂಪಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಈ ಸಂದರ್ಭ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಕಿರಣ್, ಹೊಸಕೋಟೆ ಬಸವರಾಜು, ಅಮ್ಮತ್ತಿ ಹೋಬಳಿ ಅಧ್ಯಕ್ಷ ಪ್ರವೀಣ್ ಬೋಪಯ್ಯ, ಸಿದ್ದಾಪುರ ವಲಯ ಅಧ್ಯಕ್ಷ ಸುಜಯ್ ಬೋಪಯ್ಯ ಸೇರಿದಂತೆ ಬೆಳೆಗಾರರು, ರೈತ ಸಂಘದ ಸದಸ್ಯರು, ಮುಖಂಡರು, ಸಾರ್ವಜನಿಕರು, ಸಂಘಸಂಸ್ಥೆಗಳ ಪ್ರಮುಖರು, ರಾಜಕೀಯ ಪಕ್ಷಗಳ ಮುಖಂಡರು ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು.

ದೇವಟ್ ಪರಂಬುವಿನಲ್ಲಿ ಸ್ಮಾರಕ ನಿರ್ಮಿಸಲು ಸಿಎನ್‌ಸಿ ಆಗ್ರಹ

ಹಿರಿಯರಿಗೆ ಪ್ರಮುಖರಿಂದ ಪುಷ್ಪನಮನ



ಮಡಿಕೇರಿ, ಆ.11- ಟಿಪ್ಪು ಕಾಲದಲ್ಲಿ ಕೊಡವರ ಹತ್ಯೆಯಾದ ದೇವಟ್ ಪರಂಬು ಪ್ರದೇಶದಲ್ಲಿ ಸ್ಮಾರಕ ನಿರ್ಮಾಣ ಮಾಡಬೇಕೆಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಒತ್ತಾಯಿಸಿದೆ. ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ದೇವಟ್ ಪರಂಬುವಿಗೆ ತೆರಳಿದ ಪ್ರಮುಖರು ಕುತಂತ್ರದಿಂದ ಜೀವ ಕಳೆದುಕೊಂಡ ಹಿರಿಯರಿಗೆ ಪುಷ್ಪನಮನ ಸಲ್ಲಿಸಿದರು.

ಈ ಸಂದರ್ಭ ಮಾತನಾಡಿದ ನಾಚಪ್ಪ, ಸಿಎನ್‌ಸಿಯ ನಿರಂತರ ಹೋರಾಟದ ಫಲವಾಗಿ ಪ್ರಮುಖ ಹಕ್ಕೊತ್ತಾಯಗಳಿಗೆ ಹಂತ ಹಂತವಾಗಿ ಸ್ಪಂದನೆ ದೊರೆಯುತ್ತಿದೆ. ಅರಸರ ಸಂಚಿನಿಂದ ಮೃತಪಟ್ಟ ಅಮಾಯಕ ಹಿರಿಯರ ಆಶೀರ್ವಾದ ಪಡೆದು ಶಾಂತಿಯುತ ಹೋರಾಟವನ್ನು ಮುಂದುವರೆಸಲು ಪುಷ್ಪ ನಮನದ ಮೂಲಕ ಸಂಕಲ್ಪ ತೊಟ್ಟಿರುವುದಾಗಿ ಹೇಳಿದರು.

1785ರ ಡಿ.12ರಂದು ದೇವಟ್ ಪರಂಬುವಿನಲ್ಲಿ ಘೋರ ದುರಂತ ನಡೆದಿದ್ದು, ಸಹಸ್ರ ಸಹಸ್ರ ಸಂಖ್ಯೆಯ ಕೊಡವರು ಅಸುನೀಗಿದ್ದಾರೆ. ಪ್ರಾಣ ಕಳೆದುಕೊಂಡ ಹಿರಿಯರ ಸ್ಮರಣೆಗಾಗಿ ಅಂತರರಾಷ್ಟ್ರೀಯ ಮಟ್ಟದ ಸ್ಮಾರಕವೊಂದನ್ನು ಇಲ್ಲಿ ನಿರ್ಮಿಸಬೇಕು. ಕೊಡವ ನರಮೇಧವನ್ನು ಯುಎನ್‌ಒ ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು.

ಕೊಡವ ಬುಡಕಟ್ಟು ಜನಾಂಗದ ಸಮಗ್ರ ಸಬಲೀಕರಣಕ್ಕಾಗಿ ಕೊಡವಲ್ಯಾಂಡ್ ಭೌಗೋಳಿಕ-ರಾಜಕೀಯ ಸ್ವಾಯತ್ತತೆ, ಆಂತರಿಕ ರಾಜಕೀಯ ಸ್ವ-ನಿರ್ಣಯದ ಹಕ್ಕು, ಸ್ವಯಂ-ಆಡಳಿತ ಮತ್ತು ಎಸ್‌ಟಿ ಟ್ಯಾಗ್ ನೀಡಬೇಕು. ಕೊಡವ ಭೂಮಿ, ಭಾಷೆ, ಸಾಂಸ್ಕೃತಿಕ ಪರಂಪರೆಯ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾಂವಿಧಾನಿಕ ಭದ್ರತೆ ಒದಗಿಸಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಸಿಎನ್‌ಸಿ ಪ್ರಮುಖರಾದ ಕಲಿಯಂಡ ಪ್ರಕಾಶ್, ಪಟ್ಟಮಾಡ ಕುಶ, ಅರೆಯಡ ಗಿರೀಶ್, ಅಲ್ಮಂಡ ಜೈ, ಮಂದಪಂಡ ಮನೋಜ್, ಚೇಯಬೇರ ಸತೀಶ್ ಮತ್ತಿತರರು ಸಾಂಪ್ರದಾಯಿಕ ಕೋವಿಯೊಂದಿಗೆ ಪುಷ್ಪನಮನ ಸಲ್ಲಿಸಿ ಹಕ್ಕೊತ್ತಾಯಗಳ ಪರ ಪ್ರತಿಜ್ಞಾ ವಿಧಿ ಸ್ವೀಕರಿಸಿದರು.

ಅನಾರೋಗ್ಯದಿಂದ ಮೃತಪಟ್ಟ ಪುಷ್ಪ ಅವರ ಅಂತ್ಯಕ್ರಿಯೆ

ಗೋಣಿಕೊಪ್ಪ, ಆ.11- ಅನಾರೋಗ್ಯದಿಂದ ಮೃತಪಟ್ಟ ಗೋಣಿಕೊಪ್ಪದ ನಿವಾಸಿ ಪುಷ್ಪ ಅವರ ಅಂತ್ಯಕ್ರಿಯೆಯನ್ನು ಸಾರ್ವಜನಿಕರ ನೆರವಿನೊಂದಿಗೆ ಕೊಡಗು ಮಾಧ್ಯಮ ಸ್ಪಂದನಾ ತಂಡದ ವತಿಯಿಂದ ಅರ್ವತೊಕ್ಲು ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು. ಕೇರಳ ರಾಜ್ಯದ ಸುಲ್ತಾನ್ ಬತ್ತೇರಿ ತನಲ್ ಆಶ್ರಮ ಆಸ್ಪತ್ರೆಯಲ್ಲಿ ನಿಧನರಾದ ಪುಷ್ಪ ಅವರ ಪಾರ್ಥಿವ ಶರೀರವನ್ನು ಗೋಣಿಕೊಪ್ಪ ಆಂಬುಲೆನ್ಸ್ ಮೂಲಕ ತರಲಾಯಿತು. ನಂತರ ಹಿಂದೂ ರುದ್ರಭೂಮಿಯಲ್ಲಿ ಸಂಪ್ರದಾಯದಂತೆ ಅಂತಿಮ ಸಂಸ್ಕಾರ ನೆರವೇರಿಸಲಾಯಿತು.

ಸಂಶಯಾಸ್ಪದ ರೀತಿಯಲ್ಲಿ ಯುವಕ ಸಾವು



ಮಡಿಕೇರಿ, ಆ.11- ಯುವಕನೋರ್ವ ಅಸಹಜ ರೀತಿಯಲ್ಲಿ ಮೃತಪಟ್ಟಿರುವ ಘಟನೆ ವಿರಾಜಪೇಟೆ ತಾಲೂಕಿನ ಸಿದ್ದಾಪುರ-ಪಾಲಿಬೆಟ್ಟ ರಸ್ತೆಯಲ್ಲಿ ನಡೆದಿದ್ದು, ಸಂಶಯವನ್ನುಂಟು ಮಾಡಿದೆ. ಮೃತ ಯುವಕನನ್ನು ಸಿದ್ದಾಪುರದ ಅಂಬೇಡ್ಕರ್ ನಗರ ನಿವಾಸಿ ಕ್ರಿಸ್ಟಲ್ ಎಂದು ಗುರುತಿಸಲಾಗಿದೆ. ಯುವಕನ ಕುಟುಂಬಸ್ಥರು ನೀಡಿದ ದೂರಿನಂತೆ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ.

ಘಟನೆ ಹಿನ್ನೆಲೆ: ಸಿದ್ದಾಪುರ-ಪಾಲಿಬೆಟ್ಟ ರಸ್ತೆ ಬದಿಯ ಕಾಫಿ ತೋಟದ ಪಕ್ಕದಲ್ಲೇ ಶುಕ್ರವಾರ ಬೆಳಗ್ಗೆ ಯುವಕನೋರ್ವನ ಮೃತದೇಹ ಅಸಹಜ ರೀತಿಯಲ್ಲಿ ಪತ್ತೆಯಾಗಿತ್ತು. ಈ ಕುರಿತು ಸಾರ್ವಜನಿಕರು ಸಿದ್ದಾಪುರ ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕಾಗಮಿಸಿದ ಪೊಲೀಸರು ಮೃತ ದೇಹವನ್ನು ಮಹಜರು ನಡೆಸಿದರು. ಘಟನಾ ಸ್ಥಳದಲ್ಲಿ 1 ಮೊಬೈಲ್ ಫೋನ್ ಕೂಡ ಲಭಿಸಿದ್ದು, ಅದನ್ನು ವಶಕ್ಕೆ ಪಡೆಯಲಾಗಿದೆ. ಪಾಲಿಬೆಟ್ಟ ರಸ್ತೆಯ ಬಾರ್ ಒಂದರಲ್ಲಿ ಗುರುವಾರ ರಾತ್ರಿ ಮೃತ ಯುವಕ ಕ್ರಿಸ್ಟಲ್ ಹಾಗೂ ಕೆಲವರ ನಡುವೆ ಗಲಾಟೆ ನಡೆದಿತ್ತು ಎನ್ನಲಾಗಿದ್ದು, ವಿವಿಧ ಆಯಾಮಗಳಲ್ಲಿ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಘಟನಾ ಸ್ಥಳಕ್ಕೆ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ಮಡಿಕೇರಿ ಉಪ ವಿಭಾಗದ ಡಿವೈಎಸ್‌ಪಿ ಜಗದೀಶ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ಸಿದ್ದಾಪುರ ಠಾಣಾಧಿಕಾರಿ ರಾಘವೇಂದ್ರ ಮತ್ತು ಸಿಬ್ಬಂದಿಗಳು ಭೇಟಿ ನೀಡಿ, ಪರಿಶೀಲನೆ ನಡೆಸಿದರು. ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಗಿದೆ.

ಇಂದು ಗಾಣಿಗರ ಸಂಘದಿಂದ ಗುರುವಂದನಾ ಕಾರ್ಯಕ್ರಮ



ಚಾಮರಾಜನಗರ, ಆ.11- ಜಿಲ್ಲಾ ಜ್ಯೋತಿಪಣ ಗಾಣಿಗರ ಸಂಘದಿಂದ ಆ.12ರಂದು ಬೆಳಗ್ಗೆ 10.30ಕ್ಕೆ ನಂದಿ ಭವನದಲ್ಲಿ ಗುರುವಂದನಾ ಕಾರ್ಯಕ್ರಮ, ಜಿಲ್ಲಾ ಗಾಣಿಗರ ಸಮಾವೇಶ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಶಿವಜ್ಯೋತಿ ಸ್ಮರಣ ಸಂಚಿಕೆ ಬಿಡುಗಡೆ ಹಾಗೂ ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಗುರುವಂದನಾ ಕಾರ್ಯಕ್ರಮಕ್ಕೆ ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠ ಬೆಂಗಳೂರಿನ ಶ್ರೀಪೂರ್ಣಾನಂದ ಪುರಿ ಸ್ವಾಮೀಜಿ ಅವರು ಆಗಮಿಸಿ ದಿವ್ಯ ಸಾನ್ನಿಧ್ಯ ವಹಿಸಿ, ಆಶೀರ್ವಚನ ನೀಡಲಿದ್ದಾರೆ. ಕಾರ್ಯಕ್ರಮವನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಉದ್ಘಾಟಿಸುವರು. ಮಾಜಿ ಸಭಾಪತಿ ವಿ.ಆರ್.ಸುದರ್ಶನ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಿದ್ದಾರೆ. ಕುಮಟಾ ಕ್ಷೇತ್ರದ ಶಾಸಕ ದಿನಕರಶೆಟ್ಟಿ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಗಣೇಶ್ ಪ್ರಸಾದ್, ಮಂಜುನಾಥ್, ಮೈಸೂರು ಮಹಾನಗರ ಪಾಲಿಕೆ ಮಾಜಿ ಮೇಯರ್ ಅನಂತು, ಬೆಂಗಳೂರು ಜಿಲ್ಲಾಧಿಕಾರಿ ವಾಸಂತಿ ಅಮರನಾಥ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿಸಾಹು ಸೇರಿದಂತೆ ಸಮಾಜದ ಗಣ್ಯರು, ಯಜಮಾನರು, ಕುಲಸ್ಥರು ಭಾಗವಹಿಸಲಿದ್ದಾರೆ. ಈ ಕಾರ್ಯಕ್ರಮಕ್ಕೆ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಸಬೇಕೆಂದು ಸಂಘದ ಅಧ್ಯಕ್ಷ ಅಂಕಶೆಟ್ಟಿ ಹಾಗೂ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಯರಾಮಶೆಟ್ಟಿ ಮನವಿ ಮಾಡಿದ್ದಾರೆ.

ತಂಬಾಕು ನಿಯಂತ್ರಣ ಕಾರ್ಯ ಅನುಷ್ಠಾನಗೊಳಿಸಿ

ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಸೂಚನೆ



ಚಾಮರಾಜನಗರ, ಆ.11- ಜಿಲ್ಲಾದ್ಯಂತ ತಂಬಾಕು ನಿಯಂತ್ರಣ ಕಾರ್ಯ ಚಟುವಟಿಕೆಗಳನ್ನು (ಕೋಟ್ಪಾ-2003) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಂತೆ ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದ ಜಿಲ್ಲಾ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಅಕ್ರಮ ತಂಬಾಕು ಮಾರಾಟ ಜಾಸ್ತಿಯಾಗುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ನಿಗಾ ವಹಿಸಬೇಕು. ಈ ಸಂಬಂಧ ಮಲೆ ಮಹದೇಶ್ವರ ಬೆಟ್ಟದಲ್ಲಿ ಹಲವು ಪ್ರಕರಣ ಕಂಡು ಬಂದಿದೆ. ಪಟ್ಟಣ ಹಾಗೂ ಹಳ್ಳಿಗಳಲ್ಲಿ ತಂಬಾಕು ಮಾರಾಟ ಹಾಗೂ ಸೇವನೆಗಳ ಕುರಿತ ದುಷ್ಪರಿಣಾಮಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲು ಕ್ರಮವಹಿಸಬೇಕು. ಈ ನಿಟ್ಟಿನಲ್ಲಿ ಆರೋಗ್ಯ ಇಲಾಖೆ ಹಾಗೂ ಸಂಬಂಧಪಟ್ಟ ಇತರೆ ಇಲಾಖೆಗಳು ಮುಂದಾಗಬೇಕು ಎಂದು ತಿಳಿಸಿದರು.

ನಗರಸಭೆ, ಪುರಸಭೆ, ಪಪಂ, ಗ್ರಾಪಂ ಮಟ್ಟದಲ್ಲಿ ತಂಬಾಕು ಸೇವನೆಯಿಂದ ಆಗುವ ಅನಾಹುತಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಗ್ರಾಪಂ ಮಟ್ಟದಲ್ಲಿ ನಡೆಯುವ ಗ್ರಾಮಸಭೆ ಹಾಗೂ ಮಕ್ಕಳ ಗ್ರಾಮ ಸಭೆಗಳಲ್ಲಿ ತಂಬಾಕು ನಿಯಂತ್ರಣದ ಕುರಿತು ತಿಳಿ ಹೇಳಬೇಕು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಅಗತ್ಯ ಕ್ರಮಗಳ ಬಗ್ಗೆ ಚರ್ಚಿಸಿ ತಂಬಾಕು ನಿಯಂತ್ರಣಕ್ಕಾಗಿ ಶ್ರಮಿಸಬೇಕು ಎಂದರು.

ಸರ್ಕಾರಿ ಕಚೇರಿ, ಸಾರ್ವಜನಿಕ ಸ್ಥಳ, ಶಾಲಾ ಕಾಲೇಜು ಹಾಗೂ ಇನ್ನಿತರ ಸ್ಥಳಗಳಲ್ಲಿ ತಂಬಾಕು ದುಷ್ಪರಿಣಾಮಗಳ ಬಗ್ಗೆ ಭಿತ್ತಿಪತ್ರಗಳನ್ನು ಅಂಟಿಸಬೇಕು. ಶಾಲಾ ಮಟ್ಟದಲ್ಲಿ 13 ರಿಂದ 18 ವರ್ಷದ ಮಕ್ಕಳಿಗೆ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳ ಬಗ್ಗೆ ತಿಳಿಸಬೇಕು. ಶಾಲಾ ಹಂತದಲ್ಲಿ ಮಕ್ಕಳಿಗೆ ತಂಬಾಕಿನ ನಿಷೇಧದ ಬಗ್ಗೆ ಅರಿವು ಮೂಡಿಸಬೇಕು. ಯುವ ಜನತೆ ಭವಿಷ್ಯತ್ತಿನಲ್ಲಿ ತಂಬಾಕು ಸೇವನೆಗಳಿಗೆ ಒಳಗಾಗದಂತೆ ಜಾಗೃತಿ ವಹಿಸಬೇಕು ಎಂದು ಸೂಚಿಸಿದರು.

ಜಿಪಂ ಉಪ ಕಾರ್ಯದರ್ಶಿ ಸರಸ್ವತಿ ಮಾತನಾಡಿ, ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿ ಮಂಡ್ಯ ಜಿಲ್ಲೆಯಲ್ಲಿ ತಂಬಾಕು ಮುಕ್ತ ಗ್ರಾಪಂ ಕಾರ್ಯಕ್ರಮ ಯಶಸ್ವಿಯಾಗಿವೆ. ಅದೇ ಮಾದರಿ ಜಿಲ್ಲೆಯಲ್ಲಿಯೂ ಸಹ ಗ್ರಾಪಂಗಳನ್ನು ತಂಬಾಕಿನಿಂದ ಮುಕ್ತಗೊಳಿಸುವಲ್ಲಿ ಕಾರ್ಯಯೋಜನೆ ರೂಪಿಸಲಾಗುವುದು ಎಂದರು.

ಜಿಲ್ಲಾ ಸರ್ವಲೆನ್ಸ್ ಅಧಿಕಾರಿ ಡಾ.ನಾಗರಾಜು ಮಾತನಾಡಿ, ಬೀಡಿ, ಸಿಗರೇಟ್, ಗುಟ್ಕಾದಂತಹ ತಂಬಾಕು ಉತ್ಪನ್ನ ಸೇವನೆಯಿಂದ ಪ್ರತಿವರ್ಷ ವಿಶ್ವದಲ್ಲಿ 70 ಲಕ್ಷ ಜನ ಸಾವಿಗೀಡಾಗುತ್ತಿದ್ದು, ಭಾರತದಲ್ಲಿ ಪ್ರತಿವರ್ಷ 9-10 ಲಕ್ಷ ಜನರು ಮರಣ ಹೊಂದುತ್ತಿದ್ದಾರೆ. ತಂಬಾಕು ಸೇವನೆ ಹಾಗೂ ಮಾರಾಟದ ಮೇಲೆ ನಿಯಂತ್ರಣ ಏರಿ ಮುಂದಿನ ಪೀಳಿಗೆಗೆ ಉತ್ತಮ ಜೀವನ ನೀಡಬೇಕಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾ ತಂಬಾಕು ನಿಯಂತ್ರಣ ಘಟಕ ಕಾರ್ಯೋನ್ಮುಖವಾಗಿದೆ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಎಂ.ವಿಶ್ವೇಶ್ವರಯ್ಯ, ನಗರಸಭೆ ಆಯುಕ್ತ ರಾಮ್‌ದಾಸ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕಿ ಸುಧಾ, ಇತರೆ ಜಿಲ್ಲಾ ಮಟ್ಟದ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಇದೇ ವೇಳೆ ರಾಜ್ಯ ತಂಬಾಕು ನಿಯಂತ್ರಣ ಘಟಕದಿಂದ ನಡೆಸಿದ ಕೋಟ್ಪಾ ಅನುಸರಣಾ ಸಮೀಕ್ಷಾ ವರದಿಯನ್ವಯ ಚಾಮರಾಜನಗರ ಜಿಲ್ಲೆ ಶೇ.95ರಷ್ಟು ಕೋಟ್ಪಾ 4,5,6,7,8,9 ಸೆಕ್ಷನ್‌ಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕೋಟ್ಪಾ ಉನ್ನತ ಅನುಷ್ಠಾನ ಜಿಲ್ಲೆಯಾಗಿ ಆಯ್ಕೆಯಾಗಿರುವ ಬಗ್ಗೆ ರಾಜ್ಯ ತಂಬಾಕು ನಿಯಂತ್ರಣ ಘಟಕವು ನೀಡಿರುವ ಪ್ರಶಂಸನಾ ಪ್ರಮಾಣ ಪತ್ರವನ್ನು ಜಿಲ್ಲಾಧಿಕಾರಿ ಸಿ.ಟಿ.ಶಿಲ್ಪಾನಾಗ್ ಅಧಿಕಾರಿಗಳಿಗೆ ವಿತರಿಸಿದರು.

ಸಮಿತಿ ರಚನೆಗೆ ಅರ್ಜಿ ಆಹ್ವಾನ

ಚಾಮರಾಜನಗರ, ಆ.11- ಡೇ ನಲ್ಮ್ ಅಭಿಯಾನದಡಿ ನಗರಸಭಾ ವ್ಯಾಪ್ತಿಯ ಬೀದಿಬದಿ ವ್ಯಾಪಾರಿಗಳ ಕುಂದು ಕೊರತೆ ನಿವಾರಣಾ ಸಮಿತಿ ರಚಿಸಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ನಗರಸಭೆ ಪೌರಾಯುಕ್ತರಿಗೆ 10 ದಿನಗಳೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಯೋಜನಾಧಿಕಾರಿ ವೆಂಕಟನಾಯ್ಕ ಮೊ: 7411811231 ಅನ್ನು ಸಂಪರ್ಕಿಸಿ.

ಅಂಬರ್‌ಗ್ರೀಸ್ ಸಾಗಿಸುತ್ತಿದ್ದ ಇಬ್ಬರ ಬಂಧನ



ಕೊಳ್ಳೇಗಾಲ, ಆ.11- ಅಕ್ರಮವಾಗಿ ಅಂಬರ್ ಗ್ರೀಸ್ (ತಿಮಿಂಗಿಲ ವಾಂತಿ) ಸಾಗಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಸಿಐಡಿ ಅರಣ್ಯ ಸಂಚಾರಿದಳದ ಪೊಲೀಸರು ಬಂಧಿಸಿದ್ದಾರೆ.

ಕಾರವಾರ ಜಿಲ್ಲೆ ಭಟ್ಕಳ ತಾಲೂಕಿನ ಶಿರಾಲಿ ಗ್ರಾಮದ ಆನಂದ ದೇವಡಿಗ(49), ಬಾಬು ಅಪ್ಪಣ್ಣನಾಯ್ಕ(49) ಬಂಧಿತ ಆರೋಪಿಗಳು. ಬಂಧಿತರಿಂದ 3.100 ಕೆಜಿ ಅಂಬರ್ ಗ್ರೀಸ್, ಮಾರುತಿ ಸುಜುಕಿ ಆಲ್ಟೋ ಕಾರು, 2 ಮೊಬೈಲ್, 5470 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

ಇವರಿಬ್ಬರು ಮೈಸೂರಿನಿಂದ ತಮಿಳುನಾಡಿಗೆ ಕೊಳ್ಳೇಗಾಲ ಮಾರ್ಗವಾಗಿ ಆಲ್ಟೋ ಕಾರಿ (ಕೆಎ.20, ಪಿ.6988)ನಲ್ಲಿ ಅಕ್ರಮವಾಗಿ ಅಂಬರ್ ಗ್ರೀಸ್ ಸಾಗಣೆ ಮಾಡುತ್ತಿದ್ದರು. ಈ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಅರಣ್ಯ ಸಂಚಾರಿ ದಳದ ಸಿಬ್ಬಂದಿ ತಾಲೂಕಿನ ಟಗರಪುರ ಗ್ರಾಮದ ಮುಖ್ಯ ರಸ್ತೆಯಲ್ಲಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ. ಈ ಸಂಬಂಧ ಎಂಎಫ್‌ಎಸ್ ಕಚೇರಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಬಂಧಿತರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಪೊಲೀಸ್ ಅರಣ್ಯ ಸಂಚಾರಿ ದಳದ (ಸಿಐಡಿ) ಸಬ್ ಇನ್ಸ್‌ಪೆಕ್ಟರ್ ವಿಜಯರಾಜ್, ಮುಖ್ಯ ಪೇದೆಗಳಾದ ಬಸವರಾಜು, ರಾಮಚಂದ್ರ, ಶಂಕರ್, ಸ್ವಾಮಿ, ಚಾಲಕ ಪ್ರಭಾಕರ್, ಪೇದೆ ಬಸವರಾಜು ಇನ್ನಿತರರಿದ್ದರು.

ಚಾಲಕನ ನಿಯಂತ್ರಣ ತಪ್ಪಿ ಲಾರಿ ಪಲ್ಟಿ



ಚಾಮರಾಜನಗರ, ಆ.11- ಚಾಲಕನ ನಿಯಂತ್ರಣ ತಪ್ಪಿದ ಲಾರಿ ಪಲ್ಟಿಯಾಗಿರುವ ಘಟನೆ ನಗರದ ಡೀವಿಯೇಷನ್ ರಸ್ತೆಯಲ್ಲಿರುವ ಎಂ.ಡಿ.ಲಾಡ್ಜ್ ತಿರುವಿನಲ್ಲಿ ಶುಕ್ರವಾರ ನಡೆದಿದೆ. ಅದೃಷ್ಟವಶಾತ್ ಚಾಲಕ, ಕ್ಲೀನರ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೈಸೂರಿನಿಂದ ತಮಿಳುನಾಡಿಗೆ ಸೋಲಾರ್ ಪ್ಲೇಟ್‌ಗಳನ್ನು ತುಂಬಿಕೊಂಡು ಹೋಗುವಾಗ ಈ ಅವಘಡ ಸಂಭವಿಸಿದೆ. ಚಾಲಕ ಮತ್ತು ಕ್ಲೀನರ್ ಲಾರಿಯಿಂದ ಹೊರಕ್ಕೆ ಜಿಗಿದು ಪ್ರಾಣ ಉಳಿಸಿಕೊಂಡಿದ್ದಾರೆ. ಅಪಘಾತದಿಂದ ಕೆಲಕಾಲ ಸಂಚಾರ ದಟ್ಟಣೆ ಉಂಟಾಗಿತ್ತು. ಪೊಲೀಸರು ವಾಹನವನ್ನು ತೆರವುಗೊಳಿಸಿದ್ದಾರೆ.

ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ಸ್ಪಂದನಾ ಅಸ್ಥಿ ವಿಸರ್ಜನೆ

ಪತಿ, ನಟ ವಿಜಯ್ ರಾಘವೇಂದ್ರ, ಪುತ್ರ ಶೌರ್ಯನಿಂದ ವಿಧಿವಿಧಾನ



ಶ್ರೀರಂಗಪಟ್ಟಣ, ಆ.11- ಇತ್ತೀಚೆಗೆ ನಿಧನರಾದ ಖ್ಯಾತ ಚಲನಚಿತ್ರ ನಟ ವಿಜಯ ರಾಘವೇಂದ್ರ ಪತ್ನಿ ಸ್ಪಂದನಾ ಅವರ ಅಸ್ಥಿಯನ್ನು ಪಟ್ಟಣದ ಹೊರವಲಯದ ಸ್ನಾನಘಟ್ಟದಲ್ಲಿ ಶುಕ್ರವಾರ ಕುಟುಂಬದವರ ಸಮ್ಮುಖದಲ್ಲಿ ವಿವಿಧ ಪೂಜಾ ವಿಧಿವಿಧಾನ ನೆರವೇರಿಸಿ ವಿಸರ್ಜಿಸಲಾಯಿತು.

ಕಳೆದ ಸೋಮವಾರ ಬ್ಯಾಂಕಾಕ್ ಪ್ರವಾಸದಲ್ಲಿದ್ದ ವೇಳೆ ಹೃದಯಾಘಾತದಿಂದ ಮೃತಪಟ್ಟಿದ್ದ ಸ್ಪಂದನಾ ಅವರ ಅಂತ್ಯಕ್ರಿಯೆಯನ್ನು ಬುಧವಾರ ನೆರವೇರಿಸಲಾಗಿತ್ತು. ಈ ನಿಟ್ಟಿನಲ್ಲಿ ಸ್ಪಂದನಾ ಅವರ ಅಸ್ಥಿವಿಸರ್ಜನೆ ಕಾರ್ಯವನ್ನು ಅಂತ್ಯಕ್ರಿಯೆ ನೆರವೇರಿಸಿದ ಮೂರನೇ ದಿನವಾದ ಇಂದು ಶ್ರೀರಂಗಪಟ್ಟಣದ ಕಾವೇರಿ ನದಿಯಲ್ಲಿ ನೆರವೇರಿಸಲಾಯಿತು. ವೈದಿಕ ರಮೇಶ್ ಶರ್ಮಾ ನೇತೃತ್ವದಲ್ಲಿ ಸ್ಪಂದನಾ ಪತಿ ನಟ ವಿಜಯ ರಾಘವೇಂದ್ರ, ಪುತ್ರ ಶೌರ್ಯ ಅಸ್ಥಿ ವಿಸರ್ಜನೆ ಕಾರ್ಯ ಹಾಗೂ ಪೂಜಾ ವಿಧಿವಿಧಾನ ನೆರವೇರಿಸಿದರು. ಪವಿತ್ರ ಕಾವೇರಿ ನದಿಯಲ್ಲಿ ಅಸ್ಥಿ ವಿಸರ್ಜಿಸಿ ಸದ್ಗತಿಗಾಗಿ ಪ್ರಾರ್ಥನೆ ಸಲ್ಲಿಸಿದ ಕುಟುಂಬಸ್ಥರು, ಇದಕ್ಕೂ ಮುನ್ನ ಪುತ್ರ ಶೌರ್ಯನಿಗೆ ಮುಡಿ ಕೊಡಿಸಿ, ಹೋಮ ನೆರವೇರಿಸಿದರು. ನಕ್ಷತ್ರ ಹೋಮ, ಅಸ್ಥಿ ನಾರಾಯಣ ಪೂಜೆ, ಅಭಿಷೇಕ ನಂತರ ಅಸ್ಥಿ ವಿಸರ್ಜನೆ ಮಾಡಲಾಯಿತು. ಕಾವೇರಿ ನದಿ ಬಳಿಯ ಸ್ನಾನಘಟ್ಟ ಬಳಿ ವಿಧಿ ವಿಧಾನ ಜರುಗಿದವು.

ಅಸ್ಥಿ ತುಂಬಿದ ಕುಡಿಕೆ ಹಿಡಿದು ದುಃಖದಲ್ಲೇ ಆಗಮಿಸಿದ ವಿಜಯ್ ರಾಘವೇಂದ್ರ ಹಾಗೂ ಇಡೀ ಕುಟುಂಬಸ್ಥರು ಅಸ್ಥಿ ಬಿಟ್ಟು, ಪಿಂಡ ಪ್ರದಾನ ಮಾಡಿ, ಮೃತ ಸ್ಪಂದನಾಗೆ ಮೋಕ್ಷ ಸಿಗಲಿ ಎಂದು ಪ್ರಾರ್ಥಿಸಿದರು. ಬಳಿಕ ವಿಧಿವಿಧಾನ ನೆರವೇರಿಸಿದ ಅರ್ಚಕ ರಮೇಶ್ ಶರ್ಮಾ ಮಾತನಾಡಿ, ಉತ್ತರಭಾದ್ರ ನಕ್ಷತ್ರದಲ್ಲಿ ಸ್ಪಂದನಾ ನಿಧನ ಹಿನ್ನೆಲೆಯಲ್ಲಿ ದೋಷ ಪರಿಹಾರಕ್ಕಾಗಿ ಧನಿಷ್ಠ ಪಂಚಕ ನಕ್ಷತ್ರ ಹೋಮ ಮಾಡಿದ್ದು, ಬೊಂಬೆಗೆ ಪ್ರೇತಾ ಆವಾಹನೆ ಮಾಡಿಕೊಂಡು ಬಲಿ ಪ್ರಧಾನ ಮಾಡಲಾಗಿದೆ. ಬಳಿಕ ಅಸ್ಥಿಗೆ ಅಭಿಷೇಕ, ಷೋಡಶ ಪೂಜೆ ಮಾಡಿ ಅಸ್ಥಿ ವಿಸರ್ಜನೆ ಮಾಡಲಾಯಿತು. ದೋಷ ಹಿನ್ನೆಲೆ ಮನೆಯಲ್ಲೇ ಮೃತರಾಗಿದ್ದರೆ ಮನೆಯಲ್ಲಿ ಗೂಡು ಹಾಕಿ, ಮನೆ ಬಿಡಬೇಕಿತ್ತು. ಮನೆಯಿಂದ ಹೊರಗಡೆ ಮೃತರಾದ ಹಿನ್ನೆಲೆಯಲ್ಲಿ ನಕ್ಷತ್ರ ಹೋಮ ಮಾಡಲಾಗಿದೆ ಎಂದು ವಿವರಿಸಿದರು.

ಈ ಸಂದರ್ಭ ವಿಜಯ ರಾಘವೇಂದ್ರ ಸಹೋದರ ಹಾಗೂ ನಟ ಶ್ರೀಮುರುಳಿ, ತಂದೆ ಚನ್ನೇಗೌಡ, ಸ್ಪಂದನಾ ತಂದೆ ಬಿ.ಕೆ.ಶಿವರಾಂ, ಚಿಕ್ಕಪ್ಪ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಸೇರಿದಂತೆ ವಿಜಯರಾಘವೇಂದ್ರ ಹಾಗೂ ಬಿ.ಕೆ.ಶಿವರಾಂ ಕುಟುಂಬ ವರ್ಗ ಉಪಸ್ಥಿತರಿದ್ದರು.

ಮಂಡ್ಯ: ಸಚಿವ ಚಲುವರಾಯಸ್ವಾಮಿ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಧರಣಿ



ಮಂಡ್ಯ, ಆ.11- ಕೃಷಿ ಇಲಾಖೆ ಅಧಿಕಾರಿಗಳಿಗೆ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ರಾಜೀನಾಮೆಗೆ ಆಗ್ರಹಿಸಿ ಬಿಜೆಪಿ ಕಾರ್ಯಕರ್ತರು ಮಂಡ್ಯದಲ್ಲಿ ಅಹೋರಾತ್ರಿ ಧರಣಿ ಆರಂಭಿಸಿದರು.

ಜಿಲ್ಲಾ ಬಿಜೆಪಿ ಘಟಕದ ಆಶ್ರಯದಲ್ಲಿ ನಗರದ ಸರ್ ಎಂ.ವಿಶ್ವೇಶ್ವರಯ್ಯ ಪ್ರತಿಮೆ ಎದುರು ಕಾರ್ಯಕರ್ತರು 'ಪೇಸಿಎಸ್' ಪೋಸ್ಟರ್ ಹಿಡಿದು ಧರಣಿ ನಡೆಸಿ, ಸರ್ಕಾರ ಮತ್ತು ಭ್ರಷ್ಟ ಸಚಿವರ ವಿರುದ್ಧ ಧಿಕ್ಕಾರ ಕೂಗಿ ರಾಜೀನಾಮೆಗೆ ಆಗ್ರಹಿಸಿದರು. ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಜಿಲ್ಲೆಯ ಜಂಟಿ ಕೃಷಿ ನಿರ್ದೇಶಕರ ಮೂಲಕ ಪ್ರತಿ ತಾಲೂಕಿನ ಸಹಾಯಕ ಕೃಷಿ ಅಧಿಕಾರಿಗಳಿಂದ 6 ರಿಂದ 8 ಲಕ್ಷ ರೂ. ಲಂಚ ಸಂಗ್ರಹಿಸಲು ಸೂಚಿಸಿದ್ದರ ವಿರುದ್ಧ ರಾಜ್ಯಪಾಲರಿಗೆ ಅಧಿಕಾರಿಗಳು ಪತ್ರ ಬರೆದು ದೂರು ಸಲ್ಲಿಸಿದ್ದಾರೆ. ಸಚಿವರು ಅಧಿಕಾರಿಗಳ ಬಳಿ ಸುಲಿಗೆಗೆ ನಿಂತಿದ್ದು, ಅಷ್ಟೇ ಅಲ್ಲದೆ ಲಂಚದ ಹಣಕ್ಕಾಗಿ ಕಿರುಕುಳ ನೀಡುವ ಮಟ್ಟಕ್ಕೆ ಹೋಗಿರುವುದರಿಂದ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಪತ್ರದಲ್ಲಿ ತಿಳಿಸಿದ್ದಾರೆ. ಪ್ರಕರಣ ಗಂಭೀರವಾಗಿದ್ದು, ತುರ್ತು ಕ್ರಮ ವಹಿಸದಿದ್ದರೆ ಆಡಳಿತ ವ್ಯವಸ್ಥೆ ಮೇಲೆ ಪರಿಣಾಮ ಬೀರಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈಗಾಗಲೇ ಪ್ರಕರಣ ಕುರಿತು ಸಿಐಡಿ ತನಿಖೆ ನಡೆಯುತ್ತಿದೆ. ಚಲುವರಾಯಸ್ವಾಮಿ ಆರೋಪ ಮುಕ್ತರಾಗುವವರೆಗೂ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಗೆ ಸಹಕಾರ ನೀಡಬೇಕು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಗುತ್ತಿಗೆದಾರ ಆತ್ಮಹತ್ಯೆ ಮಾಡಿಕೊಂಡ ಸಂದರ್ಭ ಸಚಿವರಾಗಿದ್ದ ಕೆ.ಎಸ್.ಈಶ್ವರಪ್ಪ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿ ತನಿಖೆಗೆ ಸಹಕಾರ ನೀಡಿದ್ದನ್ನು ಕಾಂಗ್ರೆಸ್ ಸರ್ಕಾರದ ಸಚಿವರು ನೆನೆಯಬೇಕು. ಸಚಿವರಾಗಿರುವ ಕಾರಣ ತನಿಖೆ ನಿಷ್ಪಕ್ಷಪಾತವಾಗಿ ನಡೆಯಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ತಕ್ಷಣ ಚಲುವರಾಯಸ್ವಾಮಿ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಬಿಜೆಪಿ ಮುಖಂಡರಾದ ಎ.ಎಲ್.ಚೇತನ್‌ಗೌಡ, ಶ್ರೀಧರ್, ಶಿವಕುಮಾರ್ ಆರಾಧ್ಯ, ಸಿ.ಟಿ.ಮಂಜುನಾಥ್, ವಿವೇಕ್, ಮಂಜುನಾಥ್, ಶಿವಲಿಂಗಯ್ಯ, ನಿತ್ಯಾನಂದ, ಸುರೇಶ್, ವಸಂತಕುಮಾರ್ ಸೇರಿದಂತೆ ನೂರಾರು ಮಂದಿ ಭಾಗವಹಿಸಿದ್ದರು.

ಸೊಳ್ಳೆಗಳ ನಿಯಂತ್ರಣದಲ್ಲಿ ಜನರ ಪಾತ್ರ ಮುಖ್ಯ: ಶಾಸಕ ರವಿಕುಮಾರ್



ಮಂಡ್ಯ, ಆ.11- ಜನರು ಸೊಳ್ಳೆಗಳ ನಿಯಂತ್ರಣದಲ್ಲಿ ಮುತುವರ್ಜಿ ವಹಿಸದಿದ್ದರೆ, ಸೊಳ್ಳೆಗಳ ನಿಯಂತ್ರಣ ಅಸಾಧ್ಯವಾಗುತ್ತದೆ. ಹಾಗಾಗಿ ಸೊಳ್ಳೆಗಳ ನಿಯಂತ್ರಣದಲ್ಲಿ ಜನರ ಪಾತ್ರ ಅತಿ ಮುಖ್ಯವಾಗಿದೆ ಎಂದು ಶಾಸಕ ಗಣಿಗ ರವಿಕುಮಾರ್ ತಿಳಿಸಿದರು.

ಶುಕ್ರವಾರ ಜಿಲ್ಲಾಡಳಿತ, ಜಿಪಂ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ರಾಷ್ಟ್ರೀಯ ಡೆಂಗ್ಯೂ ದಿನಾಚರಣೆ ಪ್ರಯುಕ್ತ ಸಂಜಯ ವೃತ್ತದಲ್ಲಿ ಡೆಂಗ್ಯೂ ದಿನಾಚರಣೆ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸೊಳ್ಳೆಗಳ ನಿಯಂತ್ರಣಕ್ಕೆ ಜನರಲ್ಲಿ ಜಾಗೃತಿ ಮೂಡಬೇಕು. ಮನೆ ಅಕ್ಕಪಕ್ಕದಲ್ಲಿ ನೀರು ನಿಲ್ಲದಿರುವಂತೆ ನೋಡಿಕೊಂಡಾಗ ಸೊಳ್ಳೆ ಉತ್ಪತ್ತಿಯಾಗಲ್ಲ. ಜನರು ಕೂಡ ಆಡಳಿತ ವರ್ಗದವರ ಜತೆ ಕೈಜೋಡಿಸಬೇಕು ಆವಾಗ ಮಾತ್ರ ಡೆಂಗ್ಯೂ ನಿಯಂತ್ರಣ ಮಾಡಬಹುದು ಎಂದರು.

ಜಿಪಂ ಸಿಇಓ ಶೇಕ್ ತನ್ವೀರ್ ಆಸಿಫ್ ಮಾತನಾಡಿ, ಸೊಳ್ಳೆಗಳ ಜೀವನ ಚಕ್ರವಾದ ಲಾರ್ವಾ ಉತ್ಪತ್ತಿಯಾಗುವ ಸ್ಥಳಗಳನ್ನು ಗುರುತಿಸುವ ಕಾರ್ಯ ನಿರಂತರವಾಗಿ ನಡೆಯುತ್ತದೆ. ಲಾರ್ವಾ ಉತ್ಪತ್ತಿಯಾಗುವ ಸ್ಥಳಗಳಲ್ಲಿ ಜಾಗೃತಿ ಮೂಡಿಸಿ ಜನರಲ್ಲಿ ಅರಿವು ಮೂಡಿಸಲಾಗುವುದು. ಜಿಲ್ಲೆಯಲ್ಲಿ 78 ಡೆಂಗ್ಯೂ ಪ್ರಕರಣಗಳು ಇದ್ದು, ಇದು ರಾಜ್ಯ ಸರಾಸರಿಯಲ್ಲಿ ಕಡಿಮೆ ಪ್ರಮಾಣದಲ್ಲಿ ಮಂಡ್ಯ ಜಿಲ್ಲೆ ಇದೆ. ಸಂಪೂರ್ಣವಾಗಿ ಡೆಂಗ್ಯೂ ಮುಕ್ತವಾಗಿ ಮಾಡಬೇಕಿದೆ ಸಾರ್ವಜನಿಕ ಸಹಕಾರ ಮುಖ್ಯ ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮೋಹನ್ ಮಾತನಾಡಿ, ಡೆಂಗ್ಯೂ ನಿಯಂತ್ರಣವನ್ನು ತಡೆಗಟ್ಟುವ ನಿಟ್ಟಿನಲ್ಲಿ ತಿಂಗಳಿನಲ್ಲಿ ಎರಡು ದಿನ ಮೊದಲನೇ ಶುಕ್ರವಾರ ಮತ್ತು ಎರಡನೇ ಶುಕ್ರವಾರ ನಗರದಲ್ಲಿ ಲಾರ್ವಾ ಸರ್ವೆ ನಡೆಯಲಿದೆ. ಸೊಳ್ಳೆಗಳ ನಿಯಂತ್ರಣಕ್ಕೆ ಜನರು ಸ್ವಯಂ ರಕ್ಷಣಾ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು ಎಂದು ಅವರು ತಿಳಿಸಿದರು. ಜಾಥಾದಲ್ಲಿ ಆರೋಗ್ಯ ಇಲಾಖೆಯ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಇದ್ದರು.